
ಅಭಿನವಚಂದ್ರ ವಿರಚಿತ

ಅಶ್ವಶಾಸ್ತ್ರ

ಸಂಪಾದಕ

ಜಿ. ಜಿ. ಮಂಜುನಾಥನ್

ಕನ್ನಡ ಅಧ್ಯಯನ ಸಂಸ್ಥೆ :: ಮೈಸೂರು ವಿಶ್ವವಿದ್ಯಾನಿಲಯ





ಕನ್ನಡ ಅಧ್ಯಯನ ಸಂಸ್ಥೆ ಪ್ರಕಟನೆ-೪೭೬

ಪ್ರಾಚ್ಯ ಕಾವ್ಯಮಾಲೆ-೧೦೩

ಪ್ರಧಾನ ಸಂಪಾದಕ

ಡಾ. ಎಚ್. ತಿಪ್ಪೇರುದ್ರಸ್ವಾಮಿ

ವಿಭಾಗ ಸಂಪಾದಕ

ಬಿ. ಎಸ್. ಸಣ್ಣಯ್ಯ

ಅಭಿನವಚಂದ್ರ ವಿರಚಿತ

ಅಶ್ವಶಾಸ್ತ್ರ

ಅಭಿನವಚಂದ್ರ ವಿರಚಿತ

ಅಶ್ವಶಾಸ್ತ್ರ

ಸಂಪಾದಕ

ಜಿ. ಜಿ. ಮಂಜುನಾಥನ್

ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
1987

ASHVASHASTRA of Abhinavachandra ; edited by G. G. Manjunathan ; published by The Institute of Kannada Studies, University of Mysore, Manasa Gangotri, Mysore - 570 006. First edition 1987 Pp x + 46 + 290,

ಬೆಲೆ : ರೂ. **30-00**

ಮಾರಾಟ : ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-570 006
ಮುದ್ರಣ : ಶ್ರೀ ರಾಘವೇಂದ್ರ ಪ್ರಿಂಟರ್ಸ್, ಮೈಸೂರು.

ಮುನ್ನುಡಿ

1966ರ ಕೊನೆಯಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ಸ್ಥಾಪನೆಯಾದಾಗ ಪ್ರಾಚ್ಯ ಸಂಶೋಧನಾಲಯದಲ್ಲಿದ್ದ ಕನ್ನಡ ಹಸ್ತಪ್ರತಿಗಳ ಮತ್ತು ಗ್ರಂಥಗಳ ವಿಭಾಗವನ್ನು ಅಧ್ಯಯನ ಸಂಸ್ಥೆಯ ಒಂದು ವಿಭಾಗವನ್ನಾಗಿಸಿ ಸಂಪಾದನ ವಿಭಾಗವೆಂಬ ಹೆಸರನ್ನು ಕೊಡಲಾಯಿತು. ಈ ವಿಭಾಗದಲ್ಲಿ ಅತ್ಯಂತ ಪ್ರಾಚೀನ ಹಸ್ತಪ್ರತಿಯಿಂದ ಹಿಡಿದು ಇತ್ತೀಚಿನ ಹಸ್ತಪ್ರತಿಗಳವರೆಗೆ ಸುಮಾರು 10,000 ಹಸ್ತಪ್ರತಿಗಳಿದ್ದು ಇದು ನಮ್ಮ ನಾಡಿನ ಸುಸಜ್ಜಿತ ಹಸ್ತಪ್ರತಿಭಂಡಾರಗಳಲ್ಲಿ ಒಂದೆನಿಸಿಕೊಂಡಿದೆ. ಹೊಸ ಹಸ್ತಪ್ರತಿಗಳ ಶೋಧನೆ ಮತ್ತು ಸೇರ್ಪಡೆಗಳ ವಿಷಯದಲ್ಲಿ ಮಾತ್ರವಲ್ಲದೆ ಹಸ್ತಪ್ರತಿಗಳ ಸಂರಕ್ಷಣೆಗೆ ಅಗತ್ಯವಾದ ಏರ್ಪಾಟುಗಳನ್ನು ಮಾಡುವ ವಿಷಯದಲ್ಲಿಯೂ ಸಂಸ್ಥೆ ಎಚ್ಚರವಹಿಸಿದೆ. ಶುದ್ಧೀಕರಣ ಮತ್ತು ತೈಲ ಲೇಪನ ಹಾಗೂ ಪ್ರಥೂಮನ ಉಪಚಾರಗಳನ್ನು ಕೈಗೊಂಡಿರುವುದು ಮಾತ್ರವಲ್ಲದೆ, ಮೈಕ್ರೋಫಿಲಂಗಳ ರೂಪದಲ್ಲಿ ಅವುಗಳನ್ನು ಕಾಯ್ದಿರಿಸಲೂ ಕ್ರಮ ಕೈಗೊಳ್ಳಲಾಗಿದೆ. ಸಂಸ್ಥೆಯಲ್ಲಿ ಇರುವ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯನ್ನು (9 ಸಂಪುಟಗಳು) ಹೊರತಂದಿರುವುದಲ್ಲದೆ ಮೈಕ್ರೋಫಿಲಂಗಳ ಸೂಚಿಯನ್ನೂ ಸಿದ್ಧಪಡಿಸಲಾಗಿದೆ.

ಸಂಸ್ಥೆಯ ಸಂಪಾದನ ವಿಭಾಗದ ಸಂಶೋಧನ ಸಹಾಯಕರು ಹಾಗೂ ಅಧಿಕಾರ ವರ್ಗದವರು ವ್ಯವಸ್ಥಿತ ಯೋಜನೆಯ ಅಂಗವಾಗಿ ಶಾಸ್ತ್ರೀಯವಾಗಿ ಸಂಪಾದಿಸಿ ಈ ಹಸ್ತಪ್ರತಿಗಳನ್ನು ಪ್ರಕಟಿಸುತ್ತ ಬಂದಿದ್ದಾರೆ. ಇಲ್ಲಿಯ ಹಸ್ತಪ್ರತಿಗಳನ್ನು ಬಳಸಿಕೊಂಡು ಇತರ ವಿದ್ವಾಂಸರು ಸಂಪಾದಿಸಿದ ಗ್ರಂಥಗಳನ್ನೂ ಸಂಸ್ಥೆ ಪ್ರಕಟಿಸಿದೆ. ಹೀಗೆ ಅಧ್ಯಯನ ಸಂಸ್ಥೆ ಹೊರತರುತ್ತಿರುವ ಗ್ರಂಥಗಳ ಸಂಖ್ಯೆ ನೂರರ ಗಡಿಯನ್ನು ದಾಟಿದೆ ಎಂಬುದು ಸಂತೋಷದ ಸಂಗತಿ. ಸಂಖ್ಯೆಯ ದೃಷ್ಟಿಯಿಂದ ಮಾತ್ರವಲ್ಲದೆ, ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದಲೂ ಮಹತ್ವದ ಕೆಲಸ ಇದು. ಈಗ ಪ್ರಮುಖವಾಗಿ ಅಪ್ರಕಟಿತ ಕೃತಿಗಳನ್ನೇ ಅವುಗಳ ಕಾಲಾನುಕ್ರಮಕ್ಕೆ ಅನುಗುಣವಾಗಿ ಪ್ರಕಟಿಸುವ ಕ್ರಮವನ್ನು ಕೈಗೊಂಡಿದೆ. ಕೃತಿಗಳ ಗುಣಾವಗುಣಗಳು ಏನೇ ಇರಲಿ, ಅವು ಅಜ್ಞಾತವಾಸದಿಂದ ಹೊರಬರಬೇಕಾಗಿರುವುದು ಮೊದಲು ಆಗಬೇಕಾಗಿರುವ ಕಾರ್ಯ. ಮುಂದೆ ಹೆಚ್ಚಿನ ಪ್ರತಿಗಳು ಲಭಿಸಿದಾಗ ಹಾಗೂ ಹೊಸ ಶೋಧನೆ–ಸಂಶೋಧನೆಗಳ ಬೆಳಕಿನಲ್ಲಿ ಅಗತ್ಯವಾದ ಪರಿಷ್ಕರಣಕಾರ್ಯವನ್ನು ಕೈಗೊಳ್ಳಬಹುದಾಗಿದೆ. ಒಟ್ಟಿನಲ್ಲಿ ವಿದ್ವಾಂಸರಿಗೆ ಸಾಹಿತ್ಯಾಸಕ್ತರಿಗೆ ಸಂಶೋಧಕರಿಗೆ ಆಕರಸಾಮಗ್ರಿಯನ್ನು ಒದಗಿಸುವ ಮೂಲಭೂತ ಕಾರ್ಯವನ್ನು ನೆರವೇರಿಸಿದಂತಾಗುತ್ತದೆ ಎಂಬುದು ಸಮಾಧಾನದ ಸಂಗತಿ.

ಈ ವಿಭಾಗದ ಅನೇಕ ಪ್ರಕಟಣೆಗಳು ಈ ವಿಷಯಕ್ಕೆ ಮೀಸಲಾಗಿರುವ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನಗಳನ್ನು ಗಳಿಸಿವೆ ಎಂಬುದು ಈ ವಿಭಾಗದ ಅಚ್ಚುಕಟ್ಟಾದ ಹಾಗೂ ಶಾಸ್ತ್ರೀಯವಾದ ಕಾರ್ಯನಿರ್ವಹಣೆಗೆ ಸಾಕ್ಷಿಯಾಗಿದೆ. ಶ್ರದ್ಧೆ ಉತ್ಸಾಹಗಳಿಂದ ಈ ಸಾಧನೆಯನ್ನು ತಮ್ಮದಾಗಿಸಿಕೊಂಡಿರುವ ಸಂಪಾದನ ವಿಭಾಗದ ಕಾಯಕರ್ತರಿಗೆ ನಮ್ಮ ವಿಶೇಷ ಅಭಿನಂದನೆಗಳು.

ಈಗ ಪ್ರಕಟವಾಗುತ್ತಿರುವ ಅಭಿನವ ಚಂದ್ರನ ಅಶ್ವಶಾಸ್ತ್ರ ಸಂಪಾದಕ ವಿಭಾಗದ 103 ನೆಯ ಕೃತಿ. ಕಾರ್ಯನಿರ್ವಾಹಕ ಉಪ ನಿರ್ದೇಶಕರಾಗಿರುವ ಶ್ರೀ ಬಿ. ಎಸ್. ಸಣ್ಣಯ್ಯ ಅವರ ದಕ್ಷ ನೇತೃತ್ವದಲ್ಲಿ ಇದನ್ನು ಶಾಸ್ತ್ರೀಯವಾಗಿ ಸಂಪಾದಿಸಿಕೊಟ್ಟಿರುವವರು ಈ ವಿಭಾಗದಲ್ಲಿ ಸಂಶೋಧನ ಸಹಾಯಕರಾಗಿರುವ ಶ್ರೀ ಜಿ.ಜಿ. ಮಂಜುನಾಥನ್. ಈ ಎಲ್ಲ ಮಿತ್ರರಿಗೂ, ಮುದ್ರಣ ಕಾರ್ಯದಲ್ಲಿ ಸಹಕರಿಸಿರುವ ಶ್ರೀ ರಾಘವೇಂದ್ರ ಮುದ್ರಣಾಲಯದವರಿಗೂ ವಂದನೆಗಳು.

ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು.

ಎಚ್. ತಿಪ್ಪೇರುದ್ರಸ್ವಾಮಿ
ಪ್ರಧಾನ ಸಂಪಾದಕ

ವಿಭಾಗ ಸಂಪಾದಕರ ಮಾತು

ಕನ್ನಡ ಸಾಹಿತ್ಯದಲ್ಲಿ ದೊರೆಯುವ ಶಾಸ್ತ್ರಗ್ರಂಥಗಳ ಸಂಖ್ಯೆ ಬಹು ಕಡಮೆ ದೊರೆಯುವ ಬೆರಳೆಣಿಕೆಯಷ್ಟು ಗ್ರಂಥಗಳ ಹಸ್ತಪ್ರತಿಗಳೂ ಕೂಡ ಸರಿಯಾದ ಸ್ಥಿತಿಯಲ್ಲಿ ಮೂಲಕ್ಕೆ ಸರಿಸಮನಾಗಿದೆ ಎಂದು ಹೇಳಬಹುದಾದಂತಹರೀತಿಯಲ್ಲಿ ದೊರೆಯುವುದು ಅಪರೂಪವಾಗಿದೆ. ಜಾತಕತಿಲಕ, ಸೌಂದರ್ಯಲಹರಿ, ಲೋಕೋಪಕಾರ ಮೊದಲಾದ ಕೃತಿಗಳ ಹಸ್ತಪ್ರತಿಗಳು ಇದ್ದುದರಲ್ಲಿ ಉತ್ತಮವಾಗಿವೆ. ಆದರೆ ಜಗದ್ದಳ ಸೋಮನಾಥನ ಕಲ್ಯಾಣಕಾರಕದಂತಹ ಕೃತಿಗಳ ಹಸ್ತಪ್ರತಿಗಳು ದೊರೆತರೂ, ಅವುಗಳು ಒಂದೊಂದೂ ಒಂದೊಂದು ರೀತಿಯಾಗಿದ್ದು ಯಾವೊಂದು ಹಸ್ತಪ್ರತಿಯೂ ಸಮಗ್ರವಾಗಿ, ಸಹಜ ಸ್ವರೂಪವೆಂದು ಹೇಳಬಹುದಾದಂತಹ ಸ್ಥಿತಿಯಲ್ಲಿ ದೊರೆಯುತ್ತಿಲ್ಲ. ಇದಕ್ಕೆ ಶಾಸ್ತ್ರಗ್ರಂಥಗಳ ಪ್ರತಿಕಾರರು ಇಲ್ಲವೆ ಪ್ರತಿ ಮಾಡಿಸಿಕೊಳ್ಳುವವರು ತಮಗೆ ತಿಳಿದಂತಹ ಬೇರೆ ವಿಷಯಗಳನ್ನು ಮೂಲಪ್ರತಿಗಳಲ್ಲಿ ಅಡಕಗೊಳಿಸಲು ಪ್ರಯತ್ನಿಸುವುದು ಮುಖ್ಯ ಕಾರಣವಾಗಿದೆ.

ಆದರೆ ಇಂತಹ ಶಾಸ್ತ್ರಗ್ರಂಥಗಳು ಜನತೆಗೆ ಹೆಚ್ಚು ಉಪಯೋಗಕರವಾಗಿರುವುದರಿಂದ ದೊರೆಯುವ ಹಸ್ತಪ್ರತಿಗಳ ಸಹಾಯದಿಂದಲೇ ಅವುಗಳನ್ನು ಪರಿಷ್ಕರಿಸಿ ಪ್ರಕಟಿಸುವುದು ಅನಿವಾರ್ಯವಾಗಿದೆ. ಅಂತೆಯೇ ಜಾತಕತಿಲಕ, ಸೌಂದರ್ಯಲಹರಿ, ಸೂಪಶಾಸ್ತ್ರ, ಸಕಲವೈದ್ಯ ಸಂಹಿತಾ ಸಾರಾರ್ಣವ ಮೊದಲಾದುವು ಈಗಾಗಲೆ ಪ್ರಕಟವಾಗಿವೆ. ಇವುಗಳಲ್ಲಿ ಕೆಲವು ಮೂರು ನಾಲ್ಕು ಮರು ಮುದ್ರಣಗಳನ್ನು ಕಂಡಿರುವುದು ಇವುಗಳ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಇವುಗಳ ಜತೆಗೆ ಹೊಸತಾಗಿ ಸೇರ್ಪಡೆಯಾಗುತ್ತಿರುವ ಅಭಿನವಚಂದ್ರನ ಅಶ್ವಶಾಸ್ತ್ರ ಕುದುರೆಗಳ ಬಗೆಗೆ ಹೆಚ್ಚು ವಿಷಯ ತಿಳಿಯಬೇಕೆನ್ನುವ ಆಸಕ್ತರಿಗೆ ಅತ್ಯಂತ ಉಪಯುಕ್ತವಾಗಿದೆ.

ಕವಿಚರಿತೆಕಾರರು ಅಭಿನವಚಂದ್ರನ ಕಾಲವನ್ನು ಸು. ೧೪೦೦ ಎಂದು ನಿರ್ಣಯಿಸಿದ್ದಾರೆ. ಪ್ರಸ್ತುತ ಸಂಪಾದಕರು ದೊರೆತ ಆಧಾರಗಳಿಂದ ಈ ಕಾಲವನ್ನು ಸು. ಕ್ರಿ.ಶ. ೧೧೭೦ ರಿಂದ ೧೨೦೦ ಎಂದು ತರ್ಕಿಸಿದ್ದಾರೆ. ಒಟ್ಟಿನಲ್ಲಿ ಪ್ರಾಚೀನ ಗ್ರಂಥವಾದ ಈ ಕೃತಿಯಲ್ಲಿ ಕುದುರೆಗಳ ಹುಟ್ಟು, ಬೆಳವಣಿಗೆ, ಬಣ್ಣ, ಧ್ವನಿ, ಸುಳಿ ಮೊದಲಾದ ಎಲ್ಲ ಲಕ್ಷಣಗಳ ವಿವಿಧ ಸ್ವರೂಪಗಳನ್ನು ಕಾಣಬಹುದಾಗಿದೆ. ಒಳ್ಳೆಯ ಮತ್ತು ಕೆಟ್ಟ ಲಕ್ಷಣಗಳಾವುವು ? ಅವುಗಳಿಂದಾಗುವ ಪ್ರಯೋಜನಗಳೇನು ? ಎಂಬ ಬಗೆಗೆ ಕೊಡುವ ಮಾಹಿತಿ ಹಯಶಾಸ್ತ್ರದಲ್ಲಿ ಆಸಕ್ತರಾದ ಜನರಿಗೆ ಅಮೂಲ್ಯವಾಗಬಹುದು.

ಇಲ್ಲಿ ಕೊಟ್ಟಿರುವ ವಿವರಣೆಗಳ ಬಗೆಗೆ ಅಭಿಪ್ರಾಯ ಭೇದವಿರಬಹುದು. ಯಾವುದೇ ಗ್ರಂಥದಲ್ಲಿ ಇದು ಸಾಮಾನ್ಯ ವಿಚಾರ. ಆದರೆ ಇಲ್ಲಿ ನೀಡಿರುವ ಮಾಹಿತಿ

ಗಳ ಆಧಾರದಿಂದ ತಮ್ಮದೇ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು, ಇಲ್ಲವೇ ತಮ್ಮ ತಿಳುವಳಿಕೆಯನ್ನು ಉತ್ತಮಪಡಿಸಿಕೊಳ್ಳಲು ಇದು ಸಹಾಯಕವಾಗುವುದರಲ್ಲಿ ಸಂಶಯವಿಲ್ಲ. ಇದು ೧೯೫೦ ರಲ್ಲಿಯೇ ಪಂಡಿತ ಎಚ್. ಶೇಷಯ್ಯಂಗಾರ್ ಅವರಿಂದ ಸಂಪಾದಿತವಾಗಿ ಮದರಾಸು ಸರಕಾರದ ಪ್ರಾಚ್ಯ ಮಾಲೆಯಲ್ಲಿ ಪ್ರಕಟವಾಗಿದ್ದರೂ ಅದರ ಪ್ರತಿಗಳು ದೊರೆಯದಿರುವ ಈ ಸಂದರ್ಭದಲ್ಲಿ, ದೊರೆಯುವ ಹೆಚ್ಚು ಪ್ರತಿಗಳ ಸಹಾಯದಿಂದ ಪರಿಷ್ಕೃತವಾಗಿ ಈಗ ಪ್ರಕಟವಾಗುತ್ತಿದೆ. ಜೊತೆಗೆ ಪದ್ಯರಚನೆಯಿಂದ ಕೂಡಿದ ಈ ಗ್ರಂಥಕ್ಕೆ ಸಾಮಾನ್ಯ ಜನರಿಗೂ ಅರ್ಥವಾಗಲೆಂದು ರಚಿತವಾಗಿರುವ ಟೀಕನ್ನೂ ಅನುಬಂಧವಾಗಿ ಅಳವಡಿಸಲಾಗಿದೆ. ಇಂತಹ ಅಪರೂಪ ಕೃತಿಯನ್ನು ಆಸಕ್ತರು ಆದರಿಸುವರೆಂದು ನಂಬಲಾಗಿದೆ.

ಮೈಸೂರು
೯–೨–೧೯೮೭

ಬಿ. ಎಸ್. ಸಣ್ಣಯ್ಯ
ಉಪನಿರ್ದೇಶಕ ಕಾ. ನಿ.

ವಿಷಯ ಸೂಚಿ

ಪೀಠಿಕೆ

ಪ್ರಾಣಿ ಮತ್ತು ಮನುಷ್ಯನ ಸಂಬಂಧ ಶತ್ರು ಮತ್ತು ಮಿತ್ರಸ್ತರಗಳಲ್ಲಿ ನಿಲ್ಲುವಂಥದು. ತನ್ನ ಜೀವಿತದ ಆದಿಕಾಲದಲ್ಲಿ ಮನುಷ್ಯ ಬೇಟೆಯ ಮೂಲಕ ಪ್ರಾಣಿಗಳನ್ನು ಕೊಂದು ಜೀವನ ಸಾಗಿಸಿದ. ಕಾಲಕ್ರಮದಲ್ಲಿ ಆತ ಬೇಸಾಯವನ್ನು ಅವಲಂಬಿಸಿದ. ಕಾಡಿನಲ್ಲಿ ಪ್ರಾಣಿಗಳಿಗೆ ಆಹಾರದ ಕೊರತೆಯುಂಟಾದಾಗ ಅವುಗಳಿಗೆ ಮನುಷ್ಯನ ಬೇಸಾಯಭೂಮಿ ಆಹಾರವನ್ನು ಒದಗಿಸುವ ಆಕರವಾಯಿತು. ಬೇಸಾಯಭೂಮಿಯ ಬಳಿಗೆ ಬಂದ ಪ್ರಾಣಿಗಳನ್ನು ಹಿಡಿದು ಮನುಷ್ಯ ಸಾಕ ತೊಡಗಿದ. ಹಾಗೆ ಪಳಗಿಸಿದ ಪ್ರಾಣಿಗಳಲ್ಲಿ ಹಸು, ಕುರಿ, ಆಡು, ನಾಯಿ, ಹಂದಿಗಳು ಮೊದಲಿಗೆ ನಿಲ್ಲುತ್ತವೆ. ಆ ಸಾಲಿನಲ್ಲಿ ಕುದುರೆಯ ಸ್ಥಾನ ಕಡೆಯದು. ಅಂದರೆ ಮನುಷ್ಯ ಮೊಟ್ಟ ಮೊದಲು ಕುದುರೆಯನ್ನು ತನ್ನ ಹಿಡಿತಕ್ಕೆ ತೆಗೆದು ಕೊಂಡುದು ಮೆಸಪೊಟೇಮಿಯ ಮತ್ತು ಚೀನಗಳಲ್ಲಿ, ಕ್ರಿ.ಪೂ. 4000 ವರ್ಷಗಳ ಹಿಂದೆ ಎಂಬ ಅಭಿಪ್ರಾಯವಿದೆ[1].

ಚೀನಾದ ಚಕ್ರವರ್ತಿ ಫೋ-ಹಿ (Fo-hi) ಕ್ರಿ.ಪೂ. 3468 ವರ್ಷಗಳಷ್ಟು ಹಿಂದೆಯೇ ಕುದುರೆಗಳನ್ನು ಆಮದು ಮಾಡಿಕೊಂಡ ವಿಚಾರ ಪುರಾತನ ಚೀನೀ ಕಡತಗಳಿಂದ ತಿಳಿದು ಬರುತ್ತದೆ[1]. ಈ ಕುದುರೆಗಳು ಪ್ರಿಜ್‌ವಾಲ್ಸ್ಕೀರವರ ಕಾಡು ಕುದುರೆಗಳಿಗೆ ಸೇರಿದುವೇ ಆಗಿವೆ. ಕ್ರಿ.ಪೂ. 2000 ದ ಹೊತ್ತಿಗೆ ಚೀನದಲ್ಲೆಲ್ಲ ಕುದುರೆಗಳು ಪರಿಚಿತವಿದ್ದುದಲ್ಲದೆ ವ್ಯಾಪಕವಾಗಿ ಹರಡಿದ್ದವು.

ಭಾರತೀಯರಿಗೆ ವೇದಕಾಲದಿಂದಲೂ ಕುದುರೆಗಳ ಪರಿಚಯವಿದೆ. ಅಶ್ವಮೇಧದ ಉಲ್ಲೇಖಗಳು ಸಾಕಷ್ಟು ಲಭ್ಯವಿವೆ. ಆದರೆ ಯುದ್ಧದಲ್ಲಿ ಕುದುರೆ ಗಳನ್ನು ಬಳಸಿದ ವಿಚಾರ ವೇದಗಳಿಂದ ತಿಳಿದುಬರುವುದಿಲ್ಲ. ರಾಮಾಯಣ, ಮಹಾಭಾರತದ ಕಾಲಕ್ಕೆ ಯುದ್ಧದಲ್ಲಿ ಕುದುರೆಗಳನ್ನು ಬಳಸಿದ ಸಂಗತಿಗಳಿವೆ. ಮಹಾಭಾರತ ಕಾಲದಲ್ಲಿ ಸೇನಾ ಪ್ರಮಾಣವನ್ನು ಅಕ್ಷೋಹಿಣಿ ಲೆಕ್ಕದಲ್ಲಿ ಹೇಳು ತ್ತಿದ್ದರು. ಆದಿಪರ್ವದಲ್ಲಿ ಬರುವಂತೆ ಒಂದು ಅಕ್ಷೋಹಿಣಿಯಲ್ಲಿ 21, 870 ರಥ, 21,870 ಆನೆ, 65,610 ಕುದುರೆ ಮತ್ತು 1,09,350 ಪದಾತಿಗಳಿದ್ದವು. ಉದ್ಯೋಗ ಪರ್ವದಲ್ಲಿ ಬರುವಂತೆ ಪಾಂಡವರ ಪರ ಏಳು ಅಕ್ಷೋಹಿಣಿ ಸೇನೆ ಎಂದರೆ

---

1 Grizimek's Animal life encyclopedia volume 12, Mammals III page 568.

1,53,090 ರಥ, 1,53,090 ಆನೆ, 4,59,270 ಕುದುರೆ, 7,65,450 ಪದಾತಿಗಳಿದ್ದುವು. ಕೌರವರ ಕಡೆ 11 ಅಕ್ಷೋಹಿಣಿ ಸೈನ್ಯ ಎಂದರೆ 2,40,570 ರಥ, 2,40,570 ಆನೆ, 7,21,710 ಕುದುರೆ ಮತ್ತು 1202,850 ಪದಾತಿಗಳಿದ್ದುವು.

ಭಾರತದ ಮೇಲೆ ಅಲೆಕ್ಸಾಂಡರ್ ಧಾಳಿ ಮಾಡಿದ ಕಾಲಕ್ಕೆ ಪುರೂರವನಲ್ಲಿ 4000 ಕುದುರೆಗಳಿದ್ದುವು. ಮಾಳವ ಮತ್ತು ಕ್ಷುದ್ರಕರಲ್ಲಿ 3000 ಕುದುರೆಗಳಿದ್ದುವು. ಅಂಬಷ್ಟರಲ್ಲಿ 6000 ಕುದುರೆಗಳಿದ್ದುವು. ಶಿಬಿ ಪ್ರಾಂತವಾಸಿಗಳಲ್ಲಿ 3000 ಕುದುರೆಗಳಿದ್ದುವು. ಉಗ್ರಸೇನನಲ್ಲಿ 20,000 ಕುದುರೆಗಳಿದ್ದುವು. ಅಲೆಕ್ಸಾಂಡರನನ್ನು ಎದುರಿಸುವಲ್ಲಿ ಭಾರತೀಯ ದೊರೆಗಳು ಯುದ್ಧರಂಗಕ್ಕೆ ಕುದುರೆಗಳನ್ನು ತಂದಿದ್ದರು[1].

ಪ್ರಾಚೀನ ಭಾರತದಲ್ಲಿ ಅಶ್ವಪಡೆಯ ಮುಖ್ಯಸ್ಥನಿಗೆ 8000 ಪಣಗಳು, ಅಧ್ಯಕ್ಷ (ಮೇಲ್ವಿಚಾರಕ)ರಿಗೆ 4000 ಪಣ, ವೈದ್ಯರಿಗೆ 2000 ಪಣಗಳನ್ನು ವೇತನವಾಗಿ ಕೊಡುತ್ತಿದ್ದರು. ಯುದ್ಧರಂಗದಲ್ಲಿ ಹೋರಾಡಲು ಮತ್ತು ಸಾಮಾನು ಸಾಗಣೆಗಾಗಿ ಅಸಂಖ್ಯಾತ ಕುದುರೆ, ಆನೆ ಮತ್ತು ದನಗಳನ್ನು ಬಳಸುತ್ತಿದ್ದರು. ಅವುಗಳ ಆಹಾರ, ಬಟ್ಟೆ ಮುಂತಾದ ಖರ್ಚು ವಿಪರೀತವಾಗಿದ್ದು ರಾಜಾದಾಯದ ಬಹುಭಾಗ ಅದಕ್ಕಾಗಿ ವಿನಿಯೋಗವಾಗುತ್ತಿತ್ತು.

ಸಬಕ್ತಗೀನನ ಧಾಳಿಯ ಹೊತ್ತಿಗೆ ಭಾರತದ ಸೈನ್ಯದ ಕೊರತೆ ಎದ್ದು ಕಾಣುತ್ತಿತ್ತು. ಭಾರತ ಎಂದೂ ಕುದುರೆ ತಳಿಗಳನ್ನು ಅಭಿವೃದ್ಧಿಪಡಿಸುವ ಉತ್ತಮ ಕೇಂದ್ರವಾಗಿರಲಿಲ್ಲ. ಕುದುರೆಗಳ ಸರಬರಾಜಿನ ಕೊರತೆ ಯಾವಾಗಲೂ ಇದ್ದಿತು. ಸಿಂಧು, ಬಾಹ್ಲೀಕ, ಪ್ರಾಗ್ಜ್ಯೋತಿಷಪುರ ಮತ್ತು ಕಾಂಭೋಜಗಳ ಕುದುರೆಗಳು ಪ್ರಸಿದ್ಧವಾಗಿದ್ದುವು. ವ್ಯಾಸ, ಕಾಳಿದಾಸ ಮತ್ತು ಕಲ್ಹಣರು ಆ ದೇಶದ ಕುದುರೆಗಳನ್ನು ಪ್ರಶಂಸಿಸಿದ್ದಾರೆ.

ಭಾರತೀಯ ಆಕರಗಳ ಪ್ರಕಾರ ಕುದುರೆಗಳ ಉತ್ಪತ್ತಿ ಕ್ಷೇತ್ರಗಳು ಗ್ರಂಥದಿಂದ ಗ್ರಂಥಕ್ಕೆ ಭಿನ್ನವಾಗುತ್ತ ಹೋಗುತ್ತವೆ. ಅವುಗಳಲ್ಲಿ ಶಾಲಿಹೋತ್ರನ ಅಶ್ವಶಾಸ್ತ್ರದ ಪ್ರಕಾರ 54 ಕುದುರೆಯ ಉತ್ಪತ್ತಿ ಕ್ಷೇತ್ರಗಳಿದ್ದು ಅವು ಹೀಗಿವೆ—

ಆಜಾನ, ಕಾಂಭೋಜ, ಬಾಹ್ಲಿಕ, ವನಾಯುಜ, ಗಾಂಧಾರ, ಆರಟ್ಟ, ಸಿಂಧು, ಚಾಂಪೇಯ, ತೈತಿಲ, ಮೇಚಕ, ಉಪಮೇಚಕ, ತ್ರೈಗರ್ತ, ಅರ್ಜುನ, ಸಾವಿತ್ರ,

---

1 The military System in ancient India Bimal Kanti Majudmar page 43, Publishers Firma K. L. Mukhyopadhyay. 1960.

ಯೌಧೇಯು, ಯಾವನ, ಹ್ರಸ್ವಯಾವನ, ತುಖಾರ, ಕಾಂದಾರ, ಪಾರ್ವತ, ಓರಸ ಆವರ್ತ, ಕಾಶ್ಮೀರ, ಶಕಾನಕ, ಉತ್ತರಮದ್ರ, ದಕ್ಷಿಣಮದ್ರ, ಯುವನಾಂತದ್ವೀಪ, ಕೈಕಯು, ಅಪರಾಂತ, ಅಂಬಷ್ಟ, ವಾಸಂತಕ, ಸೌವೀರ, ದಾರದ, ಸೈವಕ, ಕ್ಷುದ್ರಕ, ಐರಾವತ, ಮಾಲವ, ಅವಂತಿ, ಕಳಿಂಗ, ಮೌಕುರ, ವನವಾಸ, ತ್ರಿಲಿಂಗ, ಕಥನ? ಪ್ರಾವೃತಕ, ಸೌರಾಷ್ಟ್ರ,ಸಾಲ್ವ, ಕುರುಕ್ಷೇತ್ರ, ಪಾಂಚಾಲ, ಪ್ರೋಥಜ, ಕುಕ್ಕುರ, ಹ್ರಸ್ವ ಕುಕ್ಕುರ, ಹೈಮವತ, ಅಮವತ್ಯುತ್ತರ. ಮಾಗಧಗಳು. ಯಾವ ಯಾವ ಕ್ಷೇತ್ರಗಳಲ್ಲಿ ಕುದುರೆಗಳು ಹುಟ್ಟುತ್ತವೆಯೋ ಅದೇ ಹೆಸರಿನಿಂದ ಅವುಗಳನ್ನು ಕರೆಯುತ್ತಾರೆ.

ಪ್ರಸ್ತುತ ಅಶ್ವಶಾಸ್ತ್ರಕಾರ ಅಭಿನವಚಂದ್ರನು ಕೊಡುವ ಕುದುರೆಗಳ ಜನ ಕ್ಷೇತ್ರದ ಪಟ್ಟಿ ಮೇಲಿನದಕ್ಕಿಂತ ಭಿನ್ನವಾಗಿದೆ. ಆತನ ಪ್ರಕಾರ ನರ್ಮದೆಯಿಂದ ಉತ್ತರಕ್ಕಿರುವ ಐವತ್ತುನಾಲ್ಕು ಕ್ಷೇತ್ರಗಳು ಕುಲ, ಬಲ, ತೇಜ, ಸ್ವರೂಪ, ಜವ ಪ್ರಮಾಣಗಳಲ್ಲಿ ಪರಿಪೂರ್ಣವಾಗಿವೆ. ಅವನ ಪ್ರಕಾರ—

ಬಿಸ ಕಾಂಭೋಜಕ ಬಾಹ್ಲೀ
ಕ ಸೈಂಧವಾರಟ್ಟ ತೈತಿಲಂ ವಾನೇಯಂ
ಪೆಸರ ಕ್ಷೇತ್ರದ ಹಯಕಾ
ಪೆಸರೆ ಪೆಸರ್ ಜಾತಿಗಳ್ ಗುಣಾಧಾರಂಗಳ್ಹ ॥೬–೨೬

ಖರಗಂಧರ್ವ ಕವುರ್ ಖರೋಷ್ಠ ವಿಭವಂ ಕಾಂಬೋಜ ಜಾಳಂಧರಂ
ತುರಗಂ ಮಾಳವ ಕೊಂಗ ಕೋಶಲ ವರಾಳಂ ಬರ್ಬರಂ ತೈತಿಲಂ
ದುರಭಾನೀ ಕರಹಾಟ ಮಾಗಧ ಕಳಿಂಗಂ ಸಿಂಧು ಕೊಲ್ಲಾಪುರಂ
ತುರಗಂ ಸೇಹುಣಮಾದಿಯಾಗಲಿನಿತುಂ ಕ್ಷೇತ್ರಂಗಳೊಳ್ ಪುಟ್ಟುಗುಂ
॥ ೬–೨೭

ವಾಯುಕಕ್ಕೆಸಂಚಕಳಮಲಜ
ನೇಯಕಮುಂ ಸಾಳಿದಿರ ಸಮಿನಿಯಾಯಿಕಮಾ
ಮಾಯತಮೆಂಬೀ ಪೆಸರಿಂ
ದಾಯತಮಯ್ವತ್ತು ನಾಲ್ಕು ಜಾತಿ ತುರಂಗಂ ॥ ೬–೨೮

ಎಂದು ಹೇಳಿ ನರ್ಮದೆಯಿಂದ ದಕ್ಷಿಣಕ್ಕೆ ತೊಂಬತ್ತು ಕ್ಷೇತ್ರಗಳಲ್ಲಿ ಕುದುರೆಗಳು ಹುಟ್ಟುತ್ತವೆ. ಅವು ತೇಜ, ಕುಲ, ಜವ, ಪ್ರಮಾಣ, ಸತ್ವಗಳಲ್ಲಿ ಕನಿಷ್ಠವೆಂದಿದ್ದಾನೆ. ಈ ಪಟ್ಟಿಯಲ್ಲಿ ಕೊಲ್ಲಾಪುರ ಮತ್ತು ಸೇಹುಣ ಎನ್ನುವ ಹೆಸರುಗಳನ್ನು ಗಮನಿಸಬಹುದಾಗಿದ್ದು ಅವು ಕರ್ನಾಟಕದಲ್ಲಿನ ಕುದುರೆ ಸಾಕಣೆ ಕೇಂದ್ರಗಳಲ್ಲಿ ಪ್ರಸಿದ್ಧವಾಗಿದ್ದುವೆನ್ನಬಹುದು.

ಭಾರತೀಯ ನಂಬಿಕೆಯಂತೆ ಕುದುರೆಗಳು ಬ್ರಹ್ಮನ ಕಣ್ಣೀರಿನಿಂದ, ಸಮುದ್ರ ಮಥನದಿಂದ, ಯಜ್ಞದಿಂದ, ವೃಗ್ನ್ಯುಲೂಕಸಂಭವಗಳಿಂದ ಜನಿಸಿದುವು. ಅವು ರೆಕ್ಕೆಗಳಿಂದ ಕೂಡಿ ಹಾರಾಡುತ್ತ ಲೋಕಹಿಂಸಕವಾಗಿದ್ದುವು. ಬ್ರಹ್ಮನು ತನ್ನ ಯಜ್ಞದಿಂದ ಹುಟ್ಟಿದ ಕುದುರೆಗಳನ್ನು ಪಳಗಿಸುವಂತೆ ಶಾಲಿಹೋತ್ರನಿಗೆ ನೇಮಿಸಿದನು. ದೇವಾಸುರರು ಶಾಲಿಹೋತ್ರನಲ್ಲಿಗೆ ಬಂದು ತಮಗೆ ವಾಹನಗಳು ಬೇಕೆಂದು ಅಪೇಕ್ಷಿಸಿದರು. ಆಗ ಶಾಲಿಹೋತ್ರನು ಆ ಕುದುರೆಗಳ ರೆಕ್ಕೆಗಳನ್ನು ಕತ್ತರಿಸಿ ದೇವತೆಗಳಿಗೆ ಕೊಟ್ಟನು.

ಕುದುರೆಗಳ ಪ್ರಯೋಜನವನ್ನು ತಿಳಿದ ಭಾರತೀಯರು ಅವುಗಳನ್ನು ಪ್ರಶಂಸಿಸಿದ್ದಾರೆ. ಸುಶ್ರುತ ಮತ್ತು ಶಾಲಿಹೋತ್ರರ ಸಂವಾದದ ಪ್ರಕಾರ–ಕುದುರೆಗಳು ಸರ್ವ ದೇವತಾ ಸ್ವರೂಪವಾದುವು. ಸರ್ವಲಕ್ಷಣವಾದ ಕುದುರೆಗಳು ಅರಸಿನ ಮನೆಯಲ್ಲಿದ್ದರೆ ದೂರ ದೇಶದಲ್ಲಿರುವ ಶತ್ರುಗಳೂ ಹೆದರುತ್ತಾರೆ. ಯುದ್ಧರಂಗದಲ್ಲಿ ಕುದುರೆಯಂತೆ ಅತಿಶೀಘ್ರವಾಗಿ ಹೋಗಿ ಬರುವುದಕ್ಕೆ ಮತ್ತೊಂದು ಬಲವಿಲ್ಲ. ನಾನಾ ವಿಧವಾದ ಆಯುಧದಿಂದ ಸರ್ವಾಂಗವೂ ಛೇದಿಸಲ್ಪಟ್ಟ ಅರಸನನ್ನು ಕುದುರೆ ಅರಮನೆಗೆ ತಂದು ಅನಂತರ ಪ್ರಾಣ ಬಿಡುತ್ತದೆ. ಕುದುರೆಗಳಿಂದ ದರಿದ್ರರಿಗೆ ಐಶ್ವರ್ಯ ಲಭಿಸುತ್ತದೆ. ಕುದುರೆಗಳು ಪ್ರತಿದಿವಸ ಅರಸರಿಗೆ ರಾಜ್ಯ, ಕೀರ್ತಿ, ಸುಖ, ದ್ರವ್ಯವೃದ್ಧಿ, ಜಯ, ಶತ್ರುಪರಾಜಯಗಳನ್ನು ಮಾಡುತ್ತವೆ. ಅರಸರು ಕುದುರೆಯನ್ನು ದೀರ್ಘ ರೋಗಿ, ಮುದಿ, ಅಂಧಕ, ಅನರ್ಹ ಎಂದು ಬಿಡಬಾರದು. ಅರ್ಥ ಲೋಭದಿಂದ ಕುದುರೆಗಳನ್ನು ಬಿಡಬಾರದು. ಕುದುರೆಯ ಮಹತ್ವವನ್ನು ತಿಳಿಯದೆ ಬಿಡಬಾರದು. ಅದರಿಂದ ಅಪಜಯವುಂಟಾಗುತ್ತದೆ. ಕುದುರೆಗಳು ಪ್ರಧಾನವಾದ ಶತ್ರುಗಳನ್ನು ನೋಡಿ ಕ್ಷಣಮಾತ್ರದಲ್ಲಿ ಯಮನ ಪಟ್ಟಣಕ್ಕೆ ಕಳುಹಿಸುತ್ತವೆ. ಕುದುರೆ ತಮ್ಮ ಶತ್ರುವಿಗೆ ಸಹಾಯ ಬರುವಂಥ ಶಬ್ದವನ್ನು ದೂರದಲ್ಲಿದ್ದರೂ ಕೇಳಿ ಶೀಘ್ರದಲ್ಲಿ ಹೋಗಿ ಕೊಂದು ತಿರುಗಿ ತಕ್ಷಣದಲ್ಲಿ ಬರುತ್ತದೆ. ಕುದುರೆಗಳು ಯುದ್ಧ ಮಾಡದಿದ್ದರೂ ಶತ್ರುಗಳ ಭೂಮಿಯಲ್ಲಿ ಉಳ್ಳಂಥ ಪೈರ ಪಚ್ಚೆ ಹುಲ್ಲು ನೀರನ್ನು ಕೆಡಿಸಿ ನಾಶಮಾಡುತ್ತವೆ. ವಿದ್ವಾಂಸರಿಗೆ ಶಬ್ದಶುದ್ಧಿಯಾದಂಥ ವಾಕ್ಯ, ಭೂಮಿಗೆ ಪೈರು, ಆಕಾಶಕ್ಕೆ ಸೂರ್ಯ, ಸೇನೆಗೆ ಕುದುರೆಗಳೆ ಭೂಷಣ.

ಕವಿ ವಿಚಾರ

ಅಶ್ವಶಾಸ್ತ್ರವನ್ನು ಬರೆದವನು ಅಭಿನವಚಂದ್ರ. ಈತನ ಸ್ಥಳ ಬಾಗೆವಾಡಿ. ಕಾಳಪಯ್ಯ ತಂದೆ. ಇವನು ವಿದ್ವಜ್ಜನ ಸುರತರುವೆನಿಸಿ ಮೆರೆದವನು. ಇವನ ಹೆಂಡತಿ ಅತ್ತಿಮಬ್ಬೆ. ಈ ದಂಪತಿಗಳಿಗೆ ಪಂಕರುಹ ಹಲಕುಲಿಶ ಮಕರಕರಲೇಖಾನೀಕ ಪಾದತಲನೂ ಗಿರಿಜಾಧೀಶ್ವರ ಭಕ್ತನೂ ಆದ ಸೋಮದೇವ ಮಗ. ಈತನ ತಮ್ಮ

ಹಯಶಾಸ್ತ್ರಪ್ರೌಢಜನ ಮನೋನಯನಪ್ರಿಯನೂ ಅಕಲಂಕಚರಿತನೂ ಆದ ಅಭಿನವಚಂದ್ರ. ಈ ಅಭಿನವಚಂದ್ರನು ಅಶ್ವಶಾಸ್ತ್ರವನ್ನು ಬರೆದಿದ್ದಾನೆ. ಕಾಳಪಯ್ಯನನ್ನು ವಿಪ್ರಪ್ರಭು ಎಂದು ಕರೆದಿರುವುದರಿಂದಲೂ ಸೋಮದೇವನಿಗೆ ಚಕ್ರವರ್ತಿ ಸೂಚಕ ಚಿಹ್ನೆಗಳನ್ನು ಹೇಳಿರುವುದರಿಂದಲೂ ಇವರು ಬಾಗೆವಾಡಿಯ ಪ್ರಭುಗಳಾಗಿದ್ದರೆಂದು ಊಹಿಸಬಹುದು.

ಕವಿಚರಿತೆಕಾರರು "ಚಂದ್ರಕವೀಂದ್ರವಾಗ್ವಿಲಾಸ ನೆಗಳಲ್ ವಾಜಿಶಾಸ್ತ್ರಮಂ ವಿರಚಿಸುವೆಂ" ಎಂದಿರುವುದರಿಂದ ಹಿಂದೆ ವಾಜಿಶಾಸ್ತ್ರವನ್ನು ಬರೆದ ಚಂದ್ರಕವಿಯನ್ನು ಅನುಸರಿಸಿ ಈ ಗ್ರಂಥವನ್ನು ಬರೆದಂತೆ ತೋರುತ್ತದೆ. ಈ ಚಂದ್ರಕವಿ ಮದನತಿಲಕವನ್ನು ಬರೆದ ಚಂದ್ರರಾಜನಾಗಿರಬಹುದು. ಆ ಚಂದ್ರಕವಿಯನ್ನು ಅನುಸರಿಸಿ ಅಭಿನವಚಂದ್ರ ಎಂದು ಕವಿ ತನ್ನ ಹೆಸರನ್ನು ಇಟ್ಟುಕೊಂಡಿರಬಹುದು. ಇವನ ಕಾಲವನ್ನು ನಿರ್ಧರಿಸುವುದಕ್ಕೆ ಸರಿಯಾದ ಆಧಾರವಿಲ್ಲ. ಸುಮಾರು 1400ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇನೆ" ಎಂದಿದ್ದಾರೆ[1]. ಶ್ರೀಮಾನ್ ಎಚ್. ಶೇಷಯ್ಯಂಗಾರ್[2] ಮತ್ತು ಡಾ|| ಕೆ.ಜಿ. ನಾರಾಯಣ ಪ್ರಸಾದರು[3] ಈ ಕಾಲವನ್ನು ಅನುಮೋದಿಸಿದ್ದಾರೆ.

ಆದರೆ ಅಭಿನವಚಂದ್ರನ ಕಾಲವನ್ನು ಪುನರ್ಪರಿಶೀಲಿಸಲು ಕ್ರಿ. ಶ. 1170 ರಲ್ಲಿದ್ದ ಕಳಚುರಿಯ ಚಕ್ರವರ್ತಿ ಸೋವಿದೇವನ ಕಾಲಕ್ಕೆ ಸೇರಿದ ಬಿಜಾಪುರ ಜಿಲ್ಲೆಯ ಬಾಗೆವಾಡಿ ಶಾಸನದಿಂದ ಸಾಧ್ಯವಾಗಿದೆ.[4] ಅಗ್ರಹಾರ ಚೂಡಾಮಣಿ ಬಾಗೆವಾಡಿ—

ವೇದವಿದರಖಿಲಧರ್ಮೋ
ಪಾದೇ[ಯ]ಸಕಲ ಶಾಸ್ತ್ರಪರಿಣತರಧಿಕ
ಭೂದೇವಾನ್ವಯ ತಿಳಕ
ರ್ಮೋದಿಸಿಯೊಳ್ಬಾಗವಾಡಿಯೆಸೆವಯ್ನೂರ್ವರು

ಗಳಿಂದ ಶೋಭಿಸುತ್ತಿದ್ದಿತು. ಅಲ್ಲಿ "ಶ್ರೀಮತು ಹಿರಿಯರಸಿ ಪಟ್ಟಮಹಾದೇವಿ ಸೋವಲದೇವಿಯ [ರಮನೆಯ] ಸೇನಬೋವ ರಾಜಾಧ್ಯಕ್ಷ [ರೇ] ಮಾಯ್ಯನಾಯಕರು ಚಂದ್ರಾರ್ಕಸ್ಥಾ[ಯಿಯಾ]ಮಾಗಿ ಮಾಡಿಸಿದ ಶ್ರೀ ಸೋಮನಾಥದೇವಗ್ಗ್ರಂ

---

1 ಕರ್ಣಾಟಕ ಕವಿ ಚರಿತ್ರೆ I-522, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 1972

2 ಅಶ್ವಶಾಸ್ತ್ರಂ, ಮುನ್ನುಡಿ VIII ಮದರಾಸು ಸರಕಾರದ ಪ್ರಾಚ್ಯಮಾಲೆ 1950

3 ಕನ್ನಡ ಅಧ್ಯಯನ ಸಂಸ್ಥೆಯ ಸಾಹಿತ್ಯ ಚರಿತ್ರೆ

4 ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್ -XV-113 ; 1170

ಶ್ರೀ ಚನ್ನಕೇಶವ ದೇವರ್ಗ್ಗಂ XXX ಅಂಗ ಭೋಗ ನೈವೇದ್ಯಖಂಡಸ್ಫು[ಟಿತ] ಜೀರ್ಣ್ಣೊ ದ್ಧಾರ ನಿಮಿತ್ತದಿಂ ಶ್ರೀ ಬಕುಳೇಶ್ವರ ದೇವರ್ಗ್ಗೆ ಸರ್ವನಮಶ್ಯ [ದೆ ಭೂ]ಮಿಯೊಳಗಣ...." ಭೂಮಿಯನ್ನು ದತ್ತಿಯಾಗಿ ಬಿಟ್ಟರು.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಶಾಸನದ ಪಾಠ [ರೇ]ವಣಯ್ಯನಾಯಕರು ಎನ್ನುವುದನ್ನು. ಇಲ್ಲಿ ಶಾಸನದ ಕರ್ತೃವಿನ ಹೆಸರಿರುವಲ್ಲಿ ಒಂದು ಅಕ್ಷರ ಗಳಿತವಾಗಿದ್ದು ಅದನ್ನು ಸಂಪಾದಕರು [ರೇ] ಎಂದು ಊಹಿಸಿದ್ದಾರೆ. ಈ ಶಾಸನದಲ್ಲಿ ಬರುವ ರಾಯಮುರಾರಿ ಸೋವಿದೇವ, ಆತನ ಹೆಂಡತಿ ಸೋವಲದೇವಿಯರ ಉಲ್ಲೇಖಗಳು ಮತ್ತು ಶಾಸನದ ಕರ್ತೃ ಮಾಡಿಸಿದ ಸೋಮನಾಥದೇವರ ಪ್ರತಿಷ್ಠಾಪನೆಗಳನ್ನು ಗಮನಿಸಿದಾಗ ಎಂದರೆ ಶಾಸನದ ಪರಿಸರವನ್ನು ನೋಡಿದರೆ [ರೇ] ಎನ್ನುವ ಊಹಾ ಪಾಠದ ಬದಲು [ಸೋ] ಎನ್ನುವ ಊಹಾಪಾಠ ಸೂಕ್ತವಾಗುತ್ತದೆ. ಶಾಸನದ ಕರ್ತೃ [ರೇ]ವಣಯ್ಯ ನಾಯಕನ ಬದಲು [ಸೋ]ವಣಯ್ಯ ನಾಯಕನಾಗುತ್ತಾನೆ. ಈತನು ಹಿರಿಯರಸಿ ಪಟ್ಟಮಹಾದೇವಿ ಸೋವಲದೇವಿಯ [ರಮನೆಯ] ಸೇನಬೋವ ರಾಜಾಧ್ಯಕ್ಷನಾಗಿದ್ದನು.

ಅಭಿನವಚಂದ್ರನ ಅಶ್ವಶಾಸ್ತ್ರದಲ್ಲಿ ಬರುವಂತೆ ಪಂಕರುಹ ಹಲ ಕುಲಿಶ ಮಕರಾಕರ ಲೇಖಾನೀಕ ಪಾದತಲನೂ ಅಮಲಬಲನೂ ವಿಪ್ರಕುಲಭೂಷಣನೂ ಸುಜನಪ್ರಣುತನೂ ಆದ ಸೋಮಣಯ್ಯನು ಮೇಲಿನ ಶಾಸನದಲ್ಲಿ ಉಕ್ತನಾಗಿರುವ [ಸೋ]ವಣಯ್ಯನಾಗುವ ಸಾಧ್ಯತೆಗಳಿವೆ.

ತನ್ನ ಮನೆತನದನೂ ಹಿರಿಯಣ್ಣನೂ ಆದ ಸೋವಣಯ್ಯನು ಪ್ರತಿಷ್ಠಾಪಿಸಿದ ಚೆನ್ನಕೇಶವ ಮತ್ತು ಸೋಮನಾಥದೇವರನ್ನು ಅಭಿನವಚಂದ್ರನು ಅಶ್ವಶಾಸ್ತ್ರದಲ್ಲಿ–

ಶ್ರೀಪತಿ ದಾನವಕುಲ ದ
ರ್ಪಾಪಹನಮರೇಂದ್ರ ವಂದಿತಂ ಸಕಲಜಗ
ದ್ವ್ಯಾಪಕನೆಮಗೀಗೆ ಸುಖ
ವ್ಯಾಪಾರೋದಾರ ಮಹಿಮೆಯಂ ಚಕ್ರಧರಂ

ಭರದಿಂ ಕೈಲಾಸಮನಾ
ರ್ಪಿರಲಾರ್ಪಿ[o]ದೆತ್ತಿ ನಿಂದ ದಶಕಂಧರನಂ
ಚರಣಾಂಗುಷ್ಠದೊಳೊತ್ತಿದ
ಗಿರಿಜಾಧಿಪನೆಮಗೆ ಮಾಳ್ಕೆ ಸುಖಸಂಪದಮಂ

ಎಂದು ಸ್ತುತಿಸಿದ್ದಾನೆನ್ನಬಹುದು. ಹೀಗಾದ ಪಕ್ಷದಲ್ಲಿ ಶಾಸನದ ಕರ್ತೃ [ಸೋ] ವಣಯ್ಯನ ತಾಯಿ ತಂದೆಗಳು ಬಾಗೆವಾಡಿಯ ವಿಪ್ರ ಪ್ರಭು ಕಾಳಪಯ್ಯ ಮತ್ತು ಅತ್ತಿಮಬ್ಬೆಯರಾಗುತ್ತಾರೆ. ಆದುದರಿಂದ ಅಭಿನವಚಂದ್ರನ ಕಾಲವನ್ನು ಕವಿ ಚರಿತೆಕಾರರು ಊಹಿಸಿರುವ ಕ್ರಿ. ಶ. 1400 ರಿಂದ ಹಿಂದಕ್ಕೆ ಎಂದರೆ ಸು. 1170 ರಿಂದ 1200 ರ ಸುಮಾರಿಗೆ ಎಂದು ಹೇಳಬಹುದಾಗಿದೆ.

ಕಾವ್ಯಾರಂಭದಲ್ಲಿ ಅಭಿನವಚಂದ್ರನು ವಿಷ್ಣು, ಈಶ್ವರ, ಬ್ರಹ್ಮ, ಸೂರ್ಯ, ಗಣಪತಿ, ಲಕ್ಷ್ಮಿ, ಮಹಿಷಾಸುರಮರ್ದಿನಿಯರನ್ನು ಸ್ತುತಿಸಿದ್ದಾನೆ.

ಸುಕರವಿಳಾಸ, ಬುಧ ಬಂಧು, ವಿಬುಧ ದಿನಕರ ಮತ್ತು ಗುಣರತ್ನ ಎನ್ನುವುವು ಅಭಿನವಚಂದ್ರನ ಬಿರುದುಗಳು.

ಗ್ರಂಥಸಾರ

1. ತುರಗೋತ್ಪತ್ತಿ

ಕುದುರೆಗಳ ಉತ್ಪತ್ತಿ ಅಶ್ರು ಸಂಭವ, ಅಗ್ನಿ ಸಂಭವ, ಅಮೃತ ಸಂಭವ' ಮೃಗ್ಯಲೋಕ ಸಂಭವ ಎಂದು ನಾಲ್ಕು ವಿಧದಲ್ಲಿ ಆಗಿದೆ. ಅವುಗಳಿಗೆ ರೆಕ್ಕೆಯಿದ್ದು ಮನೋವೇಗದಿಂದ ಆಕಾಶದಲ್ಲಿ ಸಂಚರಿಸುತ್ತಿದ್ದುವು. ದೇವತೆಗಳು ಶಾಲಿಹೋತ್ರ ನಲ್ಲಿಗೆ ಬಂದು ದೇವಾಸುರಯುದ್ಧದೆಡೆಗೆ ಕುದುರೆಗಳಿಲ್ಲವೆಂದು ತಿಳಿಸಿದರು. ಆಗ ಶಾಲಿಹೋತ್ರನು ಅವುಗಳ ರೆಕ್ಕೆಗಳನ್ನು ಕಡಿದು ದೇವತೆಗಳಿಗೆ ಕೊಟ್ಟನು. ಅಂದಿನಿಂದ ಇಂದಿನವರೆಗೂ ಕುದುರೆಗಳು ವಶವಾದುವು. ಅವುಗಳ ಪರಮಾಯುಷ್ಯ 32 ವರುಷ.

ಸರ್ವಾಂಗ ಪರೀಕ್ಷೆ

ಮುಖ, ತಲೆ, ಕೊರಲು, ಹೆಗಲು, ವಕ್ಷಪ್ರದೇಶ ಹೀಗೆ ಐದು ಪ್ರದೇಶಗಳು, ಅನಂತರ ಉದರ, ನಾಭಿ, ಗುದ, ತೊಡೆ, ಜಂಘೆಗಳೂ ಸೇರಿ ಹತ್ತು ಪ್ರದೇಶಗಳು ಶುಭಾಶುಭಫಲಗಳನ್ನು ನೀಡುತ್ತವೆ. ತನು, ಧ್ರುವೆ, ಸತ್ವ, ವರ್ಣ, ಪ್ರಕಾರ, ಪದಗತಿ, ಸ್ವನ, ಛಾಯೆ ಹೀಗೆ ಎಂಟು ಲಕ್ಷಣಗಳನ್ನು ಕುದುರೆಗಳಲ್ಲಿ ಗಮನಿಸಬೇಕು. ತನು, ಧ್ರುವ, ಗತಿ, ಸ್ವನ ಈ ನಾಲ್ಕು ಧ್ರುವ ವರ್ಣ, ಗಂಧ, ಸತ್ವ, ಛವಿಗಳು ಅಧ್ರುವ ಇವು ನಾಲ್ಕೂ ಮಧ್ಯಕಾಲದಲ್ಲಿ ಜನಿಸುತ್ತವೆ.

ಮುಖ, ಬಾಯಿ, ದಶನ, ತಾಳು, ನೊಲೆ, ಮೂವತ್ತೆರಡು ರೇಖೆ, ನುಣ್ಪಾದ ತಾಳು, ವಂಶಾಂತರಗಳನ್ನು ಗಮನಿಸಬೇಕು. ಅನಂತರ ಮುಖದಿಂದ ಗುದದವರೆಗೆ

ಕುದುರೆಗಳ ಅಂಗಾಂಗಗಳ ಪರಿಚಯವಿರಬೇಕು. ತುರಗ ಮತ್ತು ಗೋಳಿಗೆ ಅಷ್ಟವಿಧ ಸಂಸ್ಥಾನ ಲಕ್ಷಣ ಒಂದೆ, ಆದರೆ ಗೋಳಿಗೆಗೆ ಯೋನಿ ಮಾತ್ರ ಸ್ತನಯುಗವಿರುತ್ತದೆ.

ಉರ, ನೊಸಲು ಕಟಿಗಳು ದೊಡ್ಡವಾಗಿರಬೇಕು. ಯೋನಿ ನುಣ್ಣಿತಾಗಿರಬೇಕು. ಕಾಲುಗಳು ಜಿಂಕೆಯಂತಿದ್ದು ಕೊರಳು ವಿಸ್ತಾರವಾಗಿರುವ ಗೋಳಿಗೆ ಶುಭಪ್ರದ. ಮೊಲೆಗಳು ಆಡಿನಮೊಲೆ, ಕುರಿಯ ಮೊಲೆಗಳಹಾಗಿದ್ದರೆ ಅಶುಭ. ಮೊಲೆಗಳು ಮೊದಲಲ್ಲಿ ಅಗಲವಾಗಿ, ತುದಿ ಬಟ್ಟಿದವಾಗಿ, ಮೃದುವಾಗಿ ಎರಡೂ ನೇರವಾಗಿರಬೇಕು. ಹಾಲಧಾರೆಯಿಂದ ಕೂಡಿದ್ದು ಅದು ಝಲ್ಲೆಂದು ಹಾಯ್ದರೆ ಗೋಳಿಗೆ ಶುಭಪ್ರದ.

2. ವರ್ಣ

ಶ್ವೇತ, ಅರುಣ, ಪೀತ, ಅಸಿತವರ್ಣಗಳು ಪ್ರಧಾನವಾದುವು. ಇವುಗಳಿಂದ ಕ್ರಮವಾಗಿ ಶ್ವೇತ, ಶೋಣ, ಉಜ್ವಲ, ಕೃಷ್ಣ ಎನ್ನುವ ಕುದುರೆಗಳು ಲಭಿಸುತ್ತವೆ. ಮಿಶ್ರಿತವರ್ಣಗಳು ಮತ್ತು ಅವುಗಳಿಂದ ಕರ್ಣ, ಕರ್ಕ, ಕುಕ್ಕುಟ, ನೀಪ್ಪಳ, ಬೇರ, ಶಾಳುರಗ, ಇಂದ್ರ, ಬೊಲ್ಲ, ಕಾರುರಗ, ಕುಂಕುಮಬೋರ, ಬೋರ, ಮಂಗಳ ಬೋರ, ನೀಲ, ನೀಲಬೋರ, ಕೈರ, ಕಾರಳಗ, ಕೇಸಳಗ, ಸಂಪಳಗ, ಬೋರಳಗ, ಪಂಚಕಲ್ಯಾಣ, ಮಂಗ, ಗೋಕ್ಯಾಹ, ಕಣಯವಟ್ಟ, ಕಪೋತ, ಜಾಟವ, ರಕ್ತಕಾಮಾಂಕಿ, ರುದ್ಧ, ಗಂಗೆವಾಳಿ, ಚಕ್ರವಾಕ, ಸಿಂಹಪೋತ, ಮುಂಜ, ಸಿದ್ಧಾರ್ಥ, ಇಂದಿರ, ಪುನ್ನಾಹ ಎನ್ನುವ ಕುದುರೆಗಳ ಭೇದಗಳಾಗುತ್ತವೆ. ಕುದುರೆಗಳು ಹೆಸರು ಹೇಳಲಾಗದ ಬಣ್ಣಗಳಿಂದ ಕೂಡಿದ್ದರೆ, ಹಕ್ಕಿಗಳಿಗೆ ಹೊಂದುವ ಬಣ್ಣಗಳಿಂದ ಕೂಡಿದ್ದರೆ ಗಮನಿಸಿ ಆಯಾ ಹೆಸರುಗಳನ್ನು ಇಡತಕ್ಕದ್ದು.

ಬಿಳಿಯ ಬಣ್ಣದ ಕುದುರೆ ಶುಭಕರ, ಮಂಗಳಕಾರ್ಯದಲ್ಲಿ ಪ್ರಯೋಜನಕ್ಕೆ ಬರುತ್ತದೆ. ಅದನ್ನು ಏರಿದ ರಾಜನು ಯುದ್ಧದಲ್ಲಿ ಗೆಲ್ಲುತ್ತಾನೆ. ಏಕಛತ್ರಾಧಿಪತಿಯಾಗಿ ಮೆರೆಯುತ್ತಾನೆ. ಬಿಳಿಯ ಬಣ್ಣದ ಕುದುರೆಗಳಲ್ಲಿ ಕೊಂಗ, ಮೇಘವರ್ಣ, ಶ್ಯಾಮವರ್ಣ, ಸಿದ್ಧಾರ್ಥ, ಬೇರ, ಬೋರ ಮುಂತಾದ ಕುದುರೆಗಳು ಲಕ್ಷಣವಾದ ಕುದುರೆಗಳು.

3. ಪುಂಡ್ರ

ಕುದುರೆಗಳ ಪುಂಡ್ರ, ಪುಷ್ಪ, ಗಂಧ, ಹೇಷಿತ, ಛವಿಗಳ ವಿವರಗಳು.

ಖರ, ದಂಡ, ಅಂಕುಶ, ಝಷ, ಚಾಮರ, ದರ್ಪಣ, ಕಳಶ, ಶಂಖ, ಭೃಂಗಾರು, ನಿಶಾಕರ, ಶಕ್ತಿ, ಖಡ್ಗ, ಮುಸಲ ಆಕಾರದ ಪುಂಡ್ರಗಳು ಶುಭ. ಚಾಪ, ಶ್ರೀವೃಕ್ಷ, ಸ್ರುವೆ, ಯೂಪ, ಸ್ವಸ್ತಿಕ, ವಜ್ರ ಆಕಾರದ ಪುಂಡ್ರವಿರುವ ಕುದುರೆ ಪೂಜ್ಯ.

ಆನನ, ಶಿರಪ್ರದೇಶಗಳಲ್ಲಿ ಯಾವುದೇ ವಿಧವಾದ ಬಿಳುಪೂ ಇಲ್ಲದಿದ್ದು ಗಂಗಾತಟಿ ಸಂಸ್ಥಾನದಲ್ಲಿ ಬಿಳುಪಿದ್ದರೆ ಅದನ್ನು ಆಳಬಾರದು, ತಿರುಮುರುಕನಾದ, ನೇರವಾಗಿಲ್ಲದ, ಉರುಗಿದ, ಬಾಗಿದ್ದು ಲಲಾಟಾಂತರದಲ್ಲಿ ಹರಿದ ಪುಂಡ್ರವಿದ್ದರೆ ನಷ್ಟ.

ಪುಷ್ಪ

ಬಿಳಿಯ ಪುಷ್ಪಗಳು ಶುಭದ. ಕರಿಯ ಪುಷ್ಪವುಳ್ಳ ಕುದುರೆಗಳನ್ನು ಪರಿಹರಿಸ ಬೇಕು. ಪುಷ್ಪಗಳು ತಮ್ಮ ಫಲವನ್ನು ಏಳುಯುದ್ಧದಲ್ಲಿ ಅಲ್ಲದಿದ್ದರೆ ಏಳುಮಾಸದಲ್ಲಿ ಅಲ್ಲದಿದ್ದರೆ ಏಳುವರ್ಷಗಳಲ್ಲಿ ಅಧಿಪತಿಗೆ ಕೊಡುತ್ತವೆ.

ಗಂಧ

ಕಣ್ಣು, ಬಾಯಿ, ಕಿವಿ, ಮೂಗು, ದೇಹ, ಗುಹ್ಯ, ಪುರೀಷ, ಸ್ವೇದ, ಮೂತ್ರ ಗಳಿಂದ ಗಂಧ ಹುಟ್ಟುತ್ತದೆ.

ಕಬ್ಬಿನ ಹಾಲು, ಹೊಸತುಪ್ಪ, ಹಸುವಿನ ಹಾಲು, ಶಾಲಿ, ತಂಡುಲ, ಜೇನು ತುಪ್ಪ, ದ್ರಾಕ್ಷಾಸಮಾನವಾದ ಗಂಧಗಳು ಉತ್ತಮ. ತಾವರೆ, ಕಣಗಿಲೆ, ಕದಂಬ, ಕುವಲಯದ ಜಾತಿಯ ಗಂಧಗಳು ಜಯವನ್ನು ಕೊಡುತ್ತವೆ. ಬಾಳ, ಮಲಯರುಹ, ಕರ್ಬಾಲ, ಕೋಷ್ಟ, ಕಚೋರ, ಏಲಕ್ಕಿ, ಲವಂಗ, ಕಾಲಾಗರುಗಳಿಗೆ ಆಗರವಾದ ಗಂಧ ಉತ್ಸಾಹಕರ.

ಆಸವ, ಅಭ್ರ, ಹುತ್ತ, ಬತ್ತದ ಅರಳು, ಬಿಲ್ವಪತ್ರ, ಮದ್ಯ, ಹಲಸಿನ ಹಣ್ಣಿನ ವಾಸನೆಯಿಂದ ಕುದುರೆಯು ನಿಶ್ವಾಸ ಕೊಡಿದ್ದರೆ ಶುಭಕರ. ನೋಡುವಲ್ಲಿ, ಮೈ ತೊಳೆಯುವಲ್ಲಿ ನೆನೆದ ನೆಲದಿಂದ ಹೊಮ್ಮುವ ವಾಸನೆ ಬಂದರೆ ಶುಭದ. ಅದು ಚಕ್ರವರ್ತಿಯೋಗ್ಯ. ಹಂದಿ, ಆನೆ, ಕತ್ತೆ, ಹೋತ ಮುಂತಾದುವುಗಳ ಗಂಧದಿಂದ ಕೂಡಿದ ಕುದುರೆ ಭಯ, ಹಾನಿ, ಶೋಕವನ್ನು ತರುತ್ತದೆ, ಮರಣಕರ. ಬಿಸಿಯ ರಕ್ತ, ಮೀನಿನ ಹೊಲಸು, ಮಷಕ, ಸುಂಡಿಲಿ, ಮಜ್ಜಿಗೆ, ಹಸುವಿನ ಚರ್ಮ, ಲೋಯಿಸರ, ಮುತ್ತುಗದ ಗಂಧ, ಬಸೆಯ ರೀತಿಯ ಗಂಧವಿದ್ದರೆ ಅದು ಅಶುಭ.

ಹೇಷಿತ

ಸ್ವರಗಳಲ್ಲಿ ಶುಭ, ಅಶುಭವೆಂದು ಎರಡು ವಿಧ. ಹೃದಯ, ವಕ್ಷ, ಕೊರಳು, ಶಿರದಿಂದ ಹೊರಬಂದ ಸ್ವರವನ್ನು ಹೇಷಿತವೆನ್ನುತ್ತಾರೆ. ಘನ, ಗಂಭೀರ, ಉತ್ಸಾಹ ದಿಂದ ಕೂಡಿದ ಹೇಷಿತ ಧನಕನಕ ಸಮೃದ್ಧಿಯನ್ನು ಒದಗಿಸುತ್ತದೆ. ಜಯ ವನ್ನುಂಟುಮಾಡುತ್ತದೆ. ಮದಿಸಿದ ಆನೆ, ಗುಡುಗು, ಶಾರ್ದೂಲ, ಕ್ರೌಂಚ, ರಥ, ತಮ್ಮಟೆ, ಶಂಖ, ಪುಣ್ಯಾಹ, ವೃಷಭ, ಸಿಂಹ ಸದೃಶ ಸ್ವರಗಳು ಶುಭಕರ.

ಘೋರ ಕಠೋರವಾದ ಸ್ವನಗಳು ಅಶುಭಕರ. ಹಂದಿ, ಕತ್ತೆ, ಕಳಭ, ಬಳ್ಳು, ನರಿ, ಚಿಕ್ಕು, ಕಾಗೆ, ಗೂಬೆ, ನಾಯಿಗಳ ರೀತಿಯ ಸ್ವರ ಅಶುಭಕರ.

ಸತ್ವ

ಶ್ರೇಷ್ಠ ಮಧ್ಯಮ ಕನಿಷ್ಠವೆಂದು ಸತ್ವದಲ್ಲಿ ಮೂರು ವಿಧ. ಸತ್ವಗುಣ 16ವಿಧ. ಭೀತವದನ, ಚಪಲ, ಕಾಮಾತುರ, ಹೆಚ್ಚು ಆಹಾರವನ್ನು ಸೇವಿಸುವ ಕುದುರೆ ಖರಸತ್ವ, ಭೀತ, ಕ್ಷುಧಾರ್ತಿ, ತೃಷ್ಣಾತುರ, ಅತಿದೈನ್ಯ ರೂಪಿಯಾದ ಕುದುರೆ ಪಶುಸತ್ವ. ಭೀರು, ಚಲಪ್ರಕೃತಿ, ಜಲಾಹಾರಿ ಪ್ರಿಯವಾದಿಯಾದ ಕುದುರೆ ಮತ್ಸ್ಯಸತ್ವ. ನಿದ್ರೆಯಿಂದ ಕೂಡಿದ ಕಣ್ಣುಗಳು, ಆಲಸ್ಯಪೂರ್ಣವಾದದ್ದು, ಧ್ಯಾನಸ್ಥನಾದ ಕುದುರೆ ಭೈರವಸತ್ವ.

ಗತಿ

ಗತಿಯಲ್ಲಿ ಶುಭ, ಅಶುಭಗಳೆಂದು ಎರಡು ವಿಧ. ಒಂದಕ್ಕೊಂದು ಬೆರೆಸದ ಖುರ, ಒಂದರಲ್ಲಿ ಒಂದು ಸೇರದ ಕಾಲು, ಕುಳಿದ ಬೆನ್ನು, ಅಡಗಿದ ಜಘನದಲ್ಲಿ ಸೇರಿದ ಬಾಲ, ಕೊರಳು ಮತ್ತು ಉನ್ನತವಕ್ಷದಿಂದ ಎಸೆಯುವ ಲಘುಗತಿ ಶುಭಕರವಾದುದು.

ಆನೆ, ಕರಭ, ನವಿಲು, ಹುಲಿ, ಹಸು, ಗೂಳಿ, ಹಂಸ, ಚಕ್ರವಾಕ, ಸಿಂಹ, ವಾನರ ಎನ್ನುವ ಗತಿಗಳುಳ್ಳ ಕುದುರೆ ಶುಭಕರ. ಹದಿನಾರು ಮಾತ್ರೆಗಳ ಕಾಲದಲ್ಲಿ ಮೂರು ಬಿಲ್ಲಿನ ಅಂತರವನ್ನು ಕ್ರಮಿಸಿ ಹಿಂದಿರುಗುವ ಕುದುರೆ ಉತ್ತಮ ಜವ. ಇಪ್ಪತ್ತನಾಲ್ಕು ಮಾತ್ರೆ ಕಾಲದಲ್ಲಿ ನೂರು ಬಿಲ್ಲಿನ ಅಂತರವನ್ನು ಕ್ರಮಿಸಿ ಹಿಂದಿರುಗುವ ಕುದುರೆ ಮಧ್ಯಮ ಜವ. ಮೂವತ್ತೆರಡು ಮಾತ್ರೆ ಕಾಲದಲ್ಲಿ ನೂರು ಬಿಲ್ಲಿನ ಅಂತರವನ್ನು ಕ್ರಮಿಸಿ ಹಿಂದಿರುಗುವ ಕುದುರೆ ಕನಿಷ್ಠ ಜವ. ಭದ್ರ, ತಾಮರಸ, ತೀಕ್ಷ್ಣ, ವಿಷಮರಸ, ಮಂದ ಎನ್ನುವ ಕುದುರೆಗಳ ಗತಿಲಕ್ಷಣಗಳ ವಿವರಗಳಿವೆ.

ಛಾಯೆ

ಧಾರಿಣಿ, ವಾರಿಣಿ, ಪಾವಕ ಛಾಯೆಗಳ ಕುದುರೆ ಉತ್ತಮ. ಪವನ, ನಭ ಛಾಯೆಗಳು ಕುದುರೆಗಳಿಗೆ ಅನಾಯುಷ್ಯಕರ. ಮಹಾ ದೋಷಕರ. ಸ್ಥಾನ, ಸುಪ್ತ, ವ್ಯಕ್ತ, ಅವಸಾನವೆನ್ನುವ ನಾಲ್ಕು ಸ್ಥಾನಗಳಲ್ಲಿ ಶುಭಾಶುಭ ಫಲಪ್ರದ ಛಾಯೆಗಳನ್ನು ನೋಡಬೇಕು.

4. ಸುಳಿಗಳು

ಧ್ರುವ, ಅನ್ಯ, ಅಶುಭವೆಂದು ಸುಳಿಗಳು ಮೂರುಭೇದ. ಇವು ಎಂಟು ವಿಧವಾಗಿ ನೂರು ಸ್ಥಾನದಲ್ಲಿರುತ್ತವೆ. ಹತ್ತು ಆವರ್ತ ಧ್ರುವ, ಎಪ್ಪತ್ತಾರು ಆವರ್ತ

ಅಶುಭ. ಮೂವತ್ತೇಳು ಶುಭ. ನೂರೆಪ್ಪತ್ತಾರು ಸುಳಿಗಳು ರೋಮಜ, ಅಭ್ರಜಗಳೆ ಜನಿಸುತ್ತವೆ.

ಶುಭ ಸುಳಿಗಳು ಜಯ, ಸುತ, ಕೀರ್ತಿಯನ್ನುಂಟುಮಾಡುತ್ತವೆ. ಶ್ರೀವೃಕ್ಷ, ಅಂಗವಿಧಿ, ಶ್ರೀಕರಣಗಳು ಶುಭ ಸುಳಿಗಳು. ಕೆಟ್ಟಫಲವನ್ನು ನೀಡುವ ಸುಳಿಗಳೂ ಇವೆ.

ರೌದ್ರಹಯ, ಧೂಮಕೇತು ಮುಂತಾದ ಕುದುರೆಗಳ ಲಕ್ಷಣಗಳು. ಕಕುದಿ, ಅವಯವಹೀನ, ಅವಯವ ಅಧಿಕ, ಉರಸ್ತನಿ, ತ್ರಿಕರ್ಣಿ, ದ್ವಿಮುಖ, ಅಂಧಕ, ಮಂದಕ, ರಸದೋಷಕ, ಶೃಂಗಿಯಾದ ಕುದುರೆಗಳು ಕುಲವನ್ನು ನಾಶಪಡಿಸುತ್ತವೆ.

ಸೂಕರ, ವ್ಯಾಘ್ರಾಜಿನ, ಮಂಡೂಕ, ಉರಗ, ಕೃಷ್ಣರಸನ, ತಾಳುಕಶಿರ, ಕಾಕಮುಖ, ಕರಾಳಿ ಆದ ಕುದುರೆಗಳು ಮರಣಕರ.

ಬೆಳಗಿನ ಜಾವದಲ್ಲಿ ಮಂಗಳ ಪಾಠಕರಧ್ವನಿ ಮೃದಂಗ ಶಂಖಧ್ವಾನಗಳನ್ನು ಲಾಲಿಸಿ ಕುದುರೆ ಸೌಷ್ಠವದಿಂದ ಕೆಳಿರಿದರೆ ಪತಿಗೆ ಜಯ ಸೂಚಿಸುತ್ತದೆ. ಧ್ವಜ ಬಿಳಿಯಕೊಡೆ, ಮದಗಜ, ಮುಗಿಲು, ಸೂರ್ಯ, ಕನ್ನಿಕೆ ಮುಂತಾದವನ್ನು ಕಂಡು ಕೆಳಿರಿದರೆ ಜಯವನ್ನು ಕೊಡುತ್ತದೆ. ಮೇಯುವಾಗ, ಬಾಯ್ತುಂಬ ಹುಲ್ಲು ಇರುವಾಗ ಕೆಳಿರಿದರೆ ಜಯಕರ. ಹೀಗೆಯೇ ಧನಲಾಭ, ಪಯಣ, ಭಯ, ಮರಣ ಮುಂತಾದುವನ್ನು ಹೇಷಿತಗಳು ತಿಳಿಸುತ್ತವೆ.

ಯಜಮಾನನಿಗೆ ಶುಭ ಅಶುಭಗಳನ್ನು ಕುದುರೆಯು ಬಾಲವನ್ನು ಕೆದರುತ್ತ ಪ್ರಕಟಿಸುತ್ತದೆ. ವಾಮ ಸುಮನಸನಾಗಿ ದಕ್ಷಿಣವಾಲೋತ್ಕರವನ್ನು ಕೆದರಿದರೆ ಅದು ಶುಭ ಸೂಚಕ. ಪ್ರಕೀರ್ಣ ಕೆದರಿದರೆ ಸಾಮಾನ್ಯವಾದುದನ್ನು, ಲಾಭವನ್ನು, ಪಯಣವನ್ನು ಸೂಚಿಸುತ್ತದೆ.

ಕುದುರೆಯ ಮೈಯಲ್ಲಿ ಉರಿ, ಉಳ್ಕ, ಕಿಡಿಗಳು ಚೆನ್ನಾಗಿ ಆದರೆ ಶುಭಕರ. ಕುದುರೆಯ ಪೂರ್ವಭಾಗದಲ್ಲಿ ಉರಿ ಉಳ್ಕ ಕಿಡಿಗಳು ಉದುರಿದರೆ ವಸುಂಧರೆ ಕೆಡುತ್ತದೆ. ಅದು ಕರದಲ್ಲಿ ಹುಟ್ಟಿದರೆ ಪತಿಗೆ ಭಯವನ್ನುಂಟುಮಾಡುತ್ತದೆ. ಹೀಗೆಯೇ ಶಿರ, ಕೋಶ, ಜಘನಾಂತರಾಳ, ವಾಳಧಿ, ವಾಜಿಗಳ ಶರೀರದಿಂದ ಹುಟ್ಟಿದ ಕುದುರೆಗಳ ಉರಿ, ಉಳ್ಕ ಕಿಡಿಗಳು ಶುಭಾಶುಭಗಳನ್ನು ಸೂಚಿಸುತ್ತವೆ.

ಪ್ರಯಾಣಮಾಡುವಾಗ, ಲಾಯಕ್ಕೆ ಹಿಂದಿರುಗುವಾಗ, ಯುದ್ಧಕ್ಕೆ ನಡೆಯುವಲ್ಲಿ ಕುದುರೆಯು ಉಗ್ರಾಕೃತಿಯುದಾಗಲು, ಭೀತಮನನಾಗಲು, ಮೂತ್ರಿಸಲು ಅಪಜಯ.

ಸುಳಿಯ ದೋಷಗಳನ್ನು ಕಂಡವನು ಆ ಕುದುರೆಯನ್ನು ಹಸ್ತೋದಕ, ರಾವುತ, ಸುವರ್ಣ ಸಮೇತ ವೇದವಿದರಿಗೆ ದಾನ ಕೊಡಬೇಕು.

5. ಆಯುರ್ನಿರ್ಣಯ

ಕುದುರೆಯ ಆಯುಸ್ಸನ್ನು ಬಾಹ್ಯ, ಆಭ್ಯಂತರ ಎನ್ನುವ ಎರಡು ರೀತಿಗಳಲ್ಲಿ ಪರೀಕ್ಷಿಸಬೇಕು. ತನುವಿನಿಂದ ಬಾಹ್ಯ, ಹಲ್ಲುಗಳಿಂದ ಆಭ್ಯಂತರ ಎನ್ನುವ ಎರಡು ರೀತಿಯ ಪರೀಕ್ಷೆಗಳಿವೆ. ಸ್ವರ, ಅಜಿನ, ಖುರ, ಚೇಷ್ಟೆ, ದಶನಾಗ್ರ, ಉಲ್ಕೆಗಳಿಂದ ಹುಮವಯೋಲಕ್ಷಣ ತಿಳಿದುಬರುತ್ತದೆ. ಒಂದು ತಿಂಗಳಿನಿಂದ ಮೂವತ್ತೆರಡು ವರುಷಗಳವರೆವಿಗೆ ವಯೋಲಕ್ಷಣವನ್ನು ಹೇಳಿದೆ.

6. ಶರೀರಲಕ್ಷಣ

ಶರೀರಲಕ್ಷಣಗಳನ್ನು ಗಮನಿಸಿ ಮೂವತ್ತೆರಡು ವರುಷಗಳ ಆಯುವಿನ ಕ್ರಮವನ್ನು ತಿಳಿಸಬಹುದು.

ಕುದುರೆಯ ಉತ್ಪತ್ತಿ ಕ್ಷೇತ್ರಗಳು ನರ್ಮದೆಯಿಂದ ಉತ್ತರಕ್ಕೆ ಐವತ್ತುನಾಲ್ಕು ಇದ್ದು ಅಲ್ಲಿ ಜನಿಸಿದ ಕುದುರೆಗಳು ಕುಲ, ಬಲ, ತೇಜ, ಸ್ವರೂಪ, ಜವ, ಪ್ರಮಾಣಗಳು ಪರಿಪೂರ್ಣವಾದ ಕುದುರೆಗಳು ದೊರೆಯುತ್ತವೆ. ಕಾಂಭೋಜ, ಬಾಹ್ಲಿಕ, ಸೈಂಧವ ಆರಟ್ಟ, ತೈತಿಲ, ವಾನೇಯ ಎನ್ನುವ ಕುದುರೆಗಳಿಗೆ ಆಯಾ ಪ್ರದೇಶದ ಹೆಸರೆ ಉಳಿದು ಬಂದಿದೆ. ಖರ, ಗಂಧರ್ವ, ಕವುರ್, ಕರೋಷ್ಠ, ಕಾಂಬೋಜ, ಜಾಳಂಧರ ಮಾಳವ, ಕೊಂಗ, ಕೋಸಲ, ವರಾಳ, ಬರ್ಬರ, ತೈತಿಲ, ದುರಭಾನಿ, ಕರಹಾಟ, ಮಾಗಧ, ಕಳಿಂಗ, ಸಿಂಧು, ಕೊಲ್ಲಾಪುರ, ಸೇಹುಣ ಇತ್ಯಾದಿ ಕ್ಷೇತ್ರಗಳಲ್ಲಿ ಕುದುರೆಗಳು ಹುಟ್ಟುತ್ತವೆ. ವಾಯುಕ, ಸಂಚಕ, ಅಮಲಜನೇಯುಕ, ನಾಳಿವಿರಸ, ನಿಯಾಯಿಕ ಎನ್ನುವ ಹೆಸರಿನ 54 ಜಾತಿ ಕುದುರೆಗಳು ಆಯತವಾಗಿವೆ. ನರ್ಮದೆಯಿಂದ ತೆಂಕಲು ತೊಂಬತ್ತು ಪ್ರದೇಶಗಳಲ್ಲಿ ಕುದುರೆ ಉತ್ಪತ್ತಿಯಾಗುತ್ತದೆ. ಆದರೆ ಅಲ್ಲಿನ ಕುದುರೆಗಳ ತೇಜ, ಕುಲ, ಜವ, ಪ್ರಮಾಣ, ಸತ್ವಗಳ ದೃಷ್ಟಿಯಿಂದ ಕನಿಷ್ಠ.

ಕುದುರೆಗಳಲ್ಲಿ ದ್ವಿಜ, ರಾಜ, ವೈಶ್ಯ, ಶೂದ್ರ ಎಂದು ನಾಲ್ಕು ಜಾತಿಯ ಕುದುರೆಗಳಿವೆ. ವಾತ, ಪಿತ್ತ, ಶ್ಲೇಷ್ಮ ಎಂದು ಪ್ರಕೃತಿಗನುಗುಣವಾಗಿಯೂ ಸತ್ವ, ರಜ ತಮ ಎಂದು ಗುಣಗಳಿಗೆ ಅನುಗುಣವಾಗಿಯೂ ವಿಂಗಡಿಸಬಹುದು.

7. ಪೋಷಣವಿಧಿ

ಘೃತ, ಕ್ಷೀರ, ದುಗ್ಧಪಾನಗಳನ್ನು ಯುಕ್ತಾಯುಕ್ತತೆಯನ್ನು ಅರಿತು ನಡೆಸಬೇಕು. ಕುದುರೆ ಕಟ್ಟುವ ಗೂಟ ಚೂಪಾಗಿರಬಾರದು. ಮಲಗುವ ಜಾಗವನ್ನು ಕುಳಿ ತೆವರಿಲ್ಲದಂತೆ ಮಾಡಿ ಕಲ್ಲಿನಿಂದ ಗಟ್ಟಿಸಬೇಕು. ಮಳೆಗಾಲದಲ್ಲಿ ಸೋರದ, ನಿವಾತವಪ್ಪ

ಜಾಗದಲ್ಲಿ ಕುದುರೆಗಳನ್ನು ಕಟ್ಟಬೇಕು. ಮಾಗಿಯಲ್ಲಿ ಆತಪಛಾಯಾಗಾರ ಮತ್ತು ಗ್ರೀಷ್ಮದಲ್ಲಿ ಸುಸ್ಥಾನದಲ್ಲಿ ಕಟ್ಟಬೇಕು. ಬಿಸಿಲು, ಗಾಳಿ, ಮಳೆಗಳಲ್ಲಿ ಕುದುರೆಗಳನ್ನು ಬಿಡಬಾರದು. ಹಾಗೆ ಬಿಟ್ಟರೆ ರೋಗಕ್ಕೆಡೆಯಾಗುತ್ತವೆ. ಕುದುರೆಯ ಉದ್ದದಷ್ಟು ಚರಣಿಯನ್ನು ಮಾಡಬೇಕು. ಅಗಲ ಹಸ್ತವಿಸ್ತಾರವಿರಬೇಕು. ಮುಂಡಿಗೆಗೆ ಒರಗಲಿಕ್ಕೆ ಅನುಕೂಲವಾಗುವಂತಿರಬೇಕು. ಪರಿಚಾರಕನ ದೈನಂದಿನ ಕೆಲಸವೆಂದರೆ ಖುರವನ್ನು ಶೋಧಿಸುವುದು. ಹಗಲೂ ಇರುಳೂ ಮಂದರದಿಂದ ಹೊರಗೆ ತಂದು ಸಮತಲನೆಲದಲ್ಲಿ ಹೊರಳಿಸುವುದು, ಒರೆಸುವುದು. ಕುದುರೆಯನ್ನು ಏರುವವನು ಐದು ಬಲಗಳನ್ನು ಅರಿತವನಾಗಿರಬೇಕು.

ಚೈತ್ರ ವೈಶಾಖಗಳಲ್ಲಿ ಸುರಾಪಾನದ ಜೊತೆಯಲ್ಲಿ ತ್ರಿಫಲವನ್ನು ಕುಡಿಸಬೇಕು. ಅದು ಕುದುರೆಗೆ ರುಜಾಪಹಾರ ಮತ್ತು ಬಲಕರ. ಜ್ಯೇಷ್ಠ ಆಷಾಢದಲ್ಲಿ ಕರ್ಣಾಟಕ ವಾಣಿಯೊಡನೆ ಕೊಟ್ಟರೆ ಕುದುರೆಗೆ ಸಂತುಷ್ಟಮನ ಮತ್ತು ಪುಷ್ಟಿವರ್ಧನವಾಗುತ್ತದೆ. ಶ್ರಾವಣ ಭಾದ್ರಪದಗಳಲ್ಲಿ ಸರ್ವಕ್ಷಾರದೊಡನೆ ಕೊಡುವುದು. ಕುದುರೆಗೆ ಬಲವರ್ಧನ ವಾಗುತ್ತದೆ. ಆಶ್ವಯುಜ ಕಾರ್ತಿಕಗಳಲ್ಲಿ ತ್ರಿಫಲ ಮತ್ತು ಹಾಲನ್ನು ಕೊಡಬೇಕು. ಮಾರ್ಗಶಿರ ಪುಷ್ಯಮಾಸಗಳಲ್ಲಿ ದಧಿಸಮನ್ವಿತವಾಗಿ ಕೊಡುವುದು. ಮಾಘಫಾಲ್ಗುಣ ಗಳಲ್ಲಿ ತ್ರಿಫಲೆಯನ್ನು ಎಣ್ಣೆಯೊಡನೆ ಕೊಡುವುದು.

ಕುದುರೆ ಬಡವಾದರೆ, ಅಧ್ವಾನದಲ್ಲಿ ನೊಂದರೆ, ಯುದ್ಧದಲ್ಲಿ ಗಾಯಗೊಂಡರೆ ಏಳುದಿವಸ ದುಗ್ಧೋದಕವನ್ನು ಕೊಡುವುದು. ನೀರನ್ನು ಕುಡಿಸುವಂತೆ ಹಾಲನ್ನು ಕುಡಿಸುವುದು. ಉಪ್ಪನ್ನು ಕೊಟ್ಟ ದಿವಸ ಹಾಲನ್ನು ಕುಡಿಸಬಾರದು. ಕ್ಷೀರ ಮತ್ತು ಬೆಲ್ಲದ ಕ್ಷೇತ್ರದಲ್ಲಿ ಲವಣ ಅನುಪಯುಕ್ತ. ಚೆನ್ನಾಗಿ ಬೆಳೆದ ಹೊಲದ ಕಡಲೆ ಉತ್ತಮ. ಹುಳುಬಿದ್ದ ಹೊಲದ, ಸಾರವಿಲ್ಲದ, ಬೆಳ್ಳನೆಯ ಕಡಲೆಗಳನ್ನು ಇಕ್ಕಬಾರದು. ಯಾವ ಯಾವ ನಾಡಿನಲ್ಲಿ ಯಾವ ಯಾವ ಆಹಾರವನ್ನು ಇಕ್ಕುತ್ತಾರೆಯೋ ಹಾಗೆ ಅರಿತು ಔಷಧವನ್ನು ಕೊಡುವುದು.

ತ್ರಿದೋಷಹರ, ಆರೋಗ್ಯಕರ, ಕಫಹರ, ಸರ್ವರೋಗಹರ, ಖಾಸವಿನಾಶ, ಅಗ್ನಿದೀಪನ, ಪಿತ್ತನಾಶ ರಕ್ತಪಿತ್ತಾಪಹರ ಮುಂತಾದ ಪಿಂಡಗಳನ್ನು ತಯಾರಿಸಿ ಕೊಡಬೇಕು. ಇಂಗ್ವಾದಿಪಿಂಡವನ್ನು ಬಿಸಿನೀರಿನಲ್ಲಿ ಕೊಡಲು ವಾತ ಕಡಿಮೆಯಾಗುತ್ತದೆ. ತಣ್ಣೀರಿನಿಂದ ಕೊಟ್ಟರೆ ವಾತ ಕಡಿಮೆಯಾಗುತ್ತದೆ. ಕಷಾಯ ಮತ್ತು ಹಸುವಿನ ಹಾಲಿನಿಂದ ಶ್ಲೇಷ್ಮ ಕೆಡುತ್ತದೆ. ಹಾಗೆಯೇ ಬಡವಾದ ಕುದುರೆಗಳನ್ನು ತಿಳಿದು ಉಪಚರಿಸಬೇಕು.

ಜವೆಯನ್ನು ಖಾಣಗಟ್ಟುವಲ್ಲಿ ಉಮಿಯನ್ನು ಕಳೆದು ಕಟ್ಟಬೇಕು. ಹೆಸರು, ತೊಗರಿ, ಉದ್ದು, ಗೋದುವೆಯನ್ನು ಆಹಾರವಾಗಿ ಕೊಡುವಲ್ಲಿ ತೊಳಸಿ ಕಟ್ಟಬೇಕು.

ನೆನೆಹಾಕಿದ ಕಡಲೆಯನ್ನು ಕುದುರೆಗೆ ಕೊಡಬೇಕು. ಮಳೆ, ದುರ್ದಿನ, ಗಾಳಿಯ ದಿವಸಗಳಲ್ಲಿ ಕಡಲೆಯನ್ನು ಕೊಡಬಾರದು. ನಾಂದದ್ದು, ಅಡಿಗಟ್ಟಿ. ಹುಳುತಿಂದದ್ದು, ಮುಗ್ಗಿದ್ದು, ಬೆಂದದ್ದು, ಬೂಷ್ಟುಬಂದದ್ದು, ಮೊಳೆಹೋದುದನ್ನು ಖಾಣವಾಗಿ ಕುದುರೆಗೆ ಕಟ್ಟಬಾರದು. ಬರಗು, ಎಳ್ಳು, ಕೊರೆ, ಸಾಕು, ಸಗಸೆ, ಕುಸುಬೆ, ಕಳಲೆ, ನೆಲ್ಲು, ಸಾವೆಗಳು ಕುದುರೆಗೆ ಅಹಿತಕರವಾದುದು

ಕುದುರೆಗಳಿಗೆ ದೊಡ್ಡದಾದ ಮಡು, ತೊರೆ, ಕೆರೆ, ಬಾವಿ, ಚಿಲುಮೆಗಳ ನೀರನ್ನು, ಹರಿಯುವ ನೀರನ್ನು ಕುಡಿಸಬೇಕು. ಕವಡಿದ್ದು, ಎಲೆ ಕೊಳೆತುದು, ಹುಳಿತದ್ದು, ಹಾವಸೆ, ಸಂಕವಲಿ, ಕಲಂಕ, ಕ್ರಿಮಿಯಿಂದ ಕೂಡಿದ ನೀರನ್ನು ಕುಡಿಸಬಾರದು. ಹಾಗೆ ಕುಡಿಸಿದರೆ ಮಂದಾಗ್ನಿಯಾಗಿ ಆಹಾರವನ್ನು ಸೇವಿಸದೆ ಧಾತುಗಳು ಬಂಧಿಸುತ್ತವೆ.

ಕೆಟ್ಟನೀರಿನಿಂದ ಆಹಾರದಿಂದ ಬಿಸಿಲಿನಿಂದ ಮತ್ತು ಅಸಮರ್ಥ ಆರೋಹಕನಿಂದನ ಕುದುರೆ ಕ್ಷೀಣಿಸುತ್ತದೆ. ರೋಗದಿಂದ ಸಾಯುತ್ತದೆ. ಕುದುರೆಯನ್ನು ಏರುವಲ್ಲಿ ಅವಮಾನಿಸಬಾರದು. ಕುದುರೆಗೆ ಗಂಧ, ಮಾಲೆ, ಆಭರಣ, ಖಾಣ, ಪಾನ, ಭೋಜನ, ಶಯನಗಳಲ್ಲಿ ಆದರವನ್ನು ಮಾಡುವ ಒಡೆಯನ ಶತ್ರುಗಳನ್ನು ಸಮರಾಂಗಣವಲ್ಲಿ ಕುದುರೆ ಕೊನೆಗಾಣಿಸುತ್ತದೆ.

ದೂರಪ್ರಯಾಣ, ಬೇಟೆ, ವಿನೋದ, ಕಾರ್ಯ, ದೊಡ್ಡಯುದ್ಧ, ಸೈನಿಕರು ಮತ್ತುಮದಿಸಿದ ಆನೆಗಳು ಸುತ್ತಿ ಮುತ್ತಿದ ಸಂದರ್ಭದಲ್ಲಿ ಕುದುರೆ ತನ್ನ ಒಡೆಯರ ಮನೋವಾಕ್ಕಾಯ ಕರ್ಮಗಳು ಊರ್ಜಿತವಾಗುವ ಹಾಗೆ ಉತ್ಸಾಹವನ್ನುಂಟು ಮಾಡುತ್ತದೆ.

ರಾಜನಾದವನು ತನ್ನ ಶ್ರೀಯನ್ನು ಮೆರೆಯಲು ನೆಲವನ್ನು ಕಾಪಾಡಿಕೊಳ್ಳಲು, ಶತ್ರುಗಳನ್ನು ಜಯಿಸಲಿಚ್ಛಿಸುವುದಾದರೆ ಆಜಾನೇಯ ಕುದುರೆಯನ್ನು ಸಾಕಬೇಕು. ನಿತ್ಯವೂ ಕುದುರೆಯನ್ನು ಪೂಜಿಸಬೇಕು. ಹಬ್ಬಗಳಂದು ಆರತಿ ಮಾಡಬೇಕು. ಉದಯ ಕಾಲದಲ್ಲಿ ಶುಭಲಕ್ಷಣವುಳ್ಳ ಕುದುರೆಗಳನ್ನು ನೋಡಬೇಕು. ವಿಜಯಾಕಾಂಕ್ಷಿಯಾದ ದೊರೆ ಆನೆ ಕುದುರೆಗಳಿಗೆ ಸ್ನಾನ ಆಹಾರ ಮುಂತಾದುವನ್ನು ನಡೆಸದೆ ತಾನು ಏನನ್ನೂ ಮಾಡಬಾರದು. ಯುದ್ಧದಲ್ಲಿ ಜಯಿಸಲು ಕುದುರೆಯೇ ಮುಖ್ಯವಾದುದರಿಂದ ಬುದ್ಧಿವಂತನಾದವನು ಕುದುರೆಯನ್ನು ಸಾಕಬೇಕು. ಕ್ರೂರಾಯುಧಗಳಿಂದ ಜರ್ಝರಿತವಾಗಿದ್ದರೂ ಬೆನ್ನಿನ ಮೇಲೆ ಯಜಮಾನನಿದ್ದರೆ ಕುದುರೆ ಶತ್ರುಪಾಳೆಯವನ್ನು ದಾಟುತ್ತದೆ.

ಆರುಋತುಗಳಲ್ಲಿಯೂ ಬೇರೆ ಬೇರೆ ಔಷಧವನ್ನು ಕೂಡಿಸಿ ಕೊಡುವುದು ಪ್ರತಿಪಾನ.

8. ನೀರಾಜನ ವಿಧಿ

ಶತ್ರುವನ್ನು ಸಂಹರಿಸಿ ಜಯವಧುವನ್ನು ಅವಧಾರಿಸುವುದಕ್ಕಾಗಿ ರಾಜನಾದವನು ನೀರಾಜನ ವಿಧಿಯನ್ನು ಮಾಡಬೇಕು. ಆಶ್ವಯುಜ ಶುದ್ಧ ಬಿದಿಗೆಯಂದು ಅಶ್ವಾನೀಕಕ್ಕೆ ರಕ್ಷೆಯಿಕ್ಕಬೇಕು.

ದೊಡ್ಡ ಶರೀರದ ಬಿಳಿಯ ಬಣ್ಣದ ದ್ವಿಜವರ್ಗಕ್ಕೆ ಸೇರಿದ ದೀರ್ಘಾಯುವನು ಉತ್ತಮ ಜವವನ್ನು ತೋಯಧರಸ್ವನವುಳ್ಳವನನ್ನು ಲಕ್ಷಣ ಸಂಪನ್ನ, ಉದಾರ ತೇಜೋನಿಧಿಯಾಗಿದ್ದು ಉತ್ತಮ ಶಿಕ್ಷಣ ಹೊಂದಿರುವ ರೇವಾನದಿಯಿಂದ ಉತ್ತ, ದಲ್ಲಿ ಜನಿಸಿರುವ ಕುದುರೆಯನ್ನು ಪಟ್ಟದ ಕುದುರೆಯಾಗಿ ಆಯ್ಕೆ ಮಾಡಬೇಕು. ಆ ಕುದುರೆಗೆ ಸಮವಾದ ಬೀಜದ ಕುದುರೆಯೊಂದನ್ನು ಸಾಕಬೇಕು. ಹೀಗೆಯೇ ಯುವರಾಜ, ಸೇನಾಧಿಪತಿ, ಅಮಾತ್ಯ ಕುದುರೆಗಳನ್ನು ನೇಮಿಸತಕ್ಕದ್ದು.

ವಿಜಯಗಜ, ವಿಜಯಹಯ, ವಿಜಯಭಟ, ವಿಜಯ ವನಿತೆ ಎನ್ನುವ ರತ್ನವ್ರಜದಲ್ಲಿ ಲಕ್ಷಣವನ್ನರಸಬಾರದು. ಬೆಲ್ಲ, ಬತ್ತ, ಅಕ್ಕಿ, ಕನ್ನಡಿ, ಕಲಶ, ಗರಿಕೆ, ತೋರಣ ಮೊಸರು, ಹೂವು ದೀಪ, ರಂಗವಲ್ಲಿ, ಎಲೆಅಡಿಕೆ, ಪವಿತ್ರಗಳು ಪ್ರಸಿದ್ಧವಾದುವು. ಬಿಳಿಯ ಛತ್ರಿ, ಮಂಗಳವಾದ್ಯ, ಚಾಮರ, ಗಣಿಕಾವ್ರಾತದಿಂದ ಕೂಡಿ ಕಹಳಾರವ, ದೊಡನೆ ಮಹಾನವಮಿಯವರೆಗೆ, ತೊರೆ, ಸಮುದ್ರ, ಕೆರೆ, ತಾವರೆ, ಕೊಳಗಳಲ್ಲಿ ತಂದು ಅಭಿಷೇಕ ಮಾಡುವುದು ಬಳಿದ ಮಣ್ಣನ್ನು ತೊಳೆದು ಪಂಚಗವ್ಯವನ್ನು ತಳಿಯಬೇಕು. ಜಲಾವಾಸನನ್ನು ಪೂಜಿಸಿ ಕುಂಕುಮ, ಹರಿದ್ರ, ಗಂಧಾದಿಗಳನ್ನು ಸವರಬೇಕು. ರತ್ನಾವಳಿಯಿಂದ ಕೂಡಿದ ಕಳಸದ ತೊವಲನ್ನು ಧರಿಸಬೇಕು ಮೇಖಲಾಲಂಕೃತಿಯನ್ನು ಇಕ್ಕಬೇಕು. ಮಣಿಸರ, ರೇಷ್ಮೆ ಬಟ್ಟೆ, ರಕ್ಷೆ, ಪವಿತ್ರಾದಿಗಳನ್ನು ಲಲಾಟಪಟ್ಟದಲ್ಲಿ ಕಟ್ಟಬೇಕು. ಅರಿಸಿನ, ಅಪಾಮಾರ್ಗ, ಬಿಳಿಸಾಸುವೆ, ಇಂಗು, ಅಮೃತಬಳ್ಳಿ, ಬೇವು, ಲೋಧ್ರ, ಸಿರಿಸ, ಬಜೆ, ಗುಗ್ಗುಳ, ಇಪ್ಪೆ, ರಾಜವೃಕ್ಷ, ಸರಳ, ಗೋರೋಚನವನ್ನು ಒಂದು ಸೀರೆಯಲ್ಲಿ ಕಟ್ಟಿ ಆ ಪೊಟ್ಟಣವನ್ನು ಕೊರಳಿಗೆ ಕಟಬೇಕು. ಆಗ ಕುದುರೆಗೆ ದೃಷ್ಟಿಯಾಗುವುದಿಲ್ಲ. ರಾಕ್ಷಸ, ಪಿಶಾಚ ಭೂತಗಣಗಳ ಮುಟ್ಟುವುದಿಲ್ಲ.

ದೇವಸ್ಥಾನದ ಮಣ್ಣು, ಆನೆಯ ಕೋಡ ಮಣ್ಣು, ಹುತ್ತದ ಮಣ್ಣು ಮತ್ತು ಅರಮನೆಯ ಮಣ್ಣನ್ನು ಕುದುರೆಯ ಹೃದಯಭಾಗಕ್ಕೆ ಬಳಿಯಬೇಕು. ರಂಗವಲ್ಲಿ ತೋರಣ, ಬಾವುಟ, ತಮಟೆ, ವೇದಘೋಷ, ಶೇಷಾಕ್ಷತೆ, ಹೂವು, ಗಂಧ, ದೀಪ, ಧೂಪಚಯಗಳಿಂದ ಕೂಡಿದ ವಿಶಾಲವಾದ ಶಾಲೆಯಲ್ಲಿ ಹೋಮಮಾಡಿಸಬೇಕು. ಬ್ರಾಹ್ಮಣರಿಗೆ ದಕ್ಷಿಣೆ ಕೊಡಬೇಕು. ಸಂಗ್ರಾಮಜಯಕ್ಕೆ ಬ್ರಾಹ್ಮಣರ ಹರಕೆ ಮತ್ತು ಸೇಸೆಗಳು ಕಲ್ಯಾಣಕರ.

ರೇವಂತ ಪೂಜೆಯನ್ನು ಚರು, ಬಲಿ, ತಾಂಬೂಲ, ಹೂವು, ಅಕ್ಷತೆ, ಗಂಧ, ಕೈದೀವಿಗೆ, ಪಟಹ, ಶಂಖ, ಭೇರೀರವಗಳೊಡನೆ ಮಾಡಬೇಕು. ಜಯದೇವ, ಭಾನು ಪುತ್ರಕ, ಜಯತುರಗಾರೂಢ, ಸಾರವಿಜ್ಞಾನವಿಧಿ ತುರಗಹೃದಯ ಚಿತ್ರ ಎಂದು ರಾಜ ಮತ್ತು ರಾಜಪುತ್ರನಿಂದ ನಮಸ್ಕಾರ ಮಾಡಿಸಬೇಕು. ಅನಂತರ ಅಶ್ವವೈದ್ಯನಿಗೆ ಮಂಗಳ ಜವಳಿ, ಝುಣಂಬ, ಉಂಗುರ, ಕಿವಿಯ ಆಭರಣ ಮುಂತಾದುವನ್ನು ಕೊಟ್ಟು ಶಸ್ತ್ರಗಳನ್ನು ಪೂಜಿಸಬೇಕು.

9. ಅವಯವ ನಿರೂಪಣೆ

ಅಗ್ನಿಕರ್ಮ, ಶಸ್ತ್ರ ಕರ್ಮಗಳಿಗೆ ಕುದುರೆಗಳ ಶರೀರ ಜ್ಞಾನ ಅವಶ್ಯಕ.

ದಂತಪೀಠಿಕೆ, ಗಂಧ, ಸೃಕ್ವಿಣಿ, ಜಿಹ್ವಾಬಂಧ, ತಾಳಿಗೆದೆರೆ, ತಾಳುವಂಶ, ದಂತ, ದಂಷ್ಟ್ರ, ಪಾರಿಪಕ್ಷ, ಮಧ್ಯ, ಸಂದಂಶ, ಕೆಂಬಲ್ಲು, ಅಗ್ರದಂತ, ಬಾಹ್ಯ, ಅಗ್ರ, ತಳಮೂಲ, ಓಷ್ಠ, ಅಧರೋಷ್ಠ, ಪ್ರಪಾನ, ಪ್ರೋಥ, ನಾಸಾಪುಟ ಘೋಣ, ನಾಸಾವಂಶ, ನಯನನಾಸ್ರಪಾತ, ಪರ್ಕಣಿ, ಕ್ಷಣಿ, ಆಲಿ, ಶುಕ್ಲ, ಕೃಷ್ಣಭಾಗ, ಸಿತಭಾಗ, ವಸ್ತಿಭಾಗ, ನಯನಾಕ್ಷಿ ಕೂಟ, ಭ್ರೂಮಧ್ಯ, ಭ್ರೂಕುಟಿ, ಕಣೀರ, ಆಗಸ ಅಪಾಂಗ, ಸ್ತೂಪ, ಲಲಾಟ, ಶಿರ, ಕಿವಿ, ಕರ್ಣ, ಕಟಕ, ಚಿಬುಕ, ಅಣು, ಹನು, ಗಂಡ, ಹನುಚಕ್ರ, ನಿಗಳ, ಜಿಡಗು, ಜಿಡವು, ಪರ್ನಣಿ ಮನ್ಯ, ಮಧ್ಯ, ಗಳ, ತಲೆ, ಹೆಡೆ, ಗ್ರೀವ, ಸ್ಕಂಧ, ಕೇಸರ, ಕಾಕಸೆ, ಕಕ್ಷ, ಕಂಠ, ನಿಗಳ, ಜತ್ರು, ವಕ್ಷ, ಕ್ರೋಳ, ವಂಶ, ಮುಷ್ಕ, ದಾವ, ಬಾಹ್ಯ, ಜಾಂಗಳ, ಕೇಣ, ಜಾನು, ಕಟಕ, ಪಾಣಿ, ಮದಿಸಂದು ನಾಭಿ, ಜಾನುಮಂಜರ, ಜಂಘೆ, ಪಳಿಹತ್ತ, ಗುದ, ಕೂರ್ಚೆ, ಕಳೆ, ಇಸಿಕೆ, ಹೃದಯ ಶಿಶ್ನೆ, ಜಠರ, ಕಕ್ಷ, ವಾಸಾಕೋಷ್ಠ, ಕುಕ್ಷಿ, ಕಕುದು, ರಂಧ್ರ, ಉಪರಂಧ್ರ, ಮೇಖಳೆ, ರೋಮ ರಾಜಿ, ಕಕುಮಧ್ಯ, ಆಸವ, ಪೃಷ್ಠ, ಮಲಕುಟ, ತಿಕ, ರೋಹಿಣಿ ಪಿಂಡು, ಜಘನ, ಪುಚ್ಛದಂಡ, ಮೃತ್ತಿಕೆ, ರೋಮಸ್ವ, ಬಾಲದಂಡ, ಪಾನ, ಶ್ವೇತಪಿಂಡ, ಚಟುಳ, ಶಕ್ತಿ, ಶಿವನಿ, ಮುಷ್ಕ, ಮಂಖಣ, ಮೋಹ, ನಾಭಿ, ಬಕ್ಕು, ಶಿಶ್ನ, ಶಿಶ್ನಾಗ್ರ, ಕರ್ಣಿಕೆ, ಶಿಶ್ನಧಾರೆ, ಅಂಡಜಾತ, ಪಾಂಡುಪಿಂಡ, ಸ್ತುರೆ, ಮಂಜರಿ, ಶಂಖ, ಕೇಣ, ಅಪರ ಭಾಗೆ, ಯೋನಿ, ಸ್ತನ ಮುಂತಾದ 190 ಅವಯವಗಳು ಕುದುರೆಯಲ್ಲಿವೆ.

10 ಗುರುಶಿಷ್ಯ ಲಕ್ಷಣ

ಗುರುವಾದವನು ಅಶ್ವಾಗಮವನ್ನು ದುರಾಚಾರಿಗೆ ಕೊಡಬಾರದು. ಶಿಷ್ಯನ ಶೀಲ ಮತ್ತು ಆಚಾರಗಳನ್ನು ತಿಳಿದು ಕಲಿಸಬೇಕು. ಗುರು ನಿಂದೆಮಾಡುವವನು, ಕಲ್ಲು ಹೃದಯದವನು, ನಾಚಿಕೆಯಿಲ್ಲದವನು, ತಿಳುವಳಿಕೆ ಇಲ್ಲದವನು ನಿಷ್ಠುರ ಸ್ವಭಾವ ದವನು, ಅಲಸಿ, ಕೋಪಿ, ಕುರೂಪಿ, ಪರದಾರಾರೋಹಕ, ಮದ್ಯಪಾನಿ, ವಿಕಾರಿ, ಬಧಿರ, ನಿರ್ವಿಚಾರರತನಿಗೆ ಕುದುರೆಯ ಶಾಸ್ತ್ರವನ್ನು ತಿಳಿಸಬಾರದು.

ಗುರುಭಕ್ತ, ಕುಲಜ, ಪ್ರಸನ್ನವದನ, ಮೇಧಾವಿ, ಸದ್ಧರ್ಮತತ್ಪರ, ಚಿಂತೆ ಯಿಲ್ಲದವನು, ಅನ್ಯರಮಣೀದೂರ, ಕೃತಜ್ಞ, ಸ್ಥಿರ, ನಿರುಜ, ಸರ್ವಜನೋಪಕಾರಿ, ಶುಚಿ, ಸದ್ವಾಕ್ಯ, ನಿರಾಲಸ್ಯರಾದವರನ್ನು ವಿಚಾರಿಸಿ ಉಪದೇಶವನ್ನು ಕೊಡಬೇಕು.

ಶಿಷ್ಯನಾದವನು ತಿಂದು, ಉಂಡು, ಅಲಸದೆ ಕರ್ಪಡ ಪರಿಕರನಾಗಿರಬೇಕು. ಗಂಧಮಾಲ್ಯಾದಿಗಳನ್ನು ಪರಿಹರಿಸಿ ಜಿತೇಂದ್ರಿಯನಾಗಿದ್ದರೆ ಸರ್ವಶಾಸ್ತ್ರಪಾರಗನಾಗು ತ್ತಾನೆ.

ತುರಗದ ವ್ಯಾಧಿಯನ್ನು, ನಿದಾನವನ್ನು ಅರಿಯದ ವೈದ್ಯನನ್ನು ಶಿಕ್ಷಿಸದ ದೊರೆಗೆ ಅಶ್ವೇತಿಪಾತಕ ಬರುತ್ತದೆ. ಅಶ್ವವೈದ್ಯ ಬಲ್ಲವನನ್ನು ಉಳಿಸಿಕೊಂಡರೆ ಆತನಿಗೆ ಅಶ್ವ ಮೇಧದ ಫಲ ದೊರೆಯುತ್ತದೆ. ಕಾಲ ಅಕಾಲವನ್ನು ಅರಿತು ಕುದುರೆಯನ್ನು ರಕ್ಷಿಸಿದ ವೈದ್ಯನನ್ನು ಪಾಲಿಸದವನು ನೃಪನಲ್ಲ. ತುರಗದ ವ್ಯಾಧಿಗೆ ಔಷಧವನ್ನು ಸಂಗ್ರಹಿಸಿ ಇಡದವನು ಮನೆಗೆ ಬೆಂಕಿ ಬಿದ್ದಾಗ ಭಾವಿ ತೋಡುವವನ ಹಾಗೆ. ಎಲ್ಲ ಔಷಧ ವನ್ನು ಸಂಗ್ರಹಿಸಿಟ್ಟು ಬಳಸಬೇಕು. ಒಂದು ಕುದುರೆಯನ್ನು ಕೊಂದವನಿಗೆ ಪಂಚ ಪಾತಕಗಳಲ್ಲಿ ಮೊದಲ ಪಾತಕ ಬರುತ್ತದೆ. ಕುದುರೆಯನ್ನು ಕಟ್ಟಿಹಾಕಿ ಸಾಕದೆ ಕೊಂದ ವನಿಗೆ ಅನೇಕ ಪಾತಕಗಳು ಬರುತ್ತವೆ.

11. ಚಿಕಿತ್ಸಾಭೇದಗಳು

ನಿರೂಹಣ ಕ್ರಿಯೆ, ನೇತ್ರನಾಳಿ ಕ್ರಿಯೆ, ಪತ್ರಸೇಕ, ಮಳಲಸೇಕ, ಬರೆ, ಸೆರೆ ಇಡುವುದು ಚಿಕಿತ್ಸೆಯ ಭೇದಗಳು.

ಶೂಲೆ, ಸುಭಿಕ್ಷ ಶೂಲೆ, ರೂಕ್ಷಾವರ್ತ, ಮೂತ್ರಕೃಚ್ಛ್ರ, ರಕ್ತಮೋಹ, ಕೀಟ ದೋಷ, ವಜ್ರಕೀಟಕ, ಸಿಂಹಾಣ, ಖಾಸ, ರಕ್ತಸಿಂಹಾಣ, ಮುಖಶ್ರವಣೆ, ಮುಷ್ಕ ವಾತ, ವಾತ, ವಿಷಾಣ, ಮುಷ್ಕಶೂಲೆ ಮುಂತಾದವು ರೋಗಗಳು. ಅವುಗಳ ಲಕ್ಷಣ ಮತ್ತು ವೈದ್ಯವನ್ನು ತಿಳಿದಿರಬೇಕು.

12. ವ್ರಣ ಚಿಕಿತ್ಸೆ

ಕುದುರೆಗಳಿಗೆ ಆಗುವ ಹುಣ್ಣು ಮತ್ತು ಗಾಯಗಳನ್ನು ದೋಷಜ, ಸದುವಕ್ಷತ ಮತ್ತು ದುಷ್ಟವ್ರಣವೆಂದು ವಿಭಾಗ ಮಾಡಬಹುದು. ಕೆರಕು, ತುರಿ, ಕಜ್ಜಿ, ಕಂಚುಕಿ, ಕುರುವಂಬುಳು, ಪುತ್ತು, ಪುಗಳು, ಇಬ್ಬಡೆ, ಭಗಂದರ, ಉರುಸೆ, ಕುಷ್ಠ, ತರ್ಜಾ, ನರವುಲಿ, ದುಷ್ಟವ್ರಣಗಳಿಗೆ ಔಷಧೋಪಚಾರಗಳನ್ನು ಮಾಡಬೇಕು.

13. ಜ್ವರ

ಕುದುರೆಗೆ ಜ್ವರವಿಕಾರವಾದರೆ ಮೂತ್ರ ಕೆಂಪಾಗುತ್ತದೆ. ಲದ್ದಿ ಮೆಣಸನ್ನು ಹೋಲುತ್ತದೆ. ಮೇವನ್ನು ಕೊಳ್ಳದು. ಖಾಣಕ್ಕೆ ಬರದು. ಅಶ್ರುಜಲವುಕ್ಕುತ್ತದೆ. ಜ್ವರವಲ್ಲಿ ಪಿತ್ತಜ್ವರ, ಶ್ಲೇಷ್ಮಜ್ವರ, ಸನ್ನಿಪಾತ ಜ್ವರವೆಂದು ಭೇದಗಳು. ಸನ್ನಿಪಾತ

ಜ್ವರ ಪ್ರಾಣಾಂತಕವಾಗುತ್ತದೆ. ವಾತಾತಿಸಾರ, ರಕ್ತಾತಿಸಾರ, ಕಫಾತಿಸಾರವೆಂದು ಅತಿಸಾರ ಮೂರು ಬಗೆ.

ಎವೆಯಿಕ್ಕದೆ, ಕಣ್ಣು ಮುಚ್ಚದೆ, ನೀರು ಓಡಿ, ಚೇಷ್ಟೆಗೆಟ್ಟು ಬಾಲವನ್ನಲ್ಲಾಡಿಸದೆ ರಕ್ತವನ್ನು ಮೂತ್ರಿಸುವ ತುರಗಕ್ಕೆ ಮರಣ. ಮುಖದಿಂದ ಕಪ್ಪುಶ್ಲೇಷ್ಮ ಸುರಿಯಲು ಲದ್ದಿಯಲ್ಲಿ ಕ್ರಿಮಿ ಹರಿದಾಡಲು ಮೈಯಿಕ್ಕುತ್ತ ಬಲಿದು ಏಳುತ್ತ ಮೈಬಿಟ್ಟು ಬಾಲವನ್ನು ಬೀಸದ ಕುದುರೆ ಖಂಡಿತವಾಗಿ ಸಾಯುತ್ತದೆ. ಹಣೆತಲೆಯ ನರ ಮಿಡಿಯದೆ ಸುಮ್ಮನಿರಲು, ಸುಯ್ಯಲು ತುರಗ ಬಾಳದು. ಕೊರಳು ಉರುಗಿ, ಮೂಗಿನಿಂದ ರಕ್ತ ಹೊಮ್ಮಿದರೆ, ಮುಖದಿಂದ ಶ್ಲೇಷ್ಮ ಸುರಿದರೆ. ಶಕ್ತಿಗುಂದಿದರೆ ಗತಪ್ರಾಣವಾಗುತ್ತದೆ.

ರಸವಿಕಾರ, ಮೃಗಜೃಂಭ, ಹರಿಣರೋಗಗಳೂ ಕುದುರೆಗಳನ್ನು ಕಾಡುತ್ತವೆ.

14. ರೋಗ ಭೇದಗಳು

ತಾಲುರೋಗ, ಜಿಹ್ವಾರೋಗ, ಗಲಗ್ರಹ, ರಕ್ತವಿಸ್ರಾವಣ, ದ್ರೋಣಿಕೆ, ಶೋಫ, ಉಲೂಕಪಾತ, ಚರಂರೋಗವುಲೂಕಪಾತ, ನಾಳಿಕಾಣ್ಣ, ವಾಪೆ, ಅನುದ್ರೋಣಿಕೆ ಭೀಮಾದ್ರವಿ, ಚರ್ಚಿಕೆ, ಜಲಗರ ರೋಗಗಳನ್ನು ಪರೀಕ್ಷಿಸಿ ತಿಳಿದು ಉಪಚರಿಸಬೇಕು.

15. ರೋಗಭೇದಗಳು

ತಲರೋಗ, ಕೂರ್ಚಲಿಂಗ, ಉಂಡಿಗೆ, ಗುದಭ್ರಂಶ, ಚಕ್ಷುರೋಗ, ಕಿವಿಯ ಬೇನೆಗಳನ್ನು ತಿಳಿದು ಚಿಕಿತ್ಸೆ ಮಾಡಬೇಕು.

16. ವಿಷವೈದ್ಯ ಹರೀತಕೀಕ್ರಿಯೆ ಇತ್ಯಾದಿ

ವಿಷವೈದ್ಯವನ್ನು, ಕ್ಷಯರೋಗಗಳ ವಿವರಗಳನ್ನು ಚಿಕಿತ್ಸೆಯನ್ನು, ಗುಗ್ಗುಳ ರಸಾಯನ ಮತ್ತು ಹರೀತಕೀಕ್ರಿಯೆಯ ವಿಚಾರಗಳನ್ನು ತಿಳಿದಿರಬೇಕು.

ಆಕರ

ಅಶ್ವಶಾಸ್ತ್ರದ ಆಕರವನ್ನು ಹೇಳುವಲ್ಲಿ ಅಭಿನವಚಂದ್ರನು —

> ಅನುಪಮ ಹಯಶಾಸ್ತ್ರಾಗಮ
> ವನಧಿಯೊಳಾ ಸಿಂಹದತ್ತ ಕೃತಿಲಕ್ಷಣಮಂ
> ದಿನಕರತನಯನ ರೇವಂ
> ತನ ಮತದಿಂ ಪೇಳ್ವೆನೆಸೆವ ಪೊಸಕನ್ನಡದಿಂ ೧-೨೦

ಎಂದಿದ್ದಾನೆ. ಇದುವರೆಗೆ ನಮಗೆ ಸಿಂಹದತ್ತ ಮತ್ತು ರೇವಂತರ ಕೃತಿಗಳಾಗಲಿ, ಆ ಸಂಪ್ರದಾಯಕ್ಕೆ ಸೇರಿದ ಅಶ್ವಶಾಸ್ತ್ರಗಳಾಗಲಿ ದೊರೆತಿಲ್ಲ. ಸಿಂಹದತ್ತ ಮತ್ತು ರೇವಂತರ ಐತಿಹಾಸಿಕತೆಯ ಬಗೆಗೆ ಅನುಮಾನವಿದೆ. ಸಿಂಹದತ್ತ ಬಹುಶಃ ನಾಮ

ಲಿಂಗಾನುಶಾಸನ (ಅಮರ)ವನ್ನು ಬರೆದ ಅಮರಸಿಂಹನಾಗಿದ್ದು ಒಂದು ಅಶ್ವ ಶಾಸ್ತ್ರವನ್ನೂ ರಚಿಸಿರಬಹುದು.

ರೇವಂತ ಐತಿಹಾಸಿಕವ್ಯಕ್ತಿ ಎನ್ನುವುದಕ್ಕಿಂತ ಪೌರಾಣಿಕ ಪುರುಷನಾಗಿಯೇ ಕಂಡುಬರುತ್ತಾನೆ. ಪ್ರಚಲಿತವಿರುವಂತೆ ಆತ ಸೂರ್ಯ ಮತ್ತು ಸಂಜ್ಞೆಯರ ಮಗ. ಆತನನ್ನು ಭಯಂಕರ ಕಾಡಿನಲ್ಲಿ ರಕ್ಷಣೆ ಕೊಡುವವನೆಂದು ಭಾವಿಸಲಾಗಿದೆ. ಮಹಾನವಮಿಯ ಸಂದರ್ಭದಲ್ಲಿ ಸುಖ ಸಂತೋಷ ರಾಜತ್ವ ಆರೋಗ್ಯ ಕೀರ್ತಿ ಉನ್ನತಿಗಳನ್ನು ಬಯಸುವವನು ರೇವಂತನ ಪೂಜೆ ಮಾಡಬೇಕೆಂದು ವರಾಹಮಿಹಿರನ ಕಾಲದಿಂದ ಪ್ರತೀತಿಯಿದ್ದು ಇಂದಿನವರೆಗೂ ನಡೆದುಬಂದಿದೆ. ರೇವಂತನ 28 ಹೆಸರುಗಳು ಹೀಗಿವೆ— ರೈವತ, ಪಾರ್ಥಿವ, ವೀರ, ಮಾತೃಕೋಲಾಹಲ, ಅರುಣ, ಪಂಚಗ್ರೀವ, ಅಶ್ವಪುರುಷ, ಪಿಂಡಕೀ, ಹಯವಾಹಕ, ಸೂರ್ಯಪುತ್ರ, ಮಹಾಸ್ವಾಮಿ, ಛಾಯಾಹೃದಯನಂದನ, ನಾರದಾನಂದಕಾರೀ, ಹೃದಯಜ್ಞ, ರಣಪ್ರಿಯ, ಭಾಸ್ವಾ, ರತ್ನವರ್ತಿಭರ್ತ, ನಿರ್ಭಯ, ಭಯವಿಘ್ನಹ, ಭೂತೇಶ, ತರ್ಜನ, ಭದ್ರ, ಭೂತೇಶ ಭಕ್ತವತ್ಸಲ, ಆರೋಗ್ಯಸ್ಮರಣ, ವೈದ್ಯ, ಸರ್ವರಕ್ಷಾಕರ, ಶಿವ ಈ ಹೆಸರುಗಳನ್ನು ಪ್ರಾತಃಕಾಲ ಮತ್ತು ಸಂಜೆ ಸ್ಮರಿಸಿದರೆ ವಾಂಛಿತಗಳು ನೆರವೇರುತ್ತವೆಯೆನ್ನುವ ನಂಬಿಕೆಯಿದೆ.

ಅಭಿನವಚಂದ್ರನ ಅಶ್ವಶಾಸ್ತ್ರದಲ್ಲಿ ಈ ಬಗೆಗಿನ ವಿವರವಾದ ವರ್ಣನೆ ಎಂಟನೆಯ ಅಧ್ಯಾಯದಲ್ಲಿದೆ. ಅದರ ಪ್ರಕಾರ—

ರೇವಂತ ಪೂಜೆಯಂ ಸ
ದ್ಭಾವದೆ ಮಾಡುವುದು ಚರುವು ಬಲಿ ತಾಂಬೂಲಂ
ಪೂವಕ್ಷತೆ ಗಂಧಂ ಕಯಿ
ದೀವಿಗೆ ಪಟುಪಟಹ ಶಂಖ ಭೇರೀರವದಿಂ ||೮-೨೨

ಜಯದೇವ ಭಾನುಪುತ್ರಕ
ಜಯತುರಗಾರೂಢ ಸಾರವಿಜ್ಞಾನನಿಧಿ
ಜಯ ತುರಗ ಹೃದಯಚಿತ್ತನು
ಜಯತುರಗಪ್ರಿಯ ಸುರೇಜ್ಯ ರೇವಂತಾ ||೮-೨೩

ಎಂದು ಪೊಡಮಡಿಸುವುದು ನೃಪ
ನಂದನನಂ ಸೂರ್ಯನಂದನನ ರೇವಂತಂ
ಗೆಂದುಂ ಸಂಗ್ರಾಮ ಜಯಾ
ನಂದಮನಧಿಪತಿಗೆ ಮಾಡುಗುಂ ರೇವಂತಂ ||೮-೨೪

ಎಂದು ಬರುತ್ತದೆ. ಶಾಸನಗಳಲ್ಲಿ ತುರಗರೇವಂತ, ಅತಿವಿಷಮಹಯಾರೂಢ, ಪ್ರೌಢ ರೇಖಾ ರೇವಂತ, ಕಲಿಯುಗ ರೇವಂತ, ಸುರೇಖಾ ರೇವಂತ, ಅಶ್ವಾರೂಢ ರೇವಂತ

ಎನ್ನುವ ಹಲವು ಬಿರುದುಗಳನ್ನು ಕಾಣಬಹುದು. ಈ ಬಗೆಯ ರೇವಾಂತಾರಾಧನೆ ಕರ್ನಾಟಕದಲ್ಲಿಯೇ ಅಲ್ಲದೆ ಮಧ್ಯಪ್ರದೇಶ, ಗುಜರಾತ್‌ಗಳಲ್ಲಿಯೂ ಪ್ರಚಲಿತ ವಿದ್ದಿತು.[1] ಯುದ್ಧರಂಗದಲ್ಲಿ ಮಡಿದ ಶ್ರೇಷ್ಠ ಅಶ್ವಾರೋಹಿಯು ಸ್ಮಾರಕವಾಗಿ ನಿಲ್ಲಿಸುವ ಕಲ್ಲುಗಳಿಗೆ ರೇವಂತಶಿಲ್ಪ ಎನ್ನುವ ಹೆಸರಿದೆ. ಅಲ್ಲದೆ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕು ನಗರ್ಲೆ, ಕೊಳ್ಳೆಗಾಲ ತಾಲ್ಲೂಕು ಸತ್ಯಾಗಾಲ, ಗುಂಡ್ಲುಪೇಟೆ ತಾಲ್ಲೂಕು ತ್ರಿಯಂಬಕಪುರ ಮತ್ತು ರಾಘವಪುರಗಳಲ್ಲಿ ಈ ಬಗೆಯ ಶಿಲ್ಪಗಳು ಕಂಡುಬರುತ್ತವೆ. ಇಷ್ಟು ಪ್ರಸಿದ್ಧ ಪುರುಷನಾದ ರೇವಂತ ಬರೆದಿರುವ ಅಶ್ವಶಾಸ್ತ್ರದ ಬಗೆಗೆ ಇದುವರೆಗೂ ಏನೂ ತಿಳಿದುಬಂದಿಲ್ಲ.

ರಾಮಚಂದ್ರನು ತನ್ನ ಅಶ್ವಶಾಸ್ತ್ರದಲ್ಲಿ ರೇವಂತ, ಸಿಂಹದತ್ತ ಮತ್ತು ಶಾಲಿಹೋತ್ರರು ಅಶ್ವಶಾಸ್ತ್ರಜ್ಞರೆಂದು ತಿಳಿಸಿದ್ದಾನೆ. ಶಾಲಿಹೋತ್ರನನ್ನು ಅನುಸರಿಸಿ ತಾನು ಕೃತಿ ರಚನೆ ಮಾಡಿರುವುದಾಗಿ ತಿಳಿಸಿದ್ದಾನೆ. ಅಭಿನವಚಂದ್ರನ ಅಶ್ವಶಾಸ್ತ್ರ ಮತ್ತು ರಾಮಚಂದ್ರನ ಅಶ್ವಶಾಸ್ತ್ರಗಳಿಗೆ ತುಂಬ ಹೋಲಿಕೆಯಿದೆ. ಎಂದರೆ ಅಭಿನವ ಚಂದ್ರನ ಕೃತಿ ಶಾಲಿಹೋತ್ರವನ್ನು ಹೆಚ್ಚು ಹೋಲುತ್ತದೆನ್ನಬಹುದು. ಇದಕ್ಕೆ ಪೋಷಕವಾದ ಮತ್ತಷ್ಟು ಅಂಶಗಳು ಎಂದರೆ ಶಾಲಿಹೋತ್ರನ ಕೃತಿಗೆ ಸಂವಾದಿಯಾದ ಭಾಗಗಳು ಹೀಗಿವೆ—

೧. ಅಶ್ವಜಾ ಬ್ರಹ್ಮಣೋಹ್ಯಾದೌ ತುರಂಗಾ ಮುಖಸಂಭವಾಃ
ತದ್ವಕ್ತ್ರ ಸಂಭವಾಃ ಖ್ಯಾತಾಃ ಅತಶ್ಚೈವಾಗ್ನಿಸಂಭವಾಃ
ಶಾಲಿಹೋತ್ರ ಅಶ್ವವೈದ್ಯಂ ॥ ೧–೩

ಎನ್ನುವ ಶ್ಲೋಕ ಅಭಿನವಚಂದ್ರನಲ್ಲಿ –

ಚತುರಾಸ್ಯನಶ್ರುಧಾರಾ
ಪ್ರತತಿಯೊಳುದಯಿಸಿದವಶ್ವಸಂಭವಮಾಜ್ಯಾ
ಹುತವಹಮುಖದಿಂದಶ್ವ
ಪ್ರತತಿಗಳುದಯಿಸಿದವಗ್ನಿ ಸಂಭವ ತುರಗಂ॥ ೧–೨೧

೨. ಮಿಳಿತ್ವಾ ಮಥನಂ ಚತುಸ್ಸಮುದ್ರಂ ದೇವರಾಕ್ಷಸಾಃ
ತಸ್ಮಾತ್ಸಮುದ್ರಾತ್ತತ್ಕಾಲೇಽಹ್ಯಶ್ವಾ ಅಮೃತಸಂಭವಾಃ ॥ ೧-೪

---

[1] ಶಾಸನಗಳಲ್ಲಿ ರೇವಂತ. ಎಚ್. ಆರ್. ರಘುನಾಥಭಟ್ಟ ಪುಟ 7 ಕರ್ನಾಟಕ ಭಾರತಿ ೯ ೩ ; 1977 ಧಾರವಾಡ.

ಎನ್ನುವ ಶ್ಲೋಕ ಅಭಿನವಚಂದ್ರನಲ್ಲಿ—

ಸುರರುಂ ದಾನವರುಂ ಭೋ
ರ್ಗರೆದಮೃತಾಂಭೋಧಿ ಮಥನಮಂ ಮಾಡೆ ನಭಂ
ಬಿರಿವಿನೆಗಂ ಕಿಳುಋತ್ತಂ
ಶರಧಿಯುಲುದಯಿಸಿದಮೃತಸಂಭವ ತುರಗಂ ॥ ೧-೨೨

೩. ಇತ್ಥ ತುರಂಗ ಸಂಘಾಶ್ಚ ಉತ್ಪನ್ನಾಲಂಘತುಂದಿತಃ
ವಿದಿತಶ್ಚಪುರಾಣ್ಯಚ್ಚೈಃ ಪರ್ವತಾಂಶ್ಚ ಸಮಂತತಃ ॥ ೧-೬

ಎನ್ನುವ ಶ್ಲೋಕ ಅಭಿನವಚಂದ್ರನಲ್ಲಿ —

ಇಂತು ಹಯಸಂಕುಲಂ ಪಲ
ವುಂ ತೆಱದಿನೆಱಕೆ ಪುಟ್ಟಿಯುಮನವೇ (?)
ಗಂ ತಮ್ಮಿಚ್ಛೆಯೊಳಂ ದಿ
ಗ್ದಂತಿನರಂ ಪಾಱುತುಂ ತೊಳಲ್ದವು ನಭದೊಳ್ ॥೧-೨೪

೪. ಆವರ್ತಂತವನೀ ಮಧ್ಯೇ ಯಥಾ ಸ್ವಚ್ಛಂದ ಚಾರಿಣಃ
ಕೂಪಾದ್ಯುತ್ಪನ್ನ ರೋಪಶ್ಚೈವಶಾಸ್ತ್ರಾರ್ಥತತ್ಪರಂ ॥ ೧-೭
ತುರಗಾಣಾಂ ಮನೋಜ್ಞಃ ಶಾಪಾನುಗ್ರಹ ಕಾರಕಃ
ಋಷೀಣಾಮಧಿಪೋಽಪ್ಯೇಷ ಶಾಲಿಹೊತ್ರ ಇತಿಶ್ರುತಃ ॥ ೧-೮

ಎನ್ನುವ ಶ್ಲೋಕಗಳು ಅಭಿನವಚಂದ್ರನಲ್ಲಿ —

ಕೋಪಪ್ರಸಾದದೊಳ್ ಶಿವ
ರೂಪಕನಂ ಸಕಲಶಾಸ್ತ್ರವಿದನಂ ತುರಗ
ವ್ಯಾಪಾರ ಕುಶಲಂ ಕೌಶಲ
ಶಾಪಾನುಗ್ರಹ ಸಮರ್ಥನಂ ಮುನಿಪತಿಯಂ ॥ ೧-೨೫

೫. ವಾಹನಾಂ ಪರಮಾಯುಸ್ತು ದ್ವಾತ್ರಿಂಶದ್ವತ್ಸರಂ ಸ್ಮೃತಂ
ದ್ವಾತ್ರಿಂಶದ್ವತ್ಸರಾದೂರ್ಧ್ವಂ ದ್ವಿಮಾಸಂ ದ್ವಾದಶಂ ದಿನಂ ॥ ೧-೧೫

ಎನ್ನುವ ಶ್ಲೋಕ ಅಭಿನವ ಚಂದ್ರನಲ್ಲಿ—

ಪರಮಾಯುಷ್ಯಂ ಮೂವ
ತ್ತೆರಡಬ್ದಂ ಮೂಱುವರುಷದಿಂ ದ್ವಾದಶವಾ
ಸರಮುಮೆರಳ್ತಿಂಗಳೊಳುಂ
ಪರಿವರ್ತಿಕುಮೊಂದೆ ಸಂದ ಸಂದಂಶಂಗಳ್ ॥ ೧-೨೦

ಎಂದು ಆಗಿದೆ. ಹೀಗೆ ಕೃತಿಯುದ್ದಕ್ಕೂ ಅನೇಕ ಸಾಮ್ಯಗಳಿವೆಯಲ್ಲದೆ ವಸ್ತು ನಿರ್ವಹಣೆಯೂ ಎರಡು ಕೃತಿಗಳಲ್ಲಿಯೂ ಸಮಾನವಾಗಿರುವುದನ್ನು ನೋಡಬಹುದು.

ಶ್ರೀಮಾನ್ ಎಚ್. ಶೇಷಯ್ಯಂಗಾರ್ ಅವರು ತಾವು ಸಂಪಾದಿಸಿರುವ ಅಭಿನವ ಚಂದ್ರನ ಅಶ್ವಶಾಸ್ತ್ರಂ ಮುನ್ನುಡಿಯಲ್ಲಿ ಗ್ರಂಥದ ಆಕರದ ಬಗ್ಗೆ ಹೀಗೆ ಬರೆದಿದ್ದಾರೆ. "ಈ ಗ್ರಂಥ ಕರ್ತೃವು ಹೇಳಿರುವ ಸಿಂಹದತ್ತ, ರೇವಂತ ಇವರಿಂದ ಬರೆಯಲ್ಪಟ್ಟ ಸಂಸ್ಕೃತಗ್ರಂಥಗಳಾವುವೆಂದು ತಿಳಿಯಬರುವುದಿಲ್ಲ. ಆದರೆ ಶಾಲಿಹೋತ್ರ ಋಷಿ ಪ್ರಣೀತವಾದ ಅಶ್ವಶಾಸ್ತ್ರವೊಂದು ಮೈಸೂರು ಲೈಬ್ರರಿಯಲ್ಲಿ ದೊರಕುವುದು. ಅದನ್ನು ಈ ವಿಮರ್ಶೆಯಲ್ಲಿ ಉಪಯೋಗಿಸಲು ಕಾಲವಿಲಂಬವಿಲ್ಲದುದರಿಂದ ಶಕ್ಯವಾಗ ಲಿಲ್ಲ. ಆದರೆ ಈಗ ತಾನೇ ಈ ಲೈಬ್ರರಿಯ ಗ್ರಂಥಮಾಲೆಯಲ್ಲಿ "ಹರಿಹರ ಚತುರಂಗ" ವೆಂಬ ಸಂಸ್ಕೃತ ಗ್ರಂಥವೊಂದು ಮುದ್ರಿತವಾಗುತ್ತಿರುವುದು. ಇದು ಓರುಗಲ್ಲಿನ ಪ್ರತಾಪರುದ್ರದೇವನ ಕಾಲದಲ್ಲಿ ಆತನ ಮಂತ್ರಿಯಾದ ಗೋದಾವರಿಮಿಶ್ರನೆಂಬುವ ನಿಂದ ರಚಿತವಾದುದು. ಅದರಲ್ಲಿ ಅಶ್ವಲಕ್ಷಣ ಪರಿಚ್ಛೇದವೆಂಬ ಭಾಗದಲ್ಲಿ ೮೩೭ ಅನುಷ್ಟುಪ್ ಶ್ಲೋಕಗಳಲ್ಲಿ ಅಶ್ವಲಕ್ಷಣವನ್ನು ಮಾತ್ರ ವಿವರವಾಗಿ ಹೇಳಿರುವನು. ಈ ಗ್ರಂಥದಲ್ಲಿ ಹೇಳಿರುವ ಹಲವು ವಿಷಯಗಳಿಗೆ ಈ ಗ್ರಂಥಸ್ಥ ವಿಷಯದೊಡನೆ ಸಂವಾದ ವಿರುವುದರಿಂದ ಅದರಲ್ಲಿ ಹೇಳಿರುವ ವಿಷಯಗಳೊಡನೆ ಇಲ್ಲಿ ಸಂಗ್ರಹವಾಗಿ ಹೋಲಿ ಸಿದೆ." ಎಂದು ಹರಿಹರ ಚತುರಂಗದ ಕೃತಿಸಾರದೊಡನೆ ಅಭಿನವ ಚಂದ್ರನಲ್ಲಿ ವ್ಯಕ್ತವಾಗಿರುವ ಸಂಗತಿಗಳನ್ನು ಕೊಟ್ಟು ತುಲನಾತ್ಮಕವಾಗಿ ಅಧ್ಯಯನ ಮಾಡಿದ್ದಾರೆ. ಅವರು ಕೊಟ್ಟಿರುವ ಕೆಲವು ನಿದರ್ಶನಗಳಲ್ಲಿ ಒಂದೆರಡು ಹೀಗಿವೆ—

೧. ಮಲ್ಲಿಕಾಭೇ ಮಯೂರೋಷ್ಟ್ರ ಕಲವಿಂಕಾಕ್ಷಿ ಸನ್ನಿಭೇ
ಕ್ರೌಂಚ ತಿತ್ತಿರಿ ನೇತ್ರಾಭೇ ವಾರಣಾಕ್ಷಿ ಸಮಪ್ರಭೇ ||
ಕುರಂಗಹಂಸನೇತ್ರಾಭೇ ಟಿಟ್ಟಿಭಾಕ್ಷಿನಿಭೇ ತಥಾ
ಪಾರಾವತಾಕ್ಷಿ ಪ್ರತಿಮೋಪ್ರಶಸ್ತೇಹಯಲೋಚನೇ ||

ಎನ್ನುವುದು ಅಭಿನವಚಂದ್ರನಲ್ಲಿ —

ಹರಿಣಿಯ ನವಿಲ ಕವುಂಜಿನ
ಕರಿಣಿಯ ಕೋಗಿಲೆಯ ಕೊಂಚೆಯುಂಚೆಯ ಕಣ್ಣಂ
ತಿರೆ ನಿಬಿಡಮಾಗಿ ತೋರ್ಪೊಡೆ
ತುರಗದ ನಯನಂಗಳುಚಿತಮಭಿನವಚಂದ್ರಾ || ೧-೨೪

೨. ಮೃದುಸ್ನಿಗ್ಧಾ ಸಮಾಚೈವ ಮಲ್ಲಿಕಾಪುಷ್ಪ ಸನ್ನಿಭಾ
ರಾಜೀಯಸ್ಯ ಚ ಪರ್ಯಂತೇ ಸುಪರಿಕ್ಷಿಪ್ತ ತಾರಕೇ ||
ಸಹಯೋ ಮಲ್ಲಿಕಾಕ್ಷಃ ಸ್ಯಾತ್ ದೃಷ್ಟಿರ್ಯಸ್ಯ ಚ ಕಾವಕಾ
ತೇನಮಿತ್ರಾಣಿ ವರ್ಧನ್ತೇ ಇತಿ ಶಾಸ್ತ್ರವಿದಾಂ ಮತಂ ||

ಎನ್ನುವುದು ಅಭಿನವಚಂದ್ರನಲ್ಲಿ —

ನಯನಂಗಳ್ ತೊಳಗುವ ಬೆ
ಳ್ಳಿಯಕಣ್ಣಂ ಪೋಲೆ ಮಲ್ಲಿಕಾಕ್ಷ ಶುಭಮಾ
ನಯನಕ್ಕೆ ಕರಿಯ ಬಳೆಗಳ್
ನಿಯತಂ ನಿಲೆ ವಾಜಿ ಕೃಷ್ಣಮಾದೊಡೆ ಶುಭಮಂ ॥ ೨-೩೬

ಂದು ಸಂವಾದಿಯಾಗಿ ಬಂದಿದೆ.

ಈ ಸಂದರ್ಭದಲ್ಲಿ ಹೇಳಬಹುದಾದ ಮಾತೆಂದರೆ ಶ್ರೀಮಾನ್ ಎಚ್. ಶೇಷಅಯ್ಯಂಗಾರ್ ಅವರು ಶಾಲಿಹೋತ್ರನ ಕೃತಿಯನ್ನು ಪರಿಶೀಲಿಸಲು ಸಾಧ್ಯವಾಗದಿದ್ದುದು. ಅವರು ಪರೀಕ್ಷಿಸಿದ್ದರೆ ಬಹುಶಃ ಅವರು ಶಾಲಿಹೋತ್ರನ ಕೃತಿಯನ್ನೇ ಈ ಕೃತಿಯ ಆಕರವಾಗಿ ಹೇಳುತ್ತಿದ್ದರು. ಅಭಿನವ ಚಂದ್ರ ಮತ್ತು ಗೋದಾವರಿ ಮಿಶ್ರರಿಗೆ ಶಾಲಿಹೋತ್ರ ಸಮಾನ ಆಕರವಾದುದರಿಂದ ಈ ಬಗೆಯ ಸಂವಾದಿಭಾಗಗಳು ಲಭ್ಯವಾಗಲು ಸಾಧ್ಯವಾಗಿದೆ.

ಅಭಿನವಚಂದ್ರನ ಕಾಲವನ್ನು ಕವಿತಾ ಧಾಟಿಯನ್ನುಲಕ್ಷಿಸಿ ಸು. 1400 ಎಂದು ಕವಿಚರಿತೆಕಾರರು ಹೇಳಿದುದನ್ನು ಶ್ರೀಮಾನ್ ಎಚ್. ಶೇಷ ಅಯ್ಯಂಗಾರ್ ಅವರು ಒಪ್ಪಿದುದರಿಂದ ಈ ಮಾತು ಹೇಳಲು ಸಾಧ್ಯವಾಯಿತು. ಕ್ರಿ. ಶ. ಸು. 1400 ಎಂದರೆ ಗೋದಾವರಿ ಮಿಶ್ರನಿಗಿಂತ ಅಭಿನವಚಂದ್ರ ಈಚಿನವನಾಗುತ್ತಾನೆ. ಆದರೆ ಅಭಿನವಚಂದ್ರನ ಕಾಲ ಬಿಜಾಪುರದ ಬಾಗೆವಾಡಿಯಲ್ಲಿ ದೊರೆತ ರಾಯಮುರಾರಿ ಸೋವಿದೇವನ ಕ್ರಿ. ಶ. 1170ರ ಶಾಸನ (ಸೌಇಇ XV-113) ಕಾಲಕ್ಕೆ ಸರಿ ಹೊಂದುವ ಸಾಧ್ಯತೆ ಇರುವುದರಿಂದ ಅಭಿನವಚಂದ್ರನು ಗೋದಾವರಿ ಮಿಶ್ರನ ಕೃತಿಯನ್ನು ಆಧರಿಸಿರುವುದು ಅಸಾಧ್ಯವಾಗುತ್ತದೆ. ಒಟ್ಟಿನಲ್ಲಿ ಹೇಳಬಹುದಾದ ಸಂಗತಿಯೆಂದರೆ ಶಾಲಿಹೋತ್ರನ ಕೃತಿಯಿಂದ ಈಚೆಗೆ ಬಂದವರೆಲ್ಲರೂ ಶಾಲಿಹೋತ್ರವನ್ನು ಆಧರಿಸಿರುವುದರಿಂದ ಈ ಬಗೆಯ ಸಂವಾದಿ ಭಾಗಗಳು ಕಂಡುಬರಲು ಸಾಧ್ಯವಾಗುತ್ತದೆ. ಆದುದರಿಂದ ಅಭಿನವಚಂದ್ರನ ಅಶ್ವಶಾಸ್ತ್ರಕ್ಕೆ ಗೋದಾವರಿ ಮಿಶ್ರನ ಹರಿಹರ ಚತುರಂಗ ಆಕರವಾಗಿ ನಿಲ್ಲುವುದಕ್ಕಿಂತ ಶಾಲಿಹೋತ್ರವೇ ಆಕರವಾಗಿ ನಿಲ್ಲುತ್ತದೆಂದು ಖಚಿತವಾಗಿ ಹೇಳಬಹುದು. ಆದರೆ ಇರುವ ಸಮಸ್ಯೆಯೆಂದರೆ ಅಭಿನವಚಂದ್ರನು ಸಿಂಹದತ್ತ ಮತ್ತು ರೇವಂತರ ಹೆಸರನ್ನು ಹೇಳುತ್ತಾನೆಯೇ ವಿನಃ ಶಾಲಿಹೋತ್ರನಹೆಸರನ್ನು ಹೇಳದಿರುವುದು. ಇದಕ್ಕೆ ಪರಿಹಾರ ಇನ್ನೂ ಲಭ್ಯವಾಗಬೇಕಿದೆ.

ಅಶ್ವಶಾಸ್ತ್ರಗಳು—ಸಮೀಕ್ಷೆ

ಕುದುರೆಗಳು ಪ್ರಯೋಜನಕಾರಿ ಎಂಬುದನ್ನು ಅರಿತು ಮನುಷ್ಯ ಅವುಗಳನ್ನು ಸಾಕುವ, ಪಳಗಿಸುವ ವಿವರಗಳನ್ನು ಕುರಿತು ಶಾಸ್ತ್ರವೊಂದನ್ನು ರಚಿಸುವತ್ತ ಪ್ರವೃತ್ತ

ನಾದನು. ಹಿಟ್ಟೈಟರ್ ಬುಡಕಟ್ಟಿಗೆ ಸೇರಿದ ಮಡಕೆಯ ಚೂರುಗಳ ಮೇಲೆ ದೊರೆಯುವ ರೇಖಾ ಚಿತ್ರಗಳಿಂದ ಅವರು ಸು. 3400 ವರ್ಷಗಳ ಹಿಂದೆಯೇ ಕುದುರೆಯನ್ನು ಸಾಕತೊಡಗಿದ್ದ ವಿಚಾರ ತಿಳಿದುಬರುತ್ತದೆ. ಈ ಮಡಕೆಯ ಚೂರುಗಳ ಮೇಲೆ ಲಭ್ಯವಿರುವ ಪಾಠಗಳಿಂದ ಕುದುರೆಗಳನ್ನು ಪಳಗಿಸುವ ಸಂಗತಿ ತಿಳಿದು ಬರುತ್ತದೆ.

ಭಾರತದಲ್ಲಿ ಕುದುರೆಗಳನ್ನು ಸಾಕುವ, ಪಳಗಿಸುವ ವಿವರಗಳು ಶಾಸ್ತ್ರರೂಪವನ್ನು ಪಡೆದುದಕ್ಕೆ ಸು 5000 ವರ್ಷಗಳ ಇತಿಹಾಸವಿದೆ. ಕುದುರೆಗಳ ಬಗ್ಗೆ ಬರೆದವರಲ್ಲಿ ಶಾಲಿಹೋತ್ರನು ಮೊದಲಿಗ. ನಕುಲನ ಅಶ್ವಚಿಕಿತ್ಸಾ ಗ್ರಂಥದಲ್ಲಿ ಶಾಲಿಹೋತ್ರನನ್ನು ಕುರಿತು ಹೀಗೆ ಹೇಳಿದೆ—

ಏನಜ್ಞಾ ಸವತಾ ಹಿಮಾಲಯು ತರುಚ್ಛಾಯಾಸು ವಿಕ್ರೀಡಿತಂ
ಯಃ ಸ್ನಾತೋ ಹಿಮಪುಷ್ಪ ಪಾತ ಶಿಶಿರೇ ಗಂಗಾಜಲೇ ಪಾವನೇ
ರೇವೋಯಸ್ತು ತುರಂಗಯೂಥ ಜನಿತೈ ನಾನಾವಿಧೈರ್ಹೇಷಿತೈಃ
ಪಾಯಾದ್ವಃ ಸತುರಂಗ ಘೋಷತನಯಃ ಶ್ರೀಶಾಲಿಹೋತ್ರೀಮುನಿಃ ॥

ಬರ್ನೆಲ್‌ರವರ ಸಂಸ್ಕೃತ ಹಸ್ತಪ್ರತಿಗಳ ಸೂಚೀಭಾಗ 1 ರಲ್ಲಿ—

ಜಾಹ್ನವ್ಯಾ ಉತ್ತರೇ ತೀರೇ ಪ್ರಾಲೇಯಾದ್ರೇಸ್ತಟಾಂತರೇ
ಸ್ವಾಶ್ರಮೇ ಚಂಪಕಾರಣ್ಯೇವೇದಿಕಾಯಾಂ ಕುಶಾಸನೇ
ಶಾಲಿಹೋತ್ರಂ ಸುಖಾಸೀನಂ ಋಷಿಭಿಃ ಪರಿವೇಷ್ಟಿತಮ್
ಬ್ರಹ್ಮ ಸೂರ್ಯಾಗ್ನಿ ತೇಜಸ್ಕಂ ಹಯಶಾಸ್ತ್ರ ವಿಶಾರದಮ್ ॥

ಶಾಲಿಹೋತ್ರನು ಗಾಂಧಾರ ಜನಪದದ ಶಾಲಾತುರ ಗ್ರಾಮಕ್ಕೆ ಸೇರಿದವನೆಂದು ತಿಳಿದುಬರುತ್ತದೆ. ಬೇರೆ ಕೆಲವು ಆಧಾರಗಳು ಆತನನ್ನು ಶ್ರಾವಸ್ತಿನಿವಾಸಿ ಎಂದಿವೆ. ತುರಂಗಘೋಷತನಯ ಅಥವಾ ಹಯಘೋಷತನಯನೆಂದು ಶಾಲಿಹೋತ್ರನನ್ನು ವರ್ಣಿಸುತ್ತಾರೆ. ಶಾಲಿಹೋತ್ರ ಮತ್ತು ಅಗ್ನಿವೇಶರು ಸಧರ್ಮಿಗಳೆಂದು ತಿಳಿದುಬರುತ್ತದೆ. ಶಾಲಿಹೋತ್ರನ ಶಿಷ್ಯ ಶುಶ್ರುತನೆಂದು ಪ್ರತೀತಿ. ಯುಧಿಷ್ಠಿರ ಸೋದರನಾದ ನಕುಲನ 'ಅಶ್ವಚಿಕಿತ್ಸಾ' ಕೃತಿಯಲ್ಲಿ ಶಾಲಿಹೋತ್ರನ ಹೆಸರು ಲಭ್ಯವಿರುವುದರಿಂದ ಈತನು ಮಹಾಭಾರತಕ್ಕಿಂತ ಹಿಂದಿನವನು.

ಶಾಲಿಹೋತ್ರನ ಕೃತಿಗೆ ಹಯಆಯುರ್ವೇದ, ತುರಂಗಮಶಾಸ್ತ್ರ, ಶಾಲಿಹೋತ್ರಸಂಹಿತ ಎನ್ನುವ ಹೆಸರುಗಳಿದ್ದು ಇವರಲ್ಲಿ ಭಾರತೀಯ ಪದ್ಧತಿಯಂತೆ ಕುದುರೆಗಳ ಚಿಕಿತ್ಸೆ ಇದೆ. ಅಶ್ವಪ್ರಶಂಸ ಮತ್ತು ಅಶ್ವಲಕ್ಷಣ ಶಾಸ್ತ್ರಂ ಎನ್ನುವ ಎರಡು ಕೃತಿಗಳನ್ನು ಶಾಲಿಹೋತ್ರನಿಗೆ ಆರೋಪಿಸಲಾಗಿದೆ. ಜಯದತ್ತನು ತನ್ನ ಅಶ್ವವೈದ್ಯಕ ಎನ್ನುವ ಕೃತಿಯಲ್ಲಿ—

ಶಾಲಿಹೋತ್ರಾದಿ ಮುನಿ ಪ್ರಣೀತಂ ದೃಷ್ಟ್ವಾಶ್ವಶಾಸ್ತ್ರಂ ಬಹು ವಿಸ್ತರಂಚ
ಸ್ವಲ್ಪ ಪ್ರಬೋಧಂ ಸಫಲಂ ಯಥಾರ್ಥಂ ಕೃತಂಚ ತದ್ವೈಜಯದತ್ತಕೇನ॥

ಎನ್ನುವಲ್ಲಿ ಶಾಲಿಹೋತ್ರನ ಕೃತಿ ವಿಸ್ತಾರ ಮತ್ತು ತನ್ನ ಕೃತಿಯ ಆಕರವನ್ನು ಸೂಚಿಸಿದ್ದಾನೆ.

ಶಾಲಿಹೋತ್ರನ ಹಯ ಆಯುರ್ವೇದ 12,000 ಶ್ಲೋಕಗಳ ಬೃಹದ್ಗ್ರಂಥ. ಈ ಗ್ರಂಥದ ಸ್ವಲ್ಪ ಭಾಗ ಇಂದಿಗೂ ಉಪಲಬ್ಧವಿದೆ. ಈ ಕೃತಿಯಲ್ಲಿ 8 ವಿಭಾಗಗಳಿದ್ದು ಕುದುರೆಗೆ ಸಂಬಂಧಿಸಿದಂತೆ ಒಂದೊಂದು ವಿಚಾರವನ್ನು ಪ್ರತಿಪಾದಿಸಿದೆ.

ಕುದುರೆಗಳ ಪ್ರಕೃತಿ, ಆನುವಂಶಿಕ ಗುಣಗಳು, ವಂಶ, ಬಣ್ಣ, ಜಾತಿ, ಬೇರೆ ಬೇರೆ ವಂಶಗಳ ಲಕ್ಷಣಗಳು, ವಯೋನಿರ್ಣಯ, ಅಂಗಪರೀಕ್ಷೆ ಮತ್ತು ಅಂಗಗಳ ಹೆಸರುಗಳು, ಅಂಗಪ್ರಮಾಣ, ಕುದುರೆಯ ಬೆಳವಣಿಗೆಗೆ ಕೈಗೊಳ್ಳಬಹುದಾದ ಕ್ರಮಗಳು, ತುಂಟ ಕುದುರೆಗಳನ್ನು ಪಳಗಿಸುವುದು, ರಾಜಯೋಗ್ಯ ಕುದುರೆ ಮತ್ತು ಅವುಗಳನ್ನು ಖರೀದಿಸುವ ಕ್ರಮಗಳನ್ನು ಮೊದಲ ಭಾಗದಲ್ಲಿ ಹೇಳಿದೆ.

ಕುದುರೆಗಳ ಕಾಲಿನ ಕುಂಟು, ನೇತ್ರರೋಗ, ಜ್ವರ, ಉದರಶೂಲೆ, ಅತಿಸಾರ, ಆಮಶಂಕೆ, ಮೂಲವ್ಯಾಧಿ, ಬಿಕ್ಕಳಿಕೆ, ಆಸ್ತಮ, ಕೆಮ್ಮು, ನೆಗಡಿ, ಕಾಮಾಲೆ, ಮೂರ್ಛೆ, ಕರುಳಿನಲ್ಲಿ ಕ್ರಿಮಿಗಳು, ಶರೀರದ ಒಳ ಅಂಗಳದಲ್ಲಿ ರಕ್ತಸ್ರಾವ, ಕಾಲಿನ ಊತ, ಹಾವು ಕಚ್ಚಿದುದರ ಚಿಹ್ನೆ ಮತ್ತು ಚಿಕಿತ್ಸೆ, ವಿಷಪ್ರಾಶನ, ವಿಷಲಿಪ್ತ ಬಾಣಗಳಿಂದ ಆದ ಗಾಯಗಳನ್ನು ಕುರಿತು ಎರಡು ಮೂರನೆಯ ಭಾಗಗಳಲ್ಲಿ ಹೇಳಿದೆ.

ಮೇಯುದ ಕುದುರೆಗಳ ಬಾಯಿ ಮತ್ತು ಸಾಲಿಗೆಗೆ ಚಿಕಿತ್ಸೆ. ಉಬ್ಬರ ಮತ್ತು ಅತಿಸಾರ ಚಿಕಿತ್ಸೆ ನಾಲ್ಕನೆಯ ಭಾಗದಲ್ಲಿದೆ.

ಕುದುರೆಗಳ ಮೇಲೆ ನವಗ್ರಹಗಳ ಪ್ರಭಾವ ಮತ್ತು ನಿವಾರಣೆ, ಜ್ವರ ಚಿಕಿತ್ಸೆ, ಚರ್ಮರೋಗ ಮತ್ತು ಮೂಳೆಗಳ ಮುರಿತಕ್ಕೆ ಚಿಕಿತ್ಸೆ ಐದನೆಯ ಭಾಗದಲ್ಲಿದೆ.

ಕುದುರೆಗಳ ಮೇಲೆ ನವಗ್ರಹಗಳ ದುಷ್ಪ್ರಭಾವ ಮತ್ತು ನಿವಾರಣೋಪಾಯ ಆರನೆಯ ಭಾಗದಲ್ಲಿದೆ.

ಚಿಕಿತ್ಸೆಯ ವಿವಿಧ ಜಟಿಲತೆಗಳು, ಹಾಲು, ಮದ್ಯ, ಉಪ್ಪು ಮುಂತಾದ ಆಹಾರಗಳಿಂದ ಉಂಟಾಗುವ ರೋಗಗಳು ಮತ್ತು ಭೇದಿಮಾಡಿಸಲು ನಾಳಿಕೆಯ ಆಕಾರದ ಉಪಕರಣಗಳನ್ನು ಉಪಯೋಗಿಸುವುದರಿಂದ ಆಗುವ ತೊಂದರೆಗಳ ವಿವರಗಳು ಏಳನೆಯ ಭಾಗದಲ್ಲಿವೆ.

ನಿಗೂಢಸಂಗತಿಗಳು, ಕುದುರೆಗಳ ಮೇಲಿರುವ ರೇಖೆಗಳು ಮತ್ತು ಅವುಗಳ ಮಹತ್ವ, ಕುದುರೆಗಳ ಆಯುಸ್ಸು, ನಕ್ಷತ್ರಗಳ ಪ್ರಭಾವಗಳಿಂದ ಆಗುವ ದುಷ್ಪ್ರಭಾವ, ಕುದುರೆಗಳಿಗೆ ನಡೆಸುವ ಅನೇಕ ಔಷಧೋಪಚಾರಗಳು ಉದಾಹರಣೆಗೆ ಅಳಲೆಕಾಯಿ,

ಬೆಳ್ಳುಳ್ಳಿ, ಗುಗ್ಗುಳ, ಸಾಸುವೆ, ಅರಗು, ತ್ರಿಫಲ, ರಾಳಗಳ ಬಳಕೆಯ ವಿವರಗಳಿವೆ. ಆಯುರ್ವರ್ಧನೆಗೆ ತಕ್ಕ ಉಪಾಯಗಳು, ಕುದುರೆಗಳನ್ನು ಪಳಗಿಸುವುದು, ಅವು ಹೊರಬಹುದಾದ ಭಾರಗಳು, ರಥಕ್ಕೆ ಕುದುರೆ ಹೂಡುವುದು, ಲಾಯಗಳ ವ್ಯವಸ್ಥೆ ಮುಂತಾದುವು ಎಂಟನೆಯ ಭಾಗದಲ್ಲಿವೆ.

ಹಯಆಯುರ್ವೇದ ಪರಿಪೂರ್ಣ ಗ್ರಂಥವಾಗಿದ್ದು ಇದರ ಕೆಲವು ಅಧ್ಯಾಯಗಳು ಅಗ್ನಿಪುರಾಣದಲ್ಲಿವೆ. ಮತ್ಸ್ಯಪುರಾಣ ಮತ್ತು ಗರುಡಪುರಾಣಗಳು ಕೂಡ ಕುದುರೆಯ ವಿಚಾರವನ್ನು ತಿಳಿಸುವಲ್ಲಿ ಹಯ ಆಯುರ್ವೇದವನ್ನು ಆಶ್ರಯಿಸಿವೆ. ಪರ್ಷಿಯನ್, ಅರ್ರ್ಯಾಬಿಕ್, ಟಿಬೆಟನ್ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಈ ಕೃತಿ ಅನುವಾದಗೊಂಡಿದೆ. ಶಾಲಿಹೋತ್ರನ ಹೆಸರು ಸಾಕಷ್ಟು ಪ್ರಸಿದ್ಧವಾಗಿದೆ. ಕುದುರೆಯ ವೈದ್ಯ ಎನ್ನುವುದಕ್ಕೆ ಸಮಾನಾರ್ಥಕವಾಗಿ 'ಶಾಲೋತ್ರಿ' ಎನ್ನುವ ಪದ ಇಂದಿಗೂ ಬಳಕೆಯಲ್ಲಿದೆ. ಈ ಕೃತಿಯಿಂದ ಈಚಿನ ಕಾಲದಲ್ಲಿ ಬಂದಿರುವ ಅಶ್ವಶಾಸ್ತ್ರದ ಗ್ರಂಥಗಳನ್ನು ಶಾಲಿಹೋತ್ರ ಎಂದು ಕೃತಿಕಾರರು ಕರೆದಿದ್ದಾರೆ, ಮತ್ತೆ ಕೆಲವರು ಈತನ ಸಂಹಿತೆಯನ್ನು ಆಧರಿಸಿ ಬರೆದಿದ್ದಾರೆ.

ಶಾಲಿಹೋತ್ರ ಶಬ್ದದ ಬಗ್ಗೆ ಪ್ರೊ|| ತೀ. ನಂ. ಶ್ರೀಕಂಠಯ್ಯನವರು ಕೊಡುವ ವಿವರಣೆ ಹೀಗಿದೆ. "ಕೊನೆಯಲ್ಲಿ 'ಶಾಲಿಹೋತ್ರ' ಎನ್ನುವ ಹೆಸರಿನ ಕಡೆಗೆ ತಿರುಗೋಣ. ಇದು ಅಶ್ವಾಯುರ್ವೇದವನ್ನು ನಿರೂಪಿಸಿದವನೆಂದು ಪ್ರಸಿದ್ಧನಾದ ಒಬ್ಬ ಋಷಿಯ ಹೆಸರು. (ಇದಕ್ಕೆ ಕುದುರೆ ಎಂಬ ಅರ್ಥವೂ ಉಂಟು). ಈಗಲೂ ಹಿಂದೂದೇಶದ ಸೈನ್ಯ ಇಲಾಖೆಯಲ್ಲಿ ಅಶ್ವವೈದ್ಯನನ್ನು ಸೋಲುತ್ರಿ (solutri) ಎಂದು ಕರೆಯುತ್ತಾರೆ. ಶಾಲಿಹೋತ್ರ ಎಂಬ ಈ ಪ್ರಾಜ್ಯಸಮಾಸವನ್ನು ಒಡೆದು ನೋಡಿದರೆ ನಮಗೆ ಕಾಣುವುದೇನು ? ಅದರ ಮೊದಲನೆಯ ಭಾಗ ಕೋಲ್ (ಅಥವಾ ಮುಂಡ) ವರ್ಗದ ಶಬ್ದ ; ಎರಡನೆಯದು ಬಹುಶಃ ದ್ರಾವಿಡ : *ಘುತ್ರ> ಘೋತ್ರ ಎಂಬುದರ ರೂಪಾಂತರ. ಎರಡರ ಅರ್ಥವೂ ಒಂದೇ. ಶಾಲಿ = ಹೋತ್ರ. ಈ ಎರಡು ಶಬ್ದಗಳು ಬೇರೆ ಬೇರೆ ದಿಕ್ಕುಗಳಿಂದ ಬಂದು ಸಂಸ್ಕೃತಸಮಾಸವಾಗಿ ಸೇರಿ ಒಬ್ಬ ಋಷಿಯ ಹೆಸರಾಗಿ ಪರಿಣಮಿಸಿವೆ.[1]

ನಳನನ್ನು 'ಅಶ್ವವಿದ್' ಎಂದು ಕರೆದಿದೆ. ಋತುಪರ್ಣನನ್ನು ದಮಯಂತಿಯ ಪುನಸ್ಸ್ವಯಂವರ ಸಂದರ್ಭದಲ್ಲಿ ವಿದರ್ಭಕ್ಕೆ ಕರೆದುತಂದ ಸಂದರ್ಭದಲ್ಲಿ ಈತನ ಕೌಶಲ ವ್ಯಕ್ತವಾಗಿದೆ. ಈತನು ಮಹಾಭಾರತದ ಕಾಲಕ್ಕೆ ಪೂರ್ವದವನು. ಮಹಾಭಾರತದ ಕಾಲದಲ್ಲಿ ಭೀಷ್ಮರನ್ನು ಹಯೋಪಾಯಕುಶಲರೆಂದೂ[2] ಶಲ್ಯನು ಈಶ್ವರ

---

1 ಸಮಾಲೋಚನ ಪುಟ 247 ; ಶಾರದಾಮಂದಿರ, ಮೈಸೂರು. 1974

2 ಪಂಪಭಾರತ 12-88 ವಚನ

ನಲ್ಲಿ ಅಶ್ವಹೃದಯವನ್ನು ಕಲಿತವನೆಂದೂ, ಸಾರಥ್ಯದಲ್ಲಿ ಶಲ್ಯನು ಕೃಷ್ಣನಿಗಿಂತ ಮಿಗಿಲಾದವನು ಎಂದೂ ತಿಳಿದುಬರುತ್ತದೆ.

ಯುಧಿಷ್ಠಿರ ಸೋದರರಾದ ನಕುಲ ಸಹದೇವರಿಗೆ ದ್ರೋಣಾಚಾರ್ಯರು ಗವಾಶ್ವ ಚಿಕಿತ್ಸೆಗಳನ್ನು ಕಲಿಸಿದ್ದರೆಂದು ತಿಳಿದುಬರುತ್ತದೆ. 'ಗವಾಶ್ವ ಶಾಸ್ತ್ರ ಚಿಕಿತ್ಸಾ ಪ್ರಣೀತಾ' ಎನ್ನುವುದು ನಕುಲನ ಬಗ್ಗೆ ತಿಳಿಸುಬರುವ ಸಂಗತಿ. ಈತನ 'ಅಶ್ವಚಿಕಿತ್ಸಿತಮ್' ಎನ್ನುವ ಗ್ರಂಥ ಉಪಲಬ್ಧವಿದೆ. ಅದರಲ್ಲಿ ತನ್ನನ್ನು ಕುರಿತು—

ಜಯತಿ ಚ ಪಾಂಡವನಾಥೋ ಧರ್ಮಸನಾಥೋ ಯುಧಿಷ್ಠಿರೋ ನೃಪತಿಃ
ಭೀಮಾರ್ಜುನ ಸಹದೇವಾಸ್ತದನು ಚ ಯೇ ವಾಜಿಶಾಸ್ತ್ರ ತತ್ವಜ್ಞಃ॥
೧–೨

ದೃಷ್ಟ್ವೈ ಸಮ್ಯಜ್ಞಕುಲಂ ಶಾಸ್ತ್ರಂ ಕೃತ್ಸ್ನಂಚ ಶಾಲಿಹೋತ್ರೀಯಮ್
ಬ್ರೂತೇ ಶಾಸ್ತ್ರಾರ್ಥಮನ್ಯಚ್ಛಾಸ್ತ್ರಂ ಕೃತ್ವಾ ಸಮಾಸೇನ॥ ೧–೩

ಎಂದಿದ್ದಾನೆ. ಕನ್ನಡದ ಅಲಂಕಾರ ಶಾಸ್ತ್ರಗ್ರಂಥ ಕಾವ್ಯಾವಲೋಕನದಲ್ಲಿ —

ಆನ್ಯೋಡರ್ಜುನನೆಂಬನಂತಕಸುತಂ ಭರ್ತಾರನೆಂಬಾತನಿ
ನ್ನೇನಂದನ್ನ ವಿಪಾಕಿ ವಲ್ಲಭನವಂ ಭೀಮಂ ಹಯಾಧ್ಯಕ್ಷನಾ
ಸನ್ನದ್ಧ ನಕುಲಂ ಗವಾಧಿಕೃತನಾ ಸಾದೇವನೆಂದಾದಳಿಂ
ದನ್ನರ್ಕೀಚಕರಳ್ಕಿದರ್ಮಗಳಿವಳ್ ಸೈರಂಧ್ರಿ ಪಾಂಚಾಳನಾ॥ ೧೭೮

ಎನ್ನುವ ಉದಾಹರಣ ಪದ್ಯ ದೊರೆತಿದ್ದು ನಕುಲನು 'ಹಯಾಧ್ಯಕ್ಷತಾಸನ್ನದ್ಧ' ನೆಂಬುದು ತಿಳಿದುಬರುತ್ತದೆ.

ನಕುಲನ ಅಶ್ವಚಿಕಿತ್ಸೆಯಲ್ಲಿ 1. ಪ್ರಶ್ನಕಥನಮ್ 2. ಜಾತಿ 3. ವರ್ಣ 4. ಆವರ್ತ 5. ದಂತ 6. ಅವಯವಪ್ರಮಾಣ 7. ವೇಗ 8. ಆರೋಹಣ 9. ವಾಹನವಿವರಣ 10. ಧಾತುಪರೀಕ್ಷೆ 11. ಋತುಚರ್ಯೆ 12. ನಶ್ಯ 13. ಪಿಂಡ 14. ಘೃತವಿಧಾನ 15 ಕ್ವಾಥ 16. ವಿಷ 17. ಅಶ್ವಶಾಲಾವಿಧಿ ಎನ್ನುವ ಅಧ್ಯಾಯಗಳಿವೆ. ನಕುಲನು ತನ್ನ ಕೃತಿಯನ್ನು ಕುರಿತಂತೆ ಹೀಗೆ ತಿಳಿಸಿದ್ದಾನೆ—

ಪ್ರಶ್ನೋ ಜಾತಿ ವರ್ಣಮಾವರ್ತ ದಂತಾ
ಲಕ್ಷ್ಯಂ ವೇಗಾವಾಹನಂ ಧಾತುರಸ್ತ್ರಮ್
ಕಾಲೋನಸ್ಯಂ ಪಿಂಡಮಾಜ್ಯಂ ಕಷಾಯಂ
ಶಾಲಾಂ ಚೇಷ್ಟಾ ವಾಜಿನಾಮತ್ರ ವಕ್ಷ್ಯೇ॥ 1–4

ನಕುಲನ ಪ್ರಕಾರ ಅಶ್ವಶಾಸ್ತ್ರವನ್ನು ಬರೆದವರ ವಿವರ ಹೀಗಿದೆ—

1. ಸೂರ್ಯ 2. ಚಂದ್ರ 3. ಶಾಲಿಹೋತ್ರಮುನಿ 4. ಸುಶ್ರುತ 5. ಗರ್ಗ ಮತ್ತು ಇತರರು. ನಕುಲನ ಕೃತಿ ಇವರೆಲ್ಲರ ಕೃತಿಗಳ ಸಾರವನ್ನೂ ಒಳಗೊಂಡಿದೆ.

ಸಾಮಂತನಾಗಿದ್ದ ವಿಜಯದತ್ತನ ಮಗ ಜಯದತ್ತನು ಶಾಲಿಹೋತ್ರವನ್ನು ಆಧರಿಸಿ ಅಶ್ವವೈದ್ಯಕವನ್ನು ಬರೆದಿದ್ದಾನೆ. 68 ಅಧ್ಯಾಯ 1108 ಶ್ಲೋಕಗಳಿಂದ ಕೂಡಿದ ಈ ಕೃತಿಯಲ್ಲಿ

1. **ಉದ್ದೇಶಾಧ್ಯಾಯ :** ಮಂಗಲಾಚರಣ, ಗ್ರಂಥಕಾರನ ಪ್ರತಿಜ್ಞೆ, ಗ್ರಂಥಕಾರ ಪರಿಚಯ, ಅಧ್ಯಾಯಸಂಖ್ಯೆ, ಶ್ಲೋಕ ಸಂಖ್ಯೆ, ಗ್ರಂಥ ಪ್ರತಿಪಾದ್ಯ ಸಂಗತಿಗಳಿವೆ.

2. **ಪ್ರದೇಶಾಧ್ಯಾಯ :** ಜಿಹ್ವಾದಿ ಸರ್ವಪ್ರದೇಶ ಕಥನ.

3. **ಸರ್ವಲಕ್ಷಣಾಧ್ಯಾಯ :** ಯಾವ ಪ್ರದೇಶದಲ್ಲಿ ಯಾವ ಲಕ್ಷಣ ಶುಭವೋ ಅದನ್ನು ಹೇಳುವುದು. ಅಂಗಶುಭ, ಶುಭಾವರ್ತ, ಅಶುಭಾವರ್ತ, ಶುಭ ಪುಂಡ್ರಕ, ಅಶುಭಪುಂಡ್ರಕ, ಸ್ಥಾನ ವಿಶೇಷಗಳಲ್ಲಿ ಶುಭಾಶುಭ ಪುಷ್ಟ. ಗತಿ ವರ್ಣ, ಕೋಕಾಹಾದಿಗಳ ಲಕ್ಷಣ, ಕಯಾಹ, ಸೇರಾಹ, ಸುರೂಹಕ, ನೀಲಕ, ತ್ರಿಯೂಹ, ಖಿಲಾಹ, ಹಲ, ಖಡ್ಗ, ಕುಲ, ಉರಾಹ, ವೀರೂರಾಹ, ಉಕನಾಹ, ಪುಂಡ್ರಕ ವಿಶೇಷ ದಲ್ಲಿ ಕೋಕಾಹಾದಿಗಳ ಸಂಜ್ಞಾಂತರ ಕಥನ, ವಾಜಿದೇಹದ ವರ್ಣಗಳ ಶುಭಾಶುಭ ಲಕ್ಷಣ, ಅಷ್ಟಮಂಗಲ ಲಕ್ಷಣ, ಮಲ್ಲಿಕಾಕ್ಷ, ಪಂಚಭದ್ರ, ಖರ, ಮಹಾದೋಷ, ಕಾಕುದೀ, ಕರಾಲೀ, ಹೀನದಂತ, ಅಧಿಕದಂತ, ಏಕಾಂಡ, ಜಾತಾಂಡ, ಕಂಚುಕಿ, ಮಾರ್ಜಾರಪಾದ, ತ್ರಿಸರಿ, ದ್ವಿಖುರಿ, ಸಂಜಾತವೃಷಣ, ಸ್ತನಿ, ತ್ರಿಕರ್ಣಿ, ವ್ಯಾಘ್ರ ವರ್ಣ, ವಾಮನಯಮಜ, ಮುಸಲಿ, ಇಂದ್ರವೃದ್ಧ. ದೋಷಯುಕ್ತ ಕುದುರೆಗಳನ್ನು ಹೊಂದಿರಾವಣಾದಿಗಳು ಕ್ಷಯವಾದುದು, ಉತ್ಪಾತ, ಛಾಯ, ಸತ್ವ ಪ್ರಮಾಣ್ಣ ಗಳನ್ನು ಹೇಳಿದೆ.

4. **ಆಯುರ್ವಯೋಜ್ಞಾನ :** ದೀರ್ಘಾಯು, ಅಲ್ಪಾಯು, ಹಲ್ಲಿನ ಮೂಲಕ ವಯಸ್ಸು ತಿಳಿಯುವುದು, ಕಾಲಿಕಾದಿ ರೇಖೆಗಳಿಂದ ವಯಸ್ಸು ತಿಳಿಯು ವುದು, ಬಿದ್ದ ಬೀಳದ ಹಲ್ಲುಗಳಿಂದ ವಯಸ್ಸು ತಿಳಿಯುವುದು.

5. **ದಶಕ್ಷೇತ್ರಾಧ್ಯಾಯ :** ದಶವಿಧದಶೆ, ದಶಾಪರಿಣಾಮ, ದಶಾಕ್ಷೇತ್ರ.

6. **ಜನ್ಮದೇಶ :** ಉತ್ತಮ, ಮಧ್ಯಮ, ಅಧಮಾಶ್ವಗಳ ಸಂಖ್ಯೆ. ಉತ್ತಮ ವಾಜಿ, ಉತ್ತಮ ಪಾರಸೀಕ ಅಶ್ವ, ಮಧ್ಯಮ ಕೇಕ್ಕಣಾಶ್ವ, ಮಧ್ಯಮ ತುರುಷ್ಕಾಶ್ವ, ಮಧ್ಯಮ ಭಾಂಡಜಾಶ್ವ, ಸೈಂಧವಾದಿ ಅಶ್ವಲಕ್ಷಣಗಳು.

7. **ವಾಹನವಿಧಾನ :** ವಿಪ್ರಾದಿ ವಾಹನ ವಿವರಣ, ವಿಪ್ರಾದಿ ಜಾತಿಲಕ್ಷಣ, ವಿಪ್ರಾದಿ ವಶೀಕರಣ, ಸತ್ವ ಶಕ್ತಿಯ ವಾಹನ, ರಂಗಭೂಮಿ ವಿವರಣ, ದೋಷಗುಣ ತಾಡನ, ಧಾರಾಗತಿ, ಪಲ್ಯಾದಿ ವಿವರಣ, ಆದಿವಾಹನ, ತಿಥಿ ನಕ್ಷತ್ರಗಳ ವಿವರಣೆ, ಧೂಪಾದಿ ವಿವರ, ಸಾದಿಯ ಕಾರ್ಯ ವಿವರಣೆ.

8. **ಬಂಧ್ಯೋಪಚಾರ :** ಗೊಡ್ಡು ಕುದುರೆಯ ಗರ್ಭಧಾರಣೆಗಾಗಿ ಉಪಚಾರಗಳು.

9. **ಗರ್ಭಜ್ಞಾನ :** ಗರ್ಭವಾಗಿರುವುದರ ಲಕ್ಷಣ, ಒಂದನೆಯ ತಿಂಗಳಿಂದ ಹಿಡಿದು ಕಡೆಯ ತಿಂಗಳವರೆಗಿನ ಉಪಚಾರಗಳು.

10. **ಸೂತಿಕೋಪಚಾರ :** ಹೆರಿಗೆಯ ಸಮಯದಲ್ಲಿ ಮಾಡಬೇಕಾದ ಉಪಚಾರಗಳು. ಕ್ಷೀರಶೋಧನ, ಮರಿಗೆ ಮಾಡಬೇಕಾದ ಉಪಚಾರಗಳು.

11. **ದ್ರವ್ಯಮಾತ್ರಜ್ಞಾನ :** ಅಳತೆಯ ಪರಿಭಾಷೆ, ಶುಷ್ಕಾದಿ ದ್ರವ್ಯಗಳು, ಆಹಾರದಲ್ಲಿ ಯವಾದಿ ಮಾತ್ರೆಗಳು, ನಸ್ಯ, ಧೂಪ, ಕರ್ಣಪೂರಣಾದಿ ಮಾತ್ರೆ.

12. **ನಿಘಂಟು :** ಪರ್ಯಾಯ ದ್ರವ್ಯಗಳ ವಿವರಗಳು.

13. **ಋತು ವಿಭಾಗ :** ಎಲ್ಲ ಋತುಗಳಲ್ಲಿ ಮಾಡಬೇಕಾದ ಉಪಚಾರಗಳ ವಿವರಣೆ, ಲಾಯದ ನಿರ್ಮಾಣ. ವರ್ಷ, ಶರತ್, ಹೇಮಂತ, ಶಿಶಿರ, ವಸಂತ, ಗ್ರೀಷ್ಮಕಾಲಗಳಲ್ಲಿ ಪೋಷಣವಿಧಿ.

14. **ಕ್ಷಾರ, ಅಗ್ನಿ, ಶಸ್ತ್ರವಿಧಾನ :** ಕ್ಷಾರದಾಹ, ಲೋಹದಾಹ, ಮೇದೋದಾಹ, ದಾಹ ಲಕ್ಷಣಗಳು, ಶಸ್ತ್ರವಿಧಾನ.

15. **ಶಿರಾವೇಧ :** ಶಿರಾವೇಧ ಕಾಲನಿರ್ಣಯ, ಶೋಣಿತ ವಿವರಣ, ವೇಧಾಸ್ಥಾನಕಥನ.

16 **ನಿರೂಹಾನುವಾಸನ :** ನೇತ್ರ ನಿರ್ಮಾಣ ವಿವರಣ, ಅನುವಾಸನ ವಿವರಣ, ನಿರೂಹ ವಿವರಣ.

17 **ನಸ್ಯಾಧ್ಯಾಯ :** ನಸ್ಯವಿಧಿ, ವಾತಾದಿ ರೋಗಗಳಲ್ಲಿ ವಿವಿಧ ನಸ್ಯಗಳು.

18. **ಸ್ವೇದ ವಿಧಾನ :** ಪುಟ, ಶಂಕರ, ತುಷಸ್ವೇದ ಕಥನಗಳು, ಕಫಾದಿಗಳಿಗೆ ಸ್ವೇದಕಥನ, ಸ್ವೇದ ನಿಷೇಧ ಮಾಡಬೇಕಾದ ವಿವರಗಳು.

19. **ಸ್ನೇಹ ಪ್ರಯೋಗ :** ಘೃತಪಾನ ಕಾಲ ಕಥನ, ತೈಲಪಾನ, ಘೃತಾದಿ ಪಾನನಿಯಮ, ಸಮ್ಯಕ್ಸ್ನಿಗ್ಧಗುಣ ಕಥನ, ಅತಿಸ್ನಿಗ್ಧಲಕ್ಷಣ, ಮತ್ತು ಅದಕ್ಕೆ ತಕ ಪ್ರತೀಕಾರ, ಅತಿಸ್ನಿಗ್ಧ ಭೋಜನವಿಧಿ.

20. ತೈಲ ವಿಧಾನ : ಮಧುಕಾದಿ ತೈಲ, ತ್ರಿವೃತ್ಸರ್ಪಿಃ, ಪ್ರಸಾರಣೀತೈಲ

21. ಘೃತ ವಿಧಾನ : ಪಂಚತಿಕ್ತ, ಕರಂಜಾದಿ, ದ್ವಿತೀಯ ಪಂಚತಿಕ್ತ ಘೃತಗಳು

22. ಶ್ರಾಂತೋಪಚಾರ : ಬಳಲಿದ ಕುದುರೆಗಳ ಉಪಚಾರ ವಿವರಗಳು.

23. ಸ್ವಸ್ಥ ಅರಿಷ್ಟ : ಭೋಜನ, ಛಾಯಾದಿ, ದರ್ಶನೇಂದ್ರಿಯ, ಶ್ರವಣೇಂದ್ರಿಯ, ರಸನೇಂದ್ರಿಯಗಳ ಅರಿಷ್ಟ.

24. ವೇಧಾರಿಷ್ಟ : ವೇಧಾರಿಷ್ಟನಿದಾನ, ವೇಧಾಪ್ಯೋತ್ಸರ್ಗ, ವೇಧಾರಿಷ್ಟಚಿಕಿತ್ಸೆ.

25. ಕೀಟಾರಿಷ್ಟ : ಕೀಟನಿದಾನ ಲಕ್ಷಣ ಮತ್ತು ಅದರ ಚಿಕಿತ್ಸೆ.

26. ಮೃಗರೋಗ : ಮೃಗರೋಗ ಲಕ್ಷಣ ಮತ್ತು ಅದರ ಚಿಕಿತ್ಸೆ.

27. ವಾತಾದಿಕೋಪ : ಪ್ರಕೋಪನಿದಾನ ಲಕ್ಷಣ, ವಾತಾದಿ ಪ್ರಕೋಪಕಾಲ ಕಥನ.

28. ವ್ಯಾಧಿನಿರ್ದೇಶ : ಮುಖರೋಗಾದಿ ಲಕ್ಷಣಗಳ ನಿರ್ದೇಶ.

29. ಮುಖರೋಗ : ಮುಖರೋಗ ನಿರ್ವಾಚನ, ನಿದಾನ, ಚಿಕಿತ್ಸೆಗಳು.

30. ಅಕ್ಷಿರೋಗ : ಅಕ್ಷಿರೋಗ ನಿರ್ವಾಚನ, ವಾತ, ಪಿತ್ತ ಅಕ್ಷಿರೋಗ ಲಕ್ಷಣಗಳು ಮತ್ತು ಚಿಕಿತ್ಸೆ, ಪ್ರಚಾರ ಲಕ್ಷಣ ಚಿಕಿತ್ಸೆ, ಕಾಚಲಕ್ಷಣ ಚಿಕಿತ್ಸೆ, ರಕ್ತ ಜಾಕ್ಷಿರೋಗ ಲಕ್ಷಣಗಳು ಮತ್ತು ಅವುಗಳ ಚಿಕಿತ್ಸೆ, ಪಟಲ, ಮುಂಜಜಾಲ, ವರ್ತ್ಮ ಕುಂದಚಿಕಿತ್ಸೆಗಳು.

31. ಶಿರೋರೋಗ ಚಿಕಿತ್ಸೆ : ವಾತ, ಪಿತ್ತ, ಶ್ಲೇಷ್ಮ, ಸನ್ನಿಪಾತ ಶಿರೋರೋಗ ಲಕ್ಷಣಗಳು ಮತ್ತು ಚಿಕಿತ್ಸೆ. ರಕ್ತಾಭಿಘಾತ ಶಿರೋರೋಗ ಚಿಕಿತ್ಸೆ.

32. ಲಂಗಿತರೋಗ : ಲಂಗಿತ ಲಕ್ಷಣ ಮತ್ತು ಚಿಕಿತ್ಸೆ.

33. ಕರ್ಣರೋಗ : ಕರ್ಣರೋಗ ನಿದಾನ ಮತ್ತು ಚಿಕಿತ್ಸೆ.

34. ಕಾಸರೋಗ : ಕಾಸರೋಗ ನಿದಾನ ಮತ್ತು ವಾತ, ಪಿತ್ತ, ಶ್ಲೇಷ್ಮ ಕಾಸ ಚಿಕಿತ್ಸೆಗಳು.

35. ಹಿಕ್ಕಾಶ್ವಾಸ : ಹಿಕ್ಕಾಶ್ವಾಸ ನಿದಾನ ಲಕ್ಷಣ ಮತ್ತು ಚಿಕಿತ್ಸೆಗಳು.

36. ವ್ರಣರೋಗ : ವ್ರಣರೋಗ ನಿದಾನ ಲಕ್ಷಣ ಮತ್ತು ಚಿಕಿತ್ಸೆ.

37. ಸಿಂಘಾನರೋಗ : ವಾತಾದಿ ಸಿಂಘಾನ ಲಕ್ಷಣಗಳು ಮತ್ತು ಚಿಕಿತ್ಸೆ, ಪೈತ್ತಿಕ ದ್ವಂದ್ವಜ ಸಿಂಘಾನಕ ಚಿಕಿತ್ಸೆ.

38. **ಘೃಣಿರೋಗ :** ಘೃಣಿರೋಗ ಲಕ್ಷಣ ಮತ್ತು ಚಿಕಿತ್ಸೆ.

39. **ಪಾದರೋಗ :** ಪಾದರೋಗ ಸಂಖ್ಯೆ, ಪಾದರೋಗ ಲಕ್ಷಣ ಮತ್ತು ಚಿಕಿತ್ಸೆ.

40. **ಜ್ವರರೋಗ :** ವಾತ, ಪಿತ್ತ, ಶ್ಲೇಷ್ಮ, ಸನ್ನಿಪಾತ ಜ್ವರಗಳ ಲಕ್ಷಣಗಳು ಮತ್ತು ಚಿಕಿತ್ಸೆ, ಅಭಿಘಾತಜ್ವರ ಲಕ್ಷಣ ಮತ್ತು ಚಿಕಿತ್ಸೆ.

41. **ಅಜೀರ್ಣರೋಗ :** ಅಜೀರ್ಣ ಲಕ್ಷಣ ಮತ್ತು ಚಿಕಿತ್ಸೆ.

42. **ಅತಿಸಾರ :** ವಾತಾದಿ ಅತಿಸಾರ ಲಕ್ಷಣ ಮತ್ತು ಚಿಕಿತ್ಸೆ. ಪಿತ್ತಾತಿಸಾರ, ಶ್ಲೇಷ್ಮಾತಿಸಾರ, ಆನುಸನ್ನಿಪಾತ, ದ್ವಂದ್ವಜ ಅತಿಸಾರಗಳ ಚಿಕಿತ್ಸೆ.

43. **ಶೂಲರೋಗ :** ಐದು ವಿಧವಾದ ಶೂಲ ನಿದಾನ ಲಕ್ಷಣಗಳು, ಸೌಭಿಕ್ಷುವಿಬಂಧ ಚಿಕಿತ್ಸೆಗಳು.

44. **ಉದಾವರ್ತರೋಗ :** ಉದಾವರ್ತರೋಗ ಲಕ್ಷಣ ಮತ್ತು ಚಿಕಿತ್ಸೆ.

4[illegible]. **ಪ್ರಸ್ಕನ್ನರೋಗ :** ಪ್ರಸ್ಕನ್ನರೋಗ ಲಕ್ಷಣ ಮತ್ತು ಚಿಕಿತ್ಸೆ.

46. **ಕ್ರಿಮಿಕೋಷ್ಠ :** ಕ್ರಿಮಿಕೋಷ್ಠ ನಿದಾನ ಮತ್ತು ಚಿಕಿತ್ಸೆ, ಶ್ಲೇಷ್ಮಕೋಷ್ಠ ನಿದಾನ ಮತ್ತು ಚಿಕಿತ್ಸೆ.

47. **ಮೂತ್ರಗ್ರಹರೋಗ :** ವಾತಾದಿ ಮೂತ್ರಗ್ರಹಲಕ್ಷಣ, ವಾತ, ಪಿತ್ತ, ಶ್ಲೇಷ್ಮ, ಮೂತ್ರಗಳ ಚಿಕಿತ್ಸೆ.

48. **ಕುಷ್ಟರೋಗ :** ಕುಷ್ಟರೋಗ ಲಕ್ಷಣ ಮತ್ತು ಚಿಕಿತ್ಸೆ.

49. **ಶೋಥರೋಗ :** ವಾತಾದಿ ಶೋಥಲಕ್ಷಣ, ವಾತಶೋಥದ ಸಾಧಾರಣಚಿಕಿತ್ಸೆ, ವಾತ ಪಿತ್ತ, ಶ್ಲೇಷ್ಮ, ಶೋಥ ಚಿಕಿತ್ಸೆಗಳು.

50. **ಮುಷ್ಕರೋಗ :** ವಾತಾಂಡ, ಪಿತ್ತಾಂಡ, ಶ್ಲೇಷ್ಮಾಂಡ, ಪ್ರೋತಾಂಡ, ರಕ್ತಾಂಡ ಲಕ್ಷಣ ಮತ್ತು ಚಿಕಿತ್ಸೆಗಳು.

51. **ಔಸೀತ ರೋಗ :** ಔಸೀತ ರೋಗ ಮತ್ತು ಅದರ ಚಿಕಿತ್ಸೆ.

52. **ಉದರ ರೋಗ :** 8 ವಿಧ[illegible] ಉದರಗಳ ಹೆಸರು ಮತ್ತು ಲಕ್ಷಣ. ವಾತೋದರ, ಪಿತ್ತೋದರ, ಶ್ಲೇಷ್ಮೋದರ ಚಿಕಿತ್ಸೆಗಳು.

53. **ಅರ್ಶೋರೋಗ :** ಅರ್ಶೋರೋಗ ಲಕ್ಷಣ ಮತ್ತು ಅದರ ಚಿಕಿತ್ಸೆ.

54. **ಉತ್ಕರ್ಣರೋಗ :** ಉತ್ಕರ್ಣ ಲಕ್ಷಣ ಮತ್ತು ಚಿಕಿತ್ಸೆ.

55. **ವಾತವ್ಯಾಧಿ :** ಮನ್ಯಾಸ್ತಂಭಾದಿ ಲಕ್ಷಣ ಮತ್ತು ಅದರ ಚಿಕಿತ್ಸೆ.

56. **ಉನ್ಮಾದ :** ಉನ್ಮಾದನಿದಾನ, ಲಕ್ಷಣ ಮತ್ತು ಚಿಕಿತ್ಸೆ.

57. ಗ್ರಹಗೃಹೀತ : ಗ್ರಹನಾಮಲಕ್ಷಣ ಮತ್ತು ಅವುಗಳಿಗೆ ನಡೆಸುವ ಶಾಂತಿ ಮೊದಲಾದ ಚಿಕಿತ್ಸೆ.

58. ಶೋಷರೋಗ : ವಾತಾದಿ ಶೋಷಲಕ್ಷಣ ಮತ್ತು ಚಿಕಿತ್ಸೆ.

59. ವಾತವಲಾಸಕ : ವಾತವಲಾಸಕಲಕ್ಷಣ ಮತ್ತು ಚಿಕಿತ್ಸೆ.

60. ವ್ಯಾಪದ : ವ್ಯಾಪದದ ಲಕ್ಷಣ ಮತ್ತು ಚಿಕಿತ್ಸೆ.

61. ವಿಷರೋಗ : ವಿಷಲಕ್ಷಣ ಮತ್ತು ಚಿಕಿತ್ಸೆ.

62. ಅಪಸ್ಮಾರ : ಅಪಸ್ಮಾರ ಲಕ್ಷಣ ಮತ್ತು ಚಿಕಿತ್ಸೆ.

[1] ದ್ರು (ಜ) [2] ಳ (ಜ) [3] ವನೆಸೆವ (ಜ) [4] ಳಾ ತಪ್ಪದೆ (ಜ, [5] ದಿಂ (ಕ) [6] ಮಯ್ಯುದ್ದಿ (ಜ) [7] ವ (ಜ) [8] ತ (ಜ) [9] ಸಾ (ಜ) [10] ನಂತರದಿ ಕೊಡುಗೆ ಪೂರ್ವ ಕ್ರಮದಿಂದಂ ಕಾಂ ಭ್ರಾಂತಿಲ್ಲವಕ್ಕು ಹಯಕತಿಸಂತೋಷಮುದೆಂದು ಪೇಳ್ದನಭಿನವಚಂದ್ರ (ಜ) [11] ಳವುಂ (ಕ) [12] ಗನುರಾಗದೊಳಿಕ್ಕುವ (ಜ) [13] ನೊದಗಿ (ಕ) [14] ದ್ರ (ಜ)

ಬೇವಿನ ಕಷಾಯದೊಳಗಾ
ಗೋವಿನ ಮೂತ್ರ[1]ಮನೆ[1]ಸಾರಮಣಿಲೆಗಳ್ಗೆನೆ ತಾಂ[2]
[3]ಭಾವಿ[3]ಸಿ [4]ಕೊಂಡರೆದಿಂಬಿನೆ[4]
ಶೀವ್ರಗೆ [5]ಕ[5]ಜೋಗನ್ನ ಬ[6]ಟ್ಟೆಯೊಳ್[6] ನಿಪುಣತೆಯಿಂ ೩೧

ಅಱು[7]ನೂಱನೆ[7]ಂಟುನೂಱಿಂ
ನೆಱಿ ಸಾ[8]ಸಿರಮಣಿಲೆಯುಂ ತಥಾಕ್ರಮುಂದಿಂದಂ
ಕಱುಗುದರೆ ಮಧ್ಯಮೋತ್ತಮ
ಮಱಿದಿ[8]ಕ್ಕುಗೆ ಮೂಱು ಸ[9]ಪ್ತಕಂ ಬಪ್ಪಿನೆಗಂ[9] ೩೨

ಅಯ್ದುಯ್ದು[10]ನೆಱಿ ಕುಡೆ ನೂ
ಜ[10]ಯ್ದುದಿನಂ[11]ದಿವಸಮುಳ[11]ಮನುಕ್ರಮದಿಂ [12]ಮ
ತ್ತ[12]ಯ್ದುಯ್ದು ನಿಳಿ[13]ಗೆ[13] ಘೃತಮುಂ
ಪೊಯ್ದಿಕ್ಕುವುದಣಿಲೆಯುಂ ಸವಿಸ್ತರದಿಂದಂ ೩೩

[14]ವೇ[14]ಧಿಸಿ ಕಳೆಗುಂ ಸರ್ವ
ವ್ಯಾಧಿಗಳಂ ಶ್ಲೇಷ್ಮ ವಾತ ಪಿತ್ತಂ[15]ಗಳುಮುಂ[15]
ಸಾಧಿಸಿ[16]ಮಿಗ[16]ಲೀಯದೆ ಸಂ
ಬೋಧಿಸಿ[17]ಕುಡುವೀ[17] ಹರೀತಕೀಕ್ರಿಯೆ ದಿವ್ಯಂ ೩೪

ಸಕಲವಿಷಹರಮನನುಪಮ
ಸಕಲಕ್ಷಯ[18]ರೋಗಹರಮನೆ[18]ಸೆದಿರೆ ಪೇ[19]ಳ್ದಂ[19]
ಸಕಳ[20]ಬುಧಸ್ತುತ್ಯಮನೊ
ಲ್ದಕಳಂಕರ್[20] ಪ್ರೋಗಳೆ ಷೋಡಶಾಧ್ಯಾ[21]ಯಮಿದಂ[21] ೩೫

---

1 ದೊಳೆ (ಜ) 2 ಸೂ (ಜ) 3 ಬಾರಿ (ಕ) 4 ಯೋಗರದಿಂದಂ (ಜ) 5 ಕಾ (ಜ) 6 ಟ್ಟೆಲೊಳ್ (ಜ) 7 ಜಿಕಿ೦ (ಜ) 8 ವಿರ ಪಣದ ತೂಕ ಮಣಸಿಲೆಯುನ್ನಿಕ್ಕಿ 9 ಪ್ತಕಂದಿನಬರೆಗಂ (ಜ) 10 ಹೆಚ್ಚಿ ಕೊಡ, ಸೀನ (ಜ) 11 ಬರ (ಜ) 12 ದಂ ಐ (ಜ) 13 ಯೆ (ಜ) 14 ಬಾ (ಕ) 15 ಳ ನಾ (ಜ) 16 ವಿಾರ (ಜ) 17 ಕೊಡುವಡೆ (ಜ) 18 ಹರಮುಮೆ (ಜ) 19 ಳ್ದಂ ಕಾಂ (ಜ) 20 ಲಾಗಮ ಬುಧ ಸ್ತುತ್ಯಂ ಅಕಳಂಕಂ (ಜ) 21 ದೊಳಂ (ಜ)

ಅಶ್ವಶಾಸ್ತ್ರದ ಟೀಕು

ಒಂದನೆಯ ಅಧ್ಯಾಯ

[೧-೧೯ ಪದ್ಯಗಳಿಗೆ ಟೀಕಿಲ್ಲ]

ಈ ಹೇಳಲ್ಪಟ್ಟಂಥಾ ಅಶ್ವಶಾಸ್ತ್ರವೆಂಬ ಸಮುದ್ರದಲ್ಲಿ ಸಿಂಹದತ್ತನು ಹೇಳಿದ ಕೃತಿಯ ಲಕ್ಷಣದಿಂದ ಸೂರ್ಯನ ಮಗನು ರೇವಂತನ ಮತದಿಂದ ಕನ್ನಡವಾಗಿ ಹೇಳಿಹೆನು. ೨೦

ಆದಿಯಲ್ಲಿ ಬ್ರಹ್ಮದೇವರ ಆನಂದಾಶ್ರುಗಳಲ್ಲಿ ಹುಟ್ಟಿದ ಕುದುರೆಗಳಂ ಮುಖಸಂಭವಂ ವಕ್ತ್ರಸಂಭವಗಳೆಂಬರು. ಆ ಬ್ರಹ್ಮದೇವರ ಹೊಕ್ಕುಳಲ್ಲಿ ಹುಟ್ಟಿದ ಕುದುರೆಗಳಂ ಅಗ್ನಿಸಂಭವಗಳೆಂಬರು ೨೧

ದೇವರ್ಕಳೂ ರಾಕ್ಷಸರೂ ಕೂಡಿ ಸಮುದ್ರದಲ್ಲಿ ಅಮೃತವ ಕಡೆಯುವಾಗ ಹಲುಮಣಿಸು ಹುಟ್ಟಿದ ಕದುರೆಗಳಂ ಅಮೃತಸಂಭವಂಗಳೆಂಬರು ೨೨

ಹುಲ್ಲೆಗಂ ಗೂಗೆಗಂ ಸಂಯೋಗದಲ್ಲಿ ಮೊಟ್ಟೆಗಳಾಗಿ ಹುಟ್ಟಿದ ಕುದುರೆಗಳಂ ಉಳೂಕಸಂಭವಂಗಳೆಂಬರು ೨೩

ಈ ಪ್ರಕಾರಂಗಳಲ್ಲಿ ಕುದುರೆಗಳ ಸಮೂಹಗಳು ಹುಟ್ಟಿ ಗರಿಸಹಿತಂ ನೈಗಳಲ್ಲಿ ದಿಕ್ಕಿನ ಮೂಲೆ ಪರಿಯಂತರಂ ಹಾರುತ್ತಿಹವು ೨೪

ಕೋಪದಿಂದಲೂ ಪ್ರಸಾದಗುಣದಿಂದಲೂ ಸಮರ್ಥನುಂ ಶಿವರೂಪನುಂ ಸಕಲಶಾಸ್ತ್ರವಿದನುಂ ಸರ್ವಶಾಸ್ತ್ರವನು ಬಲ್ಲವನು ಕುದುರೆಯ ಮನಸ್ಸನ್ನರಿತವನು ಶಾಪವ ಕೊಡುವುದಕ್ಕೆ ಅನುಗ್ರಹಿಸುವುದಕ್ಕೆ ಸಮರ್ಥನು ಮುನಿಗಳಿಗೆ ಎಲ್ಲರಿಗೂ ಒಡೆಯನು ೨೫

ಬೆಳಸಿನಲ್ಲಿ ದ್ರವ್ಯಗಳಂ ಪಡೆದಮರಿಯಾದೆಯಲ್ಲಿ ಕುದುರೆಗಳಂ ಪಿಡಿದೇಜುವಲ್ಲಿ ಕೈಯೊಳಗು ಮಾಡಿಕೊಂಬಲ್ಲಿ ಸಮರ್ಥನಾದ ಶಾಳಿಹೋತ್ರಮುನಿಯನೂ ಪಡೆವರು ೨೬

ದೇವರ್ಕಳ ಬಲವೆಲ್ಲವೂ ಕೂಡಿ ರಾಕ್ಷಸರ ಹುಯ್ಯಲ ಜಯಿಸುವುದಕ್ಕೆ ಈ ಕುದುರೆಗಳಂ ಹಿಡಿತಂದುಕೊಟ್ಟು ತಮ್ಮನು ರಕ್ಷಿಸ ಹೇಳಿದವರ್ಕಳು ನುಡಿದರು ೨೭

ಈ ಪ್ರಕಾರದಲ್ಲಿ ದೇವರ್ಕಳು ಶಾಳಿಹೋತ್ರಂಗೆ ಉಪಚಾರವ ನುಡಿಯಲಾಗಿ ಸಂತೋಷಂಬಟ್ಟು ದೇವರ್ಕಳಿಗೆ ಆ ಕುದುರೆಗಳಂ ಹಿಡಿದು ತಂದು ಒಪ್ಪಿಸುವೆನೆಂದು ಮಂತ್ರಾಕ್ಷರಂಗಳಂ ನುಡಿದನು ೨೮

ಸೂರ್ಯನ ಕುದುರೆಗಳ ಗರಿಗಳ ಛೇದಿಸಿ ಶಾಳಿಹೋತ್ರನು ದೇವೇಂದ್ರ ಮೊದಲಾದ ದೇವರ್ಕಳೆಲ್ಲರಿಗೂ ಕೊಡಲು ಅಂದು ಮೊದಲಾಗಿ ಇಂದು ಪರಿಯಂತ್ರ ಸಮಸ್ತರಿಗೂ ವಾಹನವಾದವು ೨೯

ಕುದುರೆಗಳಿಗೆ ಪರಮಾಯು ಮೂವತ್ತೆರಡು ವರುಷವು ಎರಡು ತಿಂಗಳು ಹನ್ನೆರಡುದಿನವೆಂದರಿವುದು ೩೦

ಕುದುರೆಯ ಮುಖ ಕೊರಳು ಕಂಠ ಹೆಗಲು ಉರ ಈ ಐದು ಸ್ಥಾನಂಗಳು ೩೧

ಕುದುರೆಯ ಹೊಟ್ಟೆಯಲ್ಲಿ ೬ ಹೊಕ್ಕುಳಲ್ಲಿ ೭ ತಿಕದಲ್ಲಿ ೮ ತೊಡೆಯಲ್ಲಿ ೯ ಕಾಲಲ್ಲಿ ೧೦ ಇವೆಲ್ಲಾ ತಾವಿನಲ್ಲಿ ಲಕ್ಷಣಮಂ ನೋಡುವುದು ೩೨

ಕುದುರೆಗೆ ಹತ್ತು ದಿಕ್ಕು ಹತ್ತು ಸ್ಥಲಗಳಲ್ಲಿ ಲೇಸು ಕಷ್ಟದ ರೇಖೆಗಳನು ಅರಿವುದು ೩೩

ಕುದುರೆಯ ಮೈಯ್ಯಿ ಕಣ್ಣು ಸತ್ವ ವರ್ಣ ನಡೆ ಧ್ವನಿ ರೂಪು ಗುಣ ಈ ೮ ವಿಧವನು ತಿಳಿವುದು ೩೪

ಕುದುರೆಯ ಶರೀರ ರೂಪು ಛರವಿನಲ್ಲಿ ಅಮೃತ ಸುಖ ತೆಳುವಾಗಿಯಿದ್ದರೆ ಲೇಸು. ಬಾಯಲ್ಲಿ ತಾವರೆಯ ಪುಷ್ಪದ ಪರಿಮಳವಾದರೆ ಲೇಸು ೩೫

ಕುದುರೆಯ ಕದಪು ನೇರಿತಾಗಿ ನುಂಪಾಗಿಯುಂ ಹಲ್ಲು ಹಾಲು ನೊರೆಯ ಹಾಗೆಯುಂ ತಾಳಿಗೆ ರಕ್ತವರ್ಣವಾಗಿಯಿದ್ದರೆ ಲೇಸು ೩೬

ಕುದುರೆಯ ಮೊಲೆಗಲು ತೆರೆಯಾಗಿ ಸೆರೆಯಾಗಿ ನೀಳಾಗಿಯಿದ್ದರೂ ಮೂವತ್ತೆರಡು ವರುಷದ ಆಯುಷ್ಯಮುಂಟು. ಕದಪು ನುಂಪಾಗಿ ರೇಖೆಗಳು ವಿರಾಜಿಸಿಯಿದ್ದು ವಂಶಾಂತರ ಗಂಭೀರವಾಗಿಯಿದ್ದರೆ ಲೇಸು ೩೭

ಕುದುರೆಯ ನಾಲಿಗೆ ದಪ್ಪವಲ್ಲದೆ ನೀಳವಾಗಿ ನಯವಾಗಿ ನುಣ್ಪಾಗಿ ತೆಳುವಾಗಿ ಕಿರಿದಾಗಿಯಿದ್ದು ಹಲ್ಲುಗಳು ಧವಳವಾಗಿಯಿದ್ದರೆ ಲೇಸು ಕುದುರೆಯ ದಾಡೆ ಮೃದುವಾಗಿ ನಯವಾಗಿ ದಾಡೆಯ ಸಂದಿಗಳು ಕೆದರಿದಹಾಗೆಯಿದ್ದರೆ ಲೇಸು ೩೮

[೩೯, ೪೦ ನೆಯ ಪದ್ಯಗಳಿಗೆ ಟೀಕಿಲ್ಲ.]

ಕುದುರೆಯ ಕಣ್ಣು ಅರಿದಳದ ಹಾಗೆ ಪಾದರಿಯ ಹೂವಿನ ಹಾಗೆ ರೇಖೆಗಳು ರಕ್ತವರ್ಣವಾಗಿ ಗುಂಜಿವರ್ಣವಾಗಿ ರೇಖೆಗಳುಯಿದ್ದರೆ ಲೇಸು ೪೧

ಕುದುರೆಯ ಕಣ್ಣು ಹುಲ್ಲೆಯ ನವಿಲ ಗೌಜಿನ ಹೆಣ್ಣಾನೆಯ ಗಿಳಿಯ ಕ್ರೌಂಚೆಯ ಹಂಸೆಯ ಕಣ್ಣಿನ ಮರಿಯಾದೆಯಲ್ಲಿಯಿದ್ದರೆ ಲೇಸು ೪೨

ಕುದುರೆಗೆ ಮೂಗಿನ ಹೊಳ್ಳೆಗಳು ಉದ್ದವಾಗಿ ನೊಸಲು ಕನ್ನಡಿಯ ಮರಿಯಾದೆಯಲ್ಲಿ ನಿರ್ಮಲವಾಗಿಯಿದ್ದು ಪ್ರೋತ್ಥರೇಖೆ ಅರಳಿದ ತಾವರೆಯ ಹೂವಿನ ಮರಿಯಾದೆಯಲ್ಲಿ ಮೂಗಿನ ಹೊಳ್ಳೆಗಳುಯಿದ್ದರೆ ಲೇಸು ೪೩

ಕುದುರೆ ಕೊರಳು ನೀಳವಾಗಿ ದುರ್ಮಾಂಸಗಳುಯಿಲ್ಲದೆ ಮಳೆಯದ ಕೂದಲುಗಳು ಕುರುಳಾಗಿ ಮೃದುವಾಗಿ ನಯವಾಗಿಯಿದ್ದರೆ ಒಳಿತ್ತು ೪೪

ಕುದುರೆಗೆ ನವಿಲಕೊರಳಮರಿಯಾದೆಯಲ್ಲಿ ಎರಡು ಕಡೆಯಲ್ಲು ನೇವರಿಸಿದ ಹಾಗೆ ಕೋಮಲವಾಗಿ ಬಲದ ಕಡೆಯಾದರೆ ಲೇಸು ೪೫

ಕುದುರೆಯ ಕಿವಿಗಳು ತೆರೆಯಿಲ್ಲದೆ ನರೆಯಿಲ್ಲದೆ ಸಣ್ಣನಾಗಿ ತೆಳುವಾಗಿ ಮೊನೆಯಾಗಿ ನುಂಪಾಗಿಯಿದ್ದು ಕದಪುಗಳು ನಿರ್ಮಲವಾಗಿಯಿದ್ದರೆ ಲೇಸು ೪೬

ಕುದುರೆಯ ತಿಕ ಸೇರಿಸಿದ ಹಾಗೆಯಿದ್ದು ಎರಡು ಕಡೆಯ ಕೆಲಗಳು ಹಂಗೆಯ ಮರಿಯಾದೆಯಲ್ಲಿ ಉರಬರವಾಗಿಯಿದ್ದರೆ ಲೇಸು ೪೭

ಕುದುರೆಯ ದಾಡೆ ಕಳಿಯಾಗಿ ಕಂಕುಳಮಾಂಸ ಪೂರಾಯವಾಗಿ ತೊಡೆ ಕದಪುಗಳು ಪೂರಾಯವಾಗಿಯಿದ್ದರೆ ಲೇಸು ೪೮

ಕುದುರೆಯ ಕುಪ್ಪಿಗೆ ಗುಡ್ಡವಾಗಿ ತೊಡೆಯುದ್ದವಾಗಿ ಕಾಲುಗಳು ಕೋಮಲವಾಗಿಯಿದ್ದರೆ ಗುಡ್ಡನಾಗಿಯಿದ್ದರೆ ಸಣ್ಣನಾದರೆ ಲೇಸು ೪೯

ಕುದುರೆಯ ಮೈಯೆಲ್ಲವೂ ಒಂದೆ ಬಣ್ಣವಾಗಿ ಖುರ ನೇರಿದಾಗಿ ಆ ಖುರದಲ್ಲಿ ಕ್ಷೀರಿಕೆಯುಂ ಮಾಡುಕೆಗಳಿರಲು ಲೇಸು ೫೦

ಕುದುರೆಯ ಬರಿಯು ನೆಟ್ಟೆಲುಗಳು ಕಾಣಿಸದೆ ಹಿಂದೆ ಎರಡು ಗುಂಬವನಿರಿಸಿದ ಮರಿಯಾದೆಯಲ್ಲಿ ತೋರೆ ಆ ಕುದುರೆ ಹುಟ್ಟಿದ ಮನೆಗೂ ಆ ಕುದುರೆ ಕಟ್ಟಿದ ಮನೆಗೂ ಲೇಸು ೫೧

ಕುದುರೆಗೆ ಬಾಲ ಕಿರಿದಾಗಿ ಹೊಳವುತ್ತ ಮೃದುವಾಗಿ ಸಣ್ಣನಾಗಿ ಕೂದಲು

ಆಗಿ ತೊಡೆಯೊಳಗೆ ಅಡಗಿಯಿದ್ದು ತೆರಪಾಗಿ ಇದ್ದರೆ ಲೇಸು ೫೨

ಕುದುರೆಯ ತೊಡೆಗಳು ಕೊಂಕಾಗಿ ತೆಳುವಾಗಿ ಒಂದನೊಂದು ಹೊದ್ದದೆ ಖುರ ಶುದ್ಧವಾಗಿ ಕಣಕಾಲು ಸಣ್ಣನಾಗಿ ಇರೆ ಲೇಸು ೫೩

ಕುದುರೆಯ ತಿಕ ತಾಮಸವಲ್ಲದೆ ಬಟುವಾಗಿ ಗಂಭೀರವಾಗಿ ರೋಮುಗಳು ಇಲ್ಲದೆ ಇದ್ದರೆ ಲೇಸು. ಅಲ್ಲಿ ಕೂದಲು ಬಹಳವಾಗಿ ಹುಟ್ಟಿದರೂ ನೀಳವಾಗಿ ಇದ್ದರೂ ಹೊಲ್ಲೆಹ । ೫೪

ಕುದುರೆ ಪೊಟ್ಟೆ ಸಮನಾಗಿ ಬಟುವಾಗಿ ಇದ್ದು ಅದರ ಪ್ರಜಾಪತಿ ಉಮ್ಮತ್ತ್ರದ ಅರಳಿದ ಹೂವಿನ ತೆರವಾಗಿ ಅದರ ತುದಿ ಇದ್ದರೆ ಲೇಸು. ಅರುಣವರ್ಣವಾಗಿ ಇರೆ ಲೇಸು ೫೫

ಕುದುರೆಯ ನೋಡಿದರೆ ಆಯತವಾಗಿ ದೊಡ್ಡದಾಗಿ ಕಾಂತಿಯುಳ್ಳದಾಗಿ ಉಚಿತವುಳ್ಳ ಮನವಾಗಿ ವಾಯುವೇಗವಾಗಿ ಸಿಡಿಲಧ್ವನಿಯಾಗಿ ನೆಱೆಯಾಯುಷ್ಯ ಉಳ್ಳದು ಪಟ್ಟಕ್ಕೆ ಯೋಗ್ಯವಹುದು ೫೬

ಕುದುರೆಗಳಿಗೆ ಕಡವನಿಗೂ ಗೋಳಿಗೆಗೂ ಲಕ್ಷಣ ಒಂದೇ ಪ್ರಕಾರ. ಗೋಳಿಗೆಗೆ ಯೋನಿಯೂ ಕಡವೆಗೆ ಮೊಲೆಯೂ ನೋಡಿಕೊಂಬುದು ೫೭

ಗೋಳಿಗೆಗೆ ಉರವೂ ನೊಸಲೂ ತಿಕವೂ ದೊಡ್ಡಿತಾಗಿ ಇದ್ದು ಯೋನಿ ಪಿರಿದಾಗಿ ನುಣ್ಪಾಗಿ ಕಾಲು ಹುಲ್ಲೆಯಕಾಲ ಮರಿಯಾದೆಯಾಗಿಯಿರೆ ಲೇಸು ೫೮

ಗೋಳಿಗೆಗೆ ಆಡಿನ ಮೊಲೆಯ ಹಾಗೆ ನೀಳವುಂ ಕುಱಿಯ ಮೊಲೆಯ ಹಾಗೆ ಸೆಡತುಯಿದ್ದಡಂ ಆ ಕುದುರೆಯನಾಳ್ದಂಗೆ ಅಳಲುಂ ದುಃಖವುಂ ಸಾವುಂ ತಪ್ಪದು ೫೯

ಗೋಳಿಗೆಯ ಮೊಲೆಯ ಮೊದಲು ಅಗಲವಾಗಿ ತುದಿಬಟ್ಟಿತಾಗಿ ನುಂಪಾಗಿ ಎರಡು ಮೊಲೆಯೂ ನೇರವಾಗಿ ಹಾಲು ಝುಳ್ಳನೆ ಸುರಿಯೆ ಗೋಳಿಗೆ ಉತ್ತಮ ೬೦

[೬೧ ನೆಯ ಪದ್ಯಕ್ಕೆ ಟೀಕುಇಲ್ಲ]

ಎರಡನೆಯ ಅಧ್ಯಾಯ

ಬಿಳಿದು ಕೆಂಪು ಹಳದಿ ಕಪ್ಪು ಈ ನಾಲ್ಕು ವರ್ಣದೊಳಗೆ ಒಂದು ವರ್ಣ ಒಳ್ಳಿಯವು. ಈ ಬಾಲ ಕಾಲದ ಕುದುರೆ ಉತ್ತಮವೆಂದಱುವುದು ೧

ಶರತ್ಕಾಲದ ಮುಗಿಲಿನ ಹಸುವಿನ ಹಾಲಿನ ಬಿಳಿಯಾನೆಯ ಹಿಮವಂತ ಪರ್ವತದ ಬೆಳ್ದಾವರೆಯ ಹೂವಿನ ಹಾಗೆ ಸರ್ವಾಂಗವೂ ಬಿಳಿದಾಗಿ ಇದ್ದ ಕುದುರೆಯ ಹೆಸರು ಶ್ವೇತಾಶ್ವವೆಂಬುದು ೨

ಬಂದುಗೆಯ ಹೂವು ಚಂದ್ರ ಹವಳ ಉದಯದಲ್ಲಿ ಮೂಡುವ ಸೂರ್ಯ ಇವರೋಪಾದಿಯ ಕೆಂಪು ಸರ್ವಾಂಗವಾದರೆ ಆ ಕುದುರೆಯ ಹೆಸರು ಶೋಣ ವೆಂಬರು ೩

ಬಾಗೆಯ ಹೂವಿನ ಕಕ್ಕೆಯ ಹೂವಿನ ಹೊಂದಾವರೆಯ ಹೂ ಹೊನ್ನಬಣ್ಣದ ಹಾಗೆ ಅರಿಸಿನ ಇವರ ಬಣ್ಣದ ಕುದುರೆಯಂ ಹರಿಜ್ವಳನೆಂಬರು. ಕನ್ನೈದಿಲ ಹೂವು ತುಂಬಿಯವರ್ಣದ ಕುದುರೆಯ ಹೆಸರಂ ಕೈರನೆಂಬರು ೪

ಬಿಳಿದು ಕೆಂಪು ಹಳದಿ ಕಪ್ಪು ಈ ನಾಲ್ಕು ವರ್ಣದ ಕುದುರೆಗಳು ಉತ್ತಮ. ಇನ್ನು ಬೇಱೆ ಮಿಶ್ರವರ್ಣಂಗಳುಳ್ಳ ಕುದುರೆಗಳಂ ಉತ್ತಮವೆಂಬರು ೫

ಮುಖ ಬೀಜ ತಿಕ ಈ ಮೂರು ಸ್ಥಾನವೂ ಬಿಳಿಯ ಕುದುರೆಯಲ್ಲಿ ಕಪ್ಪಾಗಿಯಿದ್ದರೆ ಆ ಕುದುರೆಯ ಹೆಸರಂ ಕರ್ಣನೆಂಬರು. ಕರಿಯ ಕುದುರೆಗೆ ಮುಖ ಬೀಜ ತಿಕ ಈ ಸ್ಥಾನಂಗಳು ಬಿಳಿದಾಗಿ ಇದ್ದರೂ ಆ ಕುದುರೆಯ ಹೆಸರಂ ಕರ್ಣನೆಂಬರು ೬

ಬಿಳಿಯ ಕುದುರೆಯ ಮೈಯಲ್ಲಿ ತೊನಚಿಹರಿದ ಹಾಗೆ ಸುಳುಹು ಸುಳುಹಾಗಿ ಕಪ್ಪುಯಿದ್ದು ಅದರ ಅಂಡ ಕಪ್ಪಾದಡಂ ಕೆಂಪಾದಡಂ ಆ ಕುದುರೆಯಂಕುಕ್ಕುಟಾಖ್ಯ ನೆಂಬರು ೭

ಬಿಳಿಯ ಕುದುರೆಯ ಬಾಲವೂ ಉರವೂ ಕಗ್ಗಿಯಿದ್ದರೆ ಆ ಕುದುರೆಯಂ ನೀಳ್ಪಳನೆಂಬರು ೮

ಬಿಳಿಯ ಕುದುರೆಯ ಕಿವಿಗಳು ಕಪ್ಪಾದೊಡಂ ಕೆಂಪಾಗಿ ಇರ್ದಡಂ ಶ್ಯಾಮ ವರ್ಣವಾದಡಂ ಆ ಕುದುರೆಯ ಶ್ಯಾಮನೆಂಬರು ೯

ಬಿಳಿಯ ಕುದುರೆಯು ಬಾಲದ ವೊಳೆಗಳು ಬಿಳಿದುವೈ ಕಪಿಲವರ್ಣವಾದ ಕುದುರೆಯುಂ ಬೇರನೆಂಬರು ೧೦

ಬಿಳಿಯಕುದುರೆಯು ಉರ ಗಲ್ಲ ವಳಯು ಅಂಡ ಕಣ್ಣು ಖುರ ಮುಸುಳಿ ಇಷ್ಟೂ ಕಪ್ಪಾಗಿ ಇದ್ದರೆ ಅದಂ ಇಂದ್ರಾಶ್ವವೆಂಬರು ೧೧

ಕೈರನಾಗಲಿ ಪವಳನಾಗಲಿ ಅದರ ನೊಸಲಲ್ಲಿ ಅರಳಿಯ ಎಲೆಯ ಹಾಗೆ ಬಿಳಿದಾಗಿ ಇರೆ ತಿಲಕನೆಂಬರು. ಆ ಕೈರ ಪವಳನ ಮುಖ ಬೆಳ್ಪಾಗಿ ಇದ್ದರೆ ಅದಂ ಬೊಟ್ಟನೆಂಬರು ೧೨

[೧೩ನೆಯ ಪದ್ಯಕ್ಕೆ ಟೀಕು ಇಲ್ಲ]

ಕುದುರೆಯ ಮೈ ಮುತ್ತುಕದ ಹೂವಿನ ಛಾಯೆಯಾವಡೆ ಅದಂ ಕುಂಕುಮ ಬೋರನೆಂಬರು. ಮೈಯೆಲ್ಲಂ ಬಿಳಿದೂ ಕೆಂಪು ಕೂಡಿ ಇದ್ದರೆ ಉಜ್ವಳಬೋರ ನೆಂಬರು. ಬಿಳಿಯ ಕುದುರೆಯ ಮೈಯ ಮೇಲೆ ಹಲವು ವರ್ಣದ ಛಾಯೆಯಾಗಿ ರ್ದಡೆ ಅದಂ ಮಂಗಳಬೋರನೆಂಬರು ೧೪

ಕುದುರೆಯ ಮೈ ಕನ್ನೈದಿಲ ಹೂವಿನ ಬಣ್ಣವಾಗಿ ಇದ್ದಡೆ ನೀಲನೆಂಬರು ಆ ವರ್ಣದ ಮೈಯೆಲ್ಲಾ ನರೆ ತುಂಬಿ ಇದ್ದರೆ ನೀಲಬೋರನೆಂಬರು ೧೫

ಕರಿದಾಗಿ ನೀಲವರ್ಣವಾಗಿ ಖುರ ವಳಯು ತೊಡೆಗಳು ಬಹಳ ಕಪ್ಪಾಗಿರೆ ಅದಂ ಕೈರನೆಂಬರು ೧೬

ಕುದುರೆಯು ಮೈಯೆಲ್ಲಂ ಬಹಳ ಕಪ್ಪಾಗಿ ಅಲ್ಲಿಗಲ್ಲಿಗೆ ಬಿಳಿದಾಗಿ ಇದ್ದರೆ ಅದಂ ಕಾರಳಗನೆಂಬರು. ಆ ವರ್ಣದ ಕುದುರೆಯ ಮೈಯು ಬಿಳುಪಿನೊಳಗೆ ಕೆಂಪುಗಳು ಒಡವೆಱದಿರೆ ಅದಂ ಕೇಸಳಗನೆಂಬರು ೧೭

ಬಿಳಿಯ ಕುದುರೆಯ ಮೈಯಲ್ಲಿ ಅಲ್ಲಲ್ಲಿಗೆ ಅರಿಸಿನದವರ್ಣವಾಗಿರೆ ಅದಂ ಸಂಪಳಗನೆಂಬರು. ಆ ಬಿಳಿಯ ಕುದುರೆಯ ಮೈಯಲ್ಲಿ ಅಲ್ಲಲ್ಲಿಗೆ ಪಾದರಿಯ ಪುಷ್ಪ ವರ್ಣವಾಗಿ ಇರೆ ಅದಂ ಬೋರಳಗನೆಂಬರು ೧೮

ಕುದುರೆಯ ನಾಲ್ಕು ಕಾಲೂ ಮುಖವೂ ಬಿಳ್ಪಾಗಿರೆ ಅದಂ ಪಂಚಕಲ್ಯಾಣ ನೆಂಬರು. ಬಾಲ ಉರವಳಯುವಿವು ಬಿಳಿದಾಗಿಯಿದ್ದರೆ ಅದಂ ಮಂಗಳನೆಂಬರು ೧೯

ಖುರ ಕಣ್ಣು ಮುಸುಳಿ ಮುಖ ಇವು ಕರಿದಾಗಿ ಬಾಲವೂ ಮೈಯೂ ಮೂಗೂ ಬಿಳಿದಾಗಿ ಇದ್ದರೆ ಅದಂ ಗೋಕ್ಕ್ಯಾಹವೆಂಬರು ೨೦

ಯಲಚಿಯ ತನಿವಣ್ಣಿನ ಮರ್ಯಾದೆಯಲ್ಲಿ ಕುದುರೆಗೆ ಬೆನ್ನನೆಟ್ಟೆಲುವಿಡಿದು ಬಾಲಪರಿಯಂತರದೊಂದೆ ರೇಖೆ ಕರಿದಾಗಿಯಿರ್ದಡಂ ಕೆಂಪಾಗಿಯಿರ್ದಡಂ ಅದಂ ಕಣ್ಣವಲ್ಲಿಯೆಂಬರು ೨೧

ಬಿಳಿದಿನೊಳಗೆ ಎಳೆಮಾವಳದ ಛಾಯೆ ಕೂಡಿ ಪಾರಿವಾಳದ ಕುದುರೆಯಂ ಕಪೋತನೆಂಬುದು. ಆ ಬಣ್ಣದ ಮೈಯ ಕುದುರೆಗೆ ಬಟಾಬಟುವಾಗಿ ಬಿಳಿದಿದ್ದರೆ ಅದಂ ಯವಟನೆಂಬುದು ೨೨

ಬಾಲ ಪಳಯ ಕಾಲು ಕಣ್ಣು ಇವು ಕಪ್ಪಾಗಿಹಣ ಮೈ ಯಲಚಿಯಕಾಯ ವರ್ಣದಲ್ಲಿ ಮೂಱು ನಾಲ್ಕು ಠಾವಿನಲ್ಲಿ ರಕ್ತವರ್ಣವಾಗಿ ಇದ್ದರೆ ಅದಂ ರಕ್ತ ಕಾಮಾಂಕಿಯೆಂಬುದು ೨೩

ಕುದುರೆಯ ಮೈಯೆಲ್ಲವೂ ಎಳ್ಳು ಅಕ್ಕಿಯೂ ಬೆರದ ಹಾಗೆ ಇದ್ದರೆ ಅದಂ ಕನ್ನೀಲನೆಂಬರು ೨೪

ಖುರ ಕಣ್ಣು ಮುಖ ವಳಯ ಕದಪು ಕಂಕುಳು ಉರ ಈ ಸ್ಥಾನಂಗಳಲ್ಲಿ ಬಿಳಿದಾಗಿ ಇರಲು ನೊ[illegible]ಯ ಹಾಗೆ ಇರಲು ಅದಂ ಗಂಗೆವಾಳಿಯೆಂಬರು ೨೫

ಬಾಲ ಮೈ ಕಾಲು ಕಪ್ಪಾಗಿ ಇರ್ದಡಂ ಅಲ್ಲವೆ ಇವು ಕೆಂಪಾಗಿ ಇರ್ದಡಂ ಬಿಳಿದಾಗಿ ಇರ್ದಡಂ ಆ ಕುದುರೆಯಂ ಚಕ್ರವಾಕನೆಂಬುದು ೨೬

ಸಿಂಹದ ಕೂದಲ ವರ್ಣದ ಮೆಯ್ಯ ಕುದುರೆ ವಳಯ ಬಾಲ ಅಂಡ ಮುಖ ಎಲ್ಲವೂ ಕೆಂಪಾಗಿ ಇದ್ದರೆ ಅದಂ ಸಿಂಹಪೋತನೆಂಬುದು ೨೭

ಬಂದುಗೆಯಹೂವಿನ ವರ್ಣ ಅಶೋಕೆಯ ವರ್ಣ ಕೆಂದಾವರೆಯವರ್ಣ ಇವು ಬಿಳಿಯ ಕುದುರೆಯಲ್ಲಿ ಮುಂದೆ ಕೇಸರವಾಗಿರೆ ಲೇಸು ೨೮

ಕುದುರೆಯ ಮೈ ವರ್ಣಂ ಬಿಳಿಯ ಸಾಸುವೆಯ ಹಾಗೆ ಇರೆ ಅದಂ ಸಿದ್ಧಾರ್ಥನೆಂಬರು. ಆ ವರ್ಣಂ ಪೂರ್ವಾಪರದಲ್ಲೂ ಬೇಱೆ ಬೇಱೆ ತೋಱೆ ಆ ಕುದುರೆ ಉತ್ತಮವೆಂಬರು ೨೯

ಕಿಚ್ಚಿನ ಸಮೂಹದ ಛಾಯೆಯ ಕುದುರೆಯಂ ಇಂದಿರನೆಂಬರು ಆ ಬಣ್ಣದ ಕುದುರೆಯು ಮೈಯಲ್ಲಿ ಸೂಜಿಕಲ್ಲು ಕಗ್ಗಲ್ಲವರ್ಣದ ವಳಯ ಬಿಳಿದಾಗಿ ಇದ್ದರೆ ಅದಂ ಪುಂಸಾಹನೆಂಬರು ೩೦

ನಾನಾ ಬಣ್ಣದ ಪಸುವಿನ ವರ್ಣದ ಕುದುರೆಗಳು ನಾನಾ ವರ್ಣದ ಪಕ್ಷಿಗಳ ವರ್ಣದ ಕುದುರೆಗಳು ನಾನಾ ಮೃಗದ ವರ್ಣದ ಕುದುರೆಗಳಂ ಅವರವರ ಹೆಸರಿನಲ್ಲಿ ಕರೆವುದು ೩೧

ನಾನಾ ವರ್ಣದ ಕುದುರೆಗಳೆಲ್ಲವಕ್ಕೂ ಬಿಳಿಯ ಕುದುರೆಯೆ ಮೇಲು. ಅದನೆ ಮಹಾ ಉತ್ತಮವೆಂಬರು ೩೨

ಆಶ್ವಿಜಮಾಸದ ರಾತ್ರಿಯ ಮುಗಿಲಿನ ಚಂದ್ರನೋಪಾದಿಯ ಬಿಳಿದನುಳ್ಳ ಕುದುರೆ ಉತ್ತಮ ೩೩

ಕೆಂಪು ಹವಳ ಕಪ್ಪಿನೊಳಗೆ ಬಿಳಿದು ಮೆಗ್ಗಳವಾಗಿ ಮಂಗಳವಾಗಿ ಇದ್ದರೆ ಆ ಕುದುರೆ ಮಹಾ ಲೇಸು ೩೪

ಬೆಳ್ಳಿಯ ಬೆಟ್ಟದ ಚಂದ್ರನ ಶರತ್ಕಾಲದ ಮುಗಿಲ ದೇವಗಂಗೆಯ ಹವಳದ ಮಣಿಯ ವರ್ಣದ ಕುದುರೆಗಳು ಉತ್ತಮ ೩೫

ಕುದುರೆಯ ತಲೆಯೂ ತೊಡೆಯೂ ಹಾವಸೆ ಹತ್ತಿದ ಕಲ್ಲಿನ ಮರಿಯಾದೆಯಲ್ಲಿ ಬೇರು ಕೊಳತು ಬಿದ್ದ ಮರನಂ ಕಾನಲ ನೀಲವರ್ಣದ ಕುದುರೆ ಒಳ್ಳಿತಲ್ಲ ೩೬

ಕುದುರೆಯ ಕಣ್ಣಿನೊಳಾಗಲಿ ಹೊರಗಾಗಿ ಬಳೆಯ ಹಾಗೆ ಬಿಳಿಯರೇಖೆ ಒಂದಾದರೂ ಹಲವಾದರೂ ಎರಡು ಕಣ್ಣೂ ಇದ್ದರೆ ಶುದ್ಧ. ಒಂದುಕಣ್ಣಾದರೆ ಹೊಲ್ಲ ೩೭

ಕುದುರೆಯ ಕಣ್ಣು ಬೆಳ್ಳಿಯ ಬಟ್ಟಲ ಹಾಗೆ ಇರೆ ಅದಂ ಮಲ್ಲಿಕಾಕ್ಷನೆಂಬರು. ಅದು ಉತ್ತಮ. ಆ ಕಣ್ಣಿಗೆ ಕಪ್ಪಿನ ಬಳೆಗಳ ರೇಖೆಯಿರೆ ಕಷ್ಟ ೩೮

ಕಾಗೆ ಕತ್ತೆ ತೋಳ ಹಾವಸೆಗಲ್ಲು ಗೂಗೆ ಬೂದಿಯ ವರ್ಣ ಪಾರಿವಾಳ ಹೊಗೆ ಈ ವರ್ಣದ ಕುದುರೆಗಳು ಅಶುಭ. ಕೊಳಲಾಗದು ೩೯

ಕರಿಯ ಕುದುರೆಯ ಅಂಡದಲ್ಲಿ ಕೆಂಪಿನ ರೇಖೆ ಬಿಳಿಯ ರೇಖೆಗಳು ಇದ್ದರೆ ಆಗದು. ಆಕ್ಷಣವೆ ಬಿಡುವದು ೪೦

ಕುದುರೆಯು ಮೈ ಬಿಳಿದು ಶಿರ ಕಪ್ಪಾಗಿ ಇದ್ದರೆ ಅದಂ ಕಾಕಶಿರನೆಂಬರು. ಕುದುರೆಯು ಮೈ ಕಪ್ಪು ತಲೆ ಬಿಳಿದಾಗಿ ಇದ್ದರೆ ಅದಂ ದೋಷಪರಿಹಾರನೆಂಬರು ೪೧

ಕುದುರೆಯು ಮುಖ ಕಾಗೆಯ ಮುಖದ ಹಾಗೆ ಕಪ್ಪಾಗಿ ಇರ್ದಡಂ ಒಳಗೆ ಕಪಿಯ ಮುಖದ ಹಾಗೆ ಕೆಂಪಾಗಿ ಇರ್ದಡಂ ಹಳದಿ ಬಿಳಿಪು ಮಿಶ್ರವರ್ಣವಾಗಿ ಇರ್ದಡಂ ಉತ್ತಮ ೪೨

ಕುದುರೆಯು ಕಾಲುಗಳಲ್ಲಿ ಅಡ್ಡತರಗಳಾಗಿ ಕರಿದಪ್ಪರೇಖೆಗಳು ಇರಲು ಅದು ಮಾರ್ಜಾಲಚರಣ. ಅದು ಅವಲಕ್ಷಣ. ದಾರಿದ್ರವಹುದು ೪೩

ಖುರ ಅಂಡ ಬಾಲದ ಅಡಿ ಶಿರ ಮೇಢ್ರ ಈ ಐದು ಸ್ಥಾನದಲ್ಲಿ ಆವ ಬಣ್ಣದ ಕುದುರೆಗಾದಡಂ ಕಪ್ಪಾಗಿರೆ ಹೊಲ್ಲ. ಈ ಮೊದಲು ಹೇಳಿದ ಐದು ತಾವಿನಲ್ಲೂ ಬಿಳಿದಾಗಿ ಇರೆ ಉತ್ತಮ ೪೪

ನಾಲ್ಕು ಕಾಲಾಗಲಿ ಬಿಳಿದಾಗಿ ಇದ್ದರೆ ಉತ್ತಮ. ಒಂದುಕಾಲಾಗಲಿ ಮೂರು ಕಾಲಾಗಲಿ ಬಿಳಿದಾಗಿ ಇದ್ದರೆ ಅದು ವಿಷಮ. ಇದಂ ವಿಷಮಪಾದನೆಂಬರು ೪೫

ಕುದುರೆಯ ಬಾಲ ಮಿಳಿಯ ಹುರಿಯ ಹಾಗೆ ಕವಲಾಗಿ ವಳಯ ಕ...ಪ್ಪಾಗಿ ಕವಲಾಗಿ ಇರಲು ಅದು ದುಷ್ಟವಾಜಿ. ಭಯಮಂ ಮಾಡುವುದು ೪೬

ಕುದುರೆಯ ಬಾಲದ ಬಣ್ಣವೂ ಮೈಯ ಬಣ್ಣವೂ ಬೇರೆ ಬೇರಾಗಿರ್ದು ಹುಲಿಯ ಬಣ್ಣದ ರುಚಿಕಾಂತಿಯಾಗಿರ್ದಡಂ ಆ ಕುದುರೆಯುಂ ಲಾಯದಿಂ ಬೇಗ ಹೊರಡಿಸಿಬಿಡುವುದು ೪೭

ಪವಳನಲ್ಲಿ ಜನ್ನನಲ್ಲಿ ಮವ್ವನಲ್ಲಿ ಜಂಬನಲ್ಲಿ ಕೆಂಚನೀಲನಲ್ಲಿ ಕೆಂಚಜನ್ನನಲ್ಲಿ ಮೈಯಲ್ಲಿ ಎಲ್ಲಿಯೂ ಕಪ್ಪು ಹುಟ್ಟಿದರೆ ಅಗ್ನಿಯೆಂಬರು. ಅದು ಕಷ್ಟ ೪೮

ವಿವಾಹ ಮುಂತಾದ ಶುಭಕಾರ್ಯಕಂ ಸಮರಾಂಗಣಕ್ಕಂ ಹುಯ್ಯಲು ಮುಖಕ್ಕಂ ಉತ್ತಮವರ್ಣದ ಕುದುರೆಗಳು ಲೇಸು. ಅಲ್ಲದ ವರ್ಣದ ಕುದುರೆಗಳು ಕಷ್ಟ. ತರಲಾಗದು ೪೯

ಚಂದ್ರನ ಕುದುರೆಯು ಮರ್ಯಾದೆಯಲ್ಲಿ ಅತಿಬಿಳಿದಾಗಿ ಸರ್ವಾಂಗವೂ ಆಗಿ ಇದ್ದ ಆ ಕುದುರೆಯನೇರಿಲು ಒಳ್ಳಿತು ಹುಯ್ಯಲಿಗೆ ಹೋದರೂ ಹಗೆಯ ಜಯಿಸುವರು ೫೦

ದೇವೇಂದ್ರ ಪಾಲು ವೆಳ್ಳಿಯೋಪಾದಿಯ ಅತಿಬಿಳಿದಾದ ಕುದುರೆಯನೇಱು ದವಂಗೆ ಜಯ. ಹಗೆಯು ಕೈಯೊಳಗಾಗಿ ಸಿಕ್ಕಿದರೂ ಆ ಹಗೆಯಂ ಗೆದ್ದು ಐಶ್ವರ್ಯವಂ ಪಡೆವರು ೫೧

ಹಾಲನೊರೆಯೋಪಾದಿಯ ಬಿಳಿಯ ಕುದುರೆಯನಾಳುವನು ಇಂದ್ರಂಗೆ ಸಮವೆಂಬರು. ಅವನು ಭಾಗ್ಯವಂತನಾಗಿ ಬದುಕುವನು ೫೨

ತುಂಬಿಯ ಬಣ್ಣದ ಕುದುರೆಯನೇಱಿ ಹುಯ್ಯಲಂ ಮಾಡಿದರೆ ಯಮನ್ಯ ಕೊಲುವ ಮರಿಯಾದೆಯಲ್ಲಿ ಹಗೆಗಳ ಬಲವಂ ಸಂಹಾರವಂ ಮಾಡುವನು. ಆ ಕುದುರೆಯ ಕೊಂಗನೆಂಬರೂ ೫೩

ಅರಿದಳದ ಬಣ್ಣದ ಕುದುರೆಯನೇಱುವಾತ ಗರುಡವಾಹನನಾದ ಹರಿಗೆ ಸಮಂ. ಆತಂ ಹಿಮಸೇತು ಮಧ್ಯಪರಿಯಂತರ ಆಳುವನು. ಅದಂ ದಿವ್ಯವಾಹನವೆಂಬರು ೫೪

ಕುದುರೆಯ ಬಾಲ ಉರ ಕದಪು ಕಣ್ಣಾಲಿ ಇವು ಅತಿಬಿಳಿದಾಗಿ ಇದ್ದದು ಆಳುವಂಗೆ ಅರಿಜಯಮಕ್ಕು. ಆದಂ ಮೇಘವರ್ಣನೆಂದು ಹೇಳುವರು ೫೫

ಮೈಯೆಲ್ಲಾ ಅತಿಬಿಳಿದಾದ ಕುದುರೆಯ ಕಿವಿಯಲ್ಲಿ ಬೇರೊಂದು ಬಣ್ಣಂಗಳು ಆಗಿ ಇದ್ದ ಕುದುರೆಯನಾಳುವಾತಂ ರಾಜ್ಯಹಸ್ತನಹ ಅದಂ ಶ್ಯಾಮನೆಂಬರು ೫೬

ಪಾರಿವಾಳದ ಮೈಯ ವರ್ಣದ ಕುದುರೆಯ ವಳಯ ಬಿಳಿದಾಗಿ ಇರ್ದಡಂ ಸಿಂಹಪ್ರೋತನೆಂಬರು. ಮೈಯೆಲ್ಲಾ ಬಿಳಿಯ ಸಾಸುವೆಯ ತಳಿದ ಹಾಗೆ ಇದ್ದಡಂ ಕಪಿಯ ಬಣ್ಣದ ಕುದುರೆಯನೇಱಿದ ಅರಸು ಹುಯ್ಯಲಿಗೆ ಹೋದರೆ ಸಾವು ತಪ್ಪದು ೫೭

ಹವಳದ ಬಣ್ಣದ ಮಯ್ಯ ಕುದುರೆ ಲಕ್ಷಣ ಕೂಡಿಕೊಂಡು ಇಹದನಾಳುವಂಗೆ ಐಶ್ವರ್ಯವಹುದು ಚೇರನಾಗಲಿ ಚೋರನಾಗಲಿ ಹುಯ್ಯಲಿಗೆ ಹೋದ ಅರಸಿಂಗೆ ಹಗೆಗಳ ಲಕ್ಷ್ಮಿ ರಾಣಿವಾಸಹಳು ೫೮

ಕುದುರೆಯ ಬಾಲವ ಗುಡಿಗಟ್ಟುವುದು ಮೈ ಪುಳಕವಾಗಿ ಇಹುದು. ಸಂತೋಷಿಸುತ್ತಿಹ ಕುದುರೆಯನಾಳಿದಾತ ರಾಜ್ಯಹಸ್ತನಹನು. ಹುಯ್ಯಲಲ್ಲಿ ಈ ಗುಣಗಳನುಳ್ಳ ಕುದುರೆಯನೇಱಲು ಹಗೆಯ ಜಯಿಸುವನು ೫೯

ಹನಳದ ವೈಯ ಬಣ್ಣದ ಕುದುರೆಯು ಲಕ್ಷಣ ಕೂಡಿಕೊಂಡು ಇದ್ದ ಕುದುರೆಯನಾಳುವಂಗೆ ಐಶ್ವರ್ಯವಹುದು. ಹುಯ್ಯಲಿಗೆ ಹೋದರೆ ಹಗೆಯು ಕೊಂದು ಆಳಿದವನ ರಕ್ಷಿಸುವುದು ೬೦

ಹುಯ್ಯಲಲ್ಲಿ ಕುದುರೆಯನೇಱಿ ಸತ್ತರೆ ವೀರ ಸ್ವರ್ಗವಹುದು. ಕುದುರೆ ಸತ್ತು ರಾಹುತನೋಡಿಬಂದರೆ ಅಧೋಗತಿಯಲ್ಲಿ ಬೀಳುವನು ೬೧

ಪೂರ್ವದವರು ಕುದುರೆಯನೇಱಿ ಸತ್ತರೆಂದು ಈಗ ಆವನಾನೊಬ್ಬನೂ ಕುದುರೆಯು ಸಾಕದೆ ಇದ್ದರೆ ತನ್ನ ಒಡೆಯನ ಕೊಂದವ ಅವಂ ಧನಭಂಡನೆಂಬರು ೬೨

ಕುದುರೆಯು ಬೆನ್ನ ಮೇಲೆ.... ... ೬೩

ಕನ್ನಡ ಕವಿಗಳ ಕಿವಿಗೆ ಕರ್ಣಾಮೃತವಾಗಿ ಕುದುರೆಗಳ ವರ್ಣವಿಸ್ತಾರವಂ ಪೇಳಿದ ಎರಡನೆಯ ಅಧ್ಯಾಯ ೬೪

ಮೂರನೆಯ ಅಧ್ಯಾಯ

ಕುದುರೆಯ ಪುಂಡ್ರ ಕಾಕಸೆ ಪುಷ್ಪ ಗಂಧ ಕಾಂತಿಯನು ಹೇಳಿಹೆನು ೧

ಬಿಳಿದಿಲ್ಲದ ಬಣ್ಣದ ಮೈಯ ಕುದುರೆಯಲ್ಲಿ ತಾವರೆ ಹೂವಿನೋಪಾದಿಯ
ಬಿಳಿದುಗಳಿರ್ದರೆ ಅದು ಲೇಸು. ಅದಂ ಪ್ರೋತಭೀತನೆಂಬರು ೨

ಕುದುರೆಯ ಮುಖವಲ್ಲದೆ ಕದಪಿನಲ್ಲಿ ಕೊರಳಿನಲ್ಲಿ ಬಿಳಿದಾಗಿಯಿದ್ದರೆ ಅದಂ
ಪುಂಡ್ರಾಪ್ಪಯನೆಂಬರು. ಆ ಎರಡುಸ್ಥಾನದಲ್ಲಿ ಗಲ್ಲ ಕೊರಳು ನರೆ ಅಲ್ಲಿಗಲ್ಲಿ ಹುಟ್ಟಿ
ಇದ್ದರೆ ಅದಂ ಪುಂಡ್ರನೆಂಬರು ೩

ಗದೆ ತೋರಣ ಕನ್ನಡಿ ಕಳಶ ಶಂಖ ತುಂಬಿ ನೈದಿಲು ಖಂಡೆಯ ಪನಕೆ
ತಾವರೆಯ ಹೂವು ಇಂಥಾ ಶುಭರೇಖೆಗಳು ಕುದುರೆಯ ಮೈಯಲ್ಲಿ ಇದ್ದರೆ ಮಹಾ
ಉತ್ತಮ ೪

ಬಿಲ್ಲು ಕಲ್ಪವೃಕ್ಷ ಬಲಸುಳಿ ತಾವರೆಯ ಹೂ ದೇವೇಂದ್ರನವಜ್ರ ಲಕ್ಷ್ಮಿ ರಂಗ
ವಾಲಿ ಈ ಪ್ರಕಾರದ ಶುಭರೇಖೆಗಳು ಆಗಿ ಇರ್ದ ಕುದುರೆ ಉತ್ತಮ ೫

ಕುದುರೆಯ ನೊಸಲಲ್ಲಿ ಬಿಳಿದು ಚೌಕವಾಗಿ ಇದ್ದರೆ ಲೇಸು. ಆ ಮುಖದಲ್ಲಿ
ಅರಳಿಯ ಎಲೆಯ ಹಾಗೆ ಬಿಳಿದಾಗಿ ಇದ್ದರೆ ಲಾಭ ಭಾಗ್ಯಂಗಳಹವೆಂಬರು ೬

ಕೆನ್ನೆಯಲ್ಲಿ ಮಂಡೆಯಲ್ಲಿ ಹಣೆಯಲ್ಲಿ ತುಟಿಯಲ್ಲಿ ತೋಳಿನಲ್ಲಿ ಬಿಳಿದಾಗಿ ಇದ್ದ
ಕುದುರೆ ಮಹಾ ಉತ್ತಮ ೭

ಮುಖ ಮಂಡೆಗಳಲ್ಲಿ ಬೆಳ್ಪು ಏನೂ ಇಲ್ಲದಿರೆ ಕೊರಳ ಕೆಳಗೆ ಬಿಳಿದಾಗಿದ್ದರೆ
ಭಾಗ್ಯವಂತ ಆಳಲಾಗದು ಕಷ್ಟ ೮

ತಿರುಹುಮುರುಹನಾಗಿ ಉರುಗನಾಗಿ ಬಾಗಿಯಡೆವಜಿತವಾಗಿ ಪುಂಡ್ರಹಣೆ
ಯಲ್ಲಿ ಇರ್ದಡೆ ಆಗದು ೯

ಕುದುರೆಗೆ ಪುಂಡ್ರ ಒಳ್ಳೆಯ ಪುಷ್ಪಗಳ ಆಕಾರದಲ್ಲಿದ್ದರೆ ಅಂಡ ಬಿಳಿದಾಗಿದ್ದರೆ
ಆದನಾಳ್ವಂಗೆ ಮಕ್ಕಳಹರು ಸುಖವಹುದು ಭಾಗ್ಯವಂತರಹರು ೧೦

ಕುದುರೆಯು ಹೊಕ್ಕುಳ ಸ್ಥಾನದಲ್ಲಿ ಪುಷ್ಪಗಳ ಹಾಗೆ ಮೊಲ್ಲೆಯು ಹೂವಿನೋ ಪಾದಿಯಲ್ಲಿ ಇದ್ದರೆ ಅದನಾಳ್ವಾತಂ ದಳವಾಯಿಯಹನು ೧೧

ಕುದುರೆಯು ಮೈಯಲ್ಲಿ ಪುಷ್ಪರೇಖೆಗಳು ಕರಿದಾಗಿ ಇದರ್ದೆ ಕಷ್ಟ ಆಗದು ಆ ಕರಿದಿನೊಳಗೆ ಬಿಳಿದು ಕೂಡಿ ಇದ್ದರೆ ಆ ಕಪ್ಪಿನ ದೋಷವಿಲ್ಲವೆಂಬರು ೧೨

ಕುದುರೆಯು ಕೊರಳು ಕೈ ಕಣ್ಣು ಇವರಲ್ಲಿ ಕಪ್ಪಿನ ಪುಷ್ಪಂಗಳು ಇದಲು ಕುದುರೆಯನಾಳುವಾತಂಗೆ ನೋವಹುದು, ಹುಯ್ಯಲಿಗೆ ಏಜಲಾಗದು ೧೩

ಕುದುರೆ ಇದ್ದಂಥಾ ಶುಭರೇಖೆಗಳಾಗಲಿ ಆ ಫಲಗಳು ಲೇಸಾಗಲಿ ಕಷ್ಟವಾಗಲಿ ಏಳುದಿನ ಏಳುಪಕ್ಷ ಏಳುತಿಂಗಳು ಏಳುವರುಷಕ್ಕೆ ಅದನಾಳಿದಂಗೆ ಆ ಫಲ ತಪ್ಪದು ೧೪

ಕಣ್ಣು ಬಾಯಿ ಕಿವಿ ಮೈ ಯೋನಿ ಲದ್ದಿ ಗದ್ದ ಇವರಲ್ಲಿ ಗಂಧವನರಿತ ಫಲಗಳ ಹೇಳುವುದು ೧೫

ಕಬ್ಬಿನ ಹಾಲು ಹೊಸತುಪ್ಪ ಹಸುವಿನಹಾಲು ಜೇನು ಇಪ್ಪೆಯ ಹೂವು ದ್ರಾಕ್ಷೆಯ ಹಣ್ಣು ಇದರ ಪರಿಮಳಂಗಳುಳ್ಳ ಕುದುರೆಯನಾಳುವಾತಂಗೆ ಲೇಸಹುದು ೧೬

ತಾವರೆಯ ಕಣಿಗಿಲ ನೈದಿಲ ಜಾಜಿ ಅರಳುಗಳ ಪರಿಮಳಗಳನುಳ್ಳ ಕುದುರೆಗಳ ನಾಳ್ವಾತಂಗೆ ಲೇಸಹುದು ೧೭

ಲಾಮಂಚ ಶ್ರೀಗಂಧ ಮುಡಿವಾಳ ಚೆಂಗಣಗಿಲ ಕೋಷ್ಠ ಕರ್ಪುರ ಶುಂಠಿ ಯಾಲಕ್ಕಿ ಲವಂಗ ಅಗಿಲು ಇವರ ಪರಿಮಳವುಳ್ಳ ಕುದುರೆಯನಾಳುವಾತಂಗೆ ಉತ್ತಮ ಲೇಸು ೧೮

ಬಾಯಿ ತಿಕಗಳಲ್ಲಿ ಹುತ್ತದಮಣ್ಣಿನ ನೆಲ್ಲರಳಿನ ಬೆಲ್ಲವತ್ತದ ಹಣ್ಣಿನ ಜೇನ ತುಪ್ಪದ ಹಲಸಿನ ಹಣ್ಣಿನ ಪರಿಮಳಂಗಳನುಳ್ಳ ಕುದುರೆಯನಾಳೆ ಮಹಾ ಉತ್ತಮ ೧೯

ಕುದುರೆ ನೀರೊಳಗೆ ಮುಳುಗಿ ಬಂದಡಂ ಅಲ್ಲದೆ ಮೆಯ್ಯ ತೊಳದಡಂ ಆ ಕುದುರೆಯ ಪರಿಮಳ ಕುದುರೆಯ ಲದ್ದಿ ಗತ್ತಗಳಲ್ಲಿ ಇರೆ ಅದನಾಳ್ವಾತಂಗೆ ತಾವರೆಯ ಹೂವಿನ ಪರಿಮಳಗಳಾಗಿರೆ ಮಹಾ ಉತ್ತಮ ಚಕ್ರವರ್ತಿಯೆನಿಸುವನು, ಇಷ್ಟು ಗಂಧ ಉತ್ತಮ ೨೦

ಹಂದಿಯ ಆನೆಯ ಕತ್ತೆಯ ಶರಭದ ಇವರ ಪರಿಮಳದ ಕುದುರೆಯ ಲದ್ದಿ ಗತ್ತಗಳಲ್ಲಿ ಇರೆ ಅದನಾಳ್ವಾತಂಗೆ ಹಾನಿ ದುಃಖ ಮರಣ ತಪ್ಪದು ೨೧

ಬಿಸಿನೆತ್ತರು ಮೀನಗೊಲಸು ಕೊಂದು ಹಾಕಿದ ಇಲಿಯ ಕರುಳಿನ ಹಸಿಯ ಗೋಚರ್ಮದ ಮುತ್ತಕದ ಇವರ ಪರಿಮಳ ಉಳ್ಳ ಕುದುರೆಯನಾಳುವಂಗೆ ಕಷ್ಟ ಹಾನಿ ತಪ್ಪದು ೨೨

ಕುದುರೆಗೆ ಒಳ್ಳೆಯ ಅಲ್ಲದಧ್ವನಿಗಳ ಫಲವನೂ ಉರ ಕೊರಳಲ್ಲಿ ರೋಮಗಳು ಸಾಲಾಗಿರ್ದ ಫಲಗಳನೂ ಪೇಳಿಹೆನು ೨೩

ಕುದುರೆ ಹಲುಮಣಿಸುವಾಗ ಸತ್ವವಾಗಿ ನಯವಾಗಿ ಎದೆ ಕೊರಳು ಹೊಟ್ಟೆ ತಲೆಗಳಲ್ಲಿ ಬಿದಿರುವಣ ಈ ಪ್ರಕಾರದಲ್ಲಿ ಧ್ವನಿ ಹೊರಡಲು ಅದಂ ಹೇಷಿತವೆಂಬರು ಆಯುಷ್ಯ ಉಂಟು ೨೪

ಸಿಡಿಲ ಧ್ವನಿಯ ಹಾಗೆ ಗಂಭೀರವಾಗಿ ನೇರ್ಪಾತಾಗಿ ಸಂತೋಷವಾಗಿ ನಿರ್ಮಳವಾಗಿ ಇದ್ದ ಧ್ವನಿಯನುಳ್ಳ ಕುದುರೆ ಧನಕನಕ ಸಮೃದ್ಧಿಯ ಮಾಡುವದು ೨೫

ಮದಸೋಕಿದಾನೆಯ ಗುಡುಗಿನ ಹುಲಿಯ ಕ್ರೌಂಚದ ಗಿಳ್ಳವರೆಯ ಶಂಖದ ಪುಣ್ಯಾಹವದ ಗೋಳಿಯ ಸಿಂಹದ ಇವರ ಧ್ವನಿಯ ಪರಿಯಾದೆಯಲ್ಲಿ ಹಲುಮಣಿಸುವ ಕುದುರೆ ಮಹಾ ಲೇಸೂ ೨೬

ಕುದುರೆಯು ಪೈಯಿಂದಲೂ ಶಿರಸ್ಸು ಉದ್ದವಾಗಿ ಇದ್ದು ಜೀವಧನಗಳ ಬಸವ ನೇಜುವ ಸುರತಧ್ವನಿಯಂದದಿಂ ಅತಿ ಕಠೋರವಾಗಿ ಇದ್ದ ಸ್ವರವಾದಡಂ ಹೊಲ್ಲ ಮೆಂಬರು ಅದನಾಳ್ವಾತಂಗೆ ಹೊಲ್ಲ ೨೭

ಹಂದಿಯ ಕತ್ತೆಯ ಶರಭದ ಬಳ್ಳುವಿನ ನರಿಯ ಚಿಕ್ಕಿನ ಕಾಕೋಳಿಯ ಕಾಗೆಯ ನಾಯ ಇವರ ಧ್ವನಿಯೋಪಾದಿಯಲ್ಲಿ ಹಲುಮಣಿಸುವ ಕುದುರೆಯಿರೆ ಮಹಾಕಷ್ಟ ೨೮

[೨೯, ೩೦ ನೆಯ ಪದ್ಯಗಳಿಗೆ ಟೀಕಿಲ್ಲ]

ಭೀತಿಯ ಮನಸ್ಸನುಳ್ಳದು ಚಪಲತ್ವ ಕಾಮಾತುರ ಬಹಳ ಆಹಾರವ ಕೊಂಬುದು ಈ ಗುಣಂಗಳನುಳ್ಳ ಕುದುರೆಯುಂ ಖರಸತ್ವನೆಂಬರು, ಅಂಜುವುದು ಬಹಳ ದೀಪನಉಳ್ಳುದು ಬಾಯಾರಿಕೆಯನುಳ್ಳದು ದೈವರೂಪು ಈ ಗುಣಂಗಳನುಳ್ಳ ಕುದುರೆಯುಂ ಪಶುಸತ್ವನೆಂಬರು ೩೧

ಭೀತಿಯನುಳ್ಳದು ಜಡದೇಹಿ ಬಹಳ ನೀರ ಕುಡಿವುದು ಪ್ರಿಯುವನುಳ್ಳದು ಇದಂ ಮೀನಸತ್ವನೆಂಬರು ಆವಾಗಲೂ ನಿದ್ರೆಯಾಗಿ ಇಹುದು ಆಲಸ್ಯವುಳ್ಳದು ಧ್ಯಾನಿಸುತ್ತಲಿಹುದು ಅದಂ ಭೈರವಸತ್ವನೆಂಬರು ೩೨

ನಡೆಯುಲಕ್ಷಣಗಳನೂ ಉತ್ತಮವೆಂದು ಕಷ್ಟವೆಂದು ನಾನಾ ಗತಿಗಳನೂ ಹೇಳಿಹೆನು ೩೩

ಖುರಖುರ ಬೆರಸದೆ ಇರುಹಣ ಕಾಲು ಕಾಲುವೊರಸದೆ ಇರುಹಣ ತಗ್ಗಿದ ಬೆನ್ನು ಅಡಗಿದ ಹೊರವಾರು ಅಡಗಿದ ಬಾಲ ತರವಾಗಿ ಇರುಹಣ ಕೊರಳು ನೆಗಹಿ ಇದ್ದರೆ ಅದು ಒಳ್ಳಿತೆಂದಱುವುದು ೩೪

ಆನೆ ನವಿಲು ಹುಲಿ ಶರಭ ಹಸು ಗೂಳಿ ಹಂಸೆ ಚಕ್ರವಾಕ ಸಿಂಹ ಕೋಡಗ ಇವರ ನಡೆಯುಳ್ಳ ಕುದುರೆಗಳು ಉತ್ತಮ ೩೫

ತಲೆಯು ಕುತ್ತುವಡಂ ಶಿರವನೆತ್ತುವಡಂ ಬಲಿದು ನಡವಡಂ ಬಿಡದೆ ಎಡರುವಡಂ ಇದ್ದ ಹಾಗೆ ಇದ್ದು ಮೋಸದಲ್ಲಿ ಇಡುವಡಂ ಅದಱಿಂ ವಾಹಕಂಗೆ ಧನಹಾನಿಯುಂ ಕಷ್ಟಮುಂ ತಪ್ಪದು ೩೬

ಕುದುರೆ ಹದಿನಾರು ಮಾತ್ರೆ ಹೋಗಿ ಆಗವೆ ತಿರುಗಿದ ಬೇಗವನುಳ್ಳ ಕುದುರೆ ಉತ್ತಮ ೩೭

ಕುದುರೆ ಇಪ್ಪತ್ತನಾಲ್ಕು ಮಾತ್ರೆಗೆ ಬಹುದು ಮಧ್ಯಮದ ಬೇಗವನುಳ್ಳುದು ಕಷ್ಟವೆಂಬರು ೩೮

ಕೈಯಿಂದ ಪ್ರದಕ್ಷಿಣವಾಗಿ ಬಲನಾಗಿ ಮೊಳಕಾಲು ಗಲ್ಲ ಪರಿಯಂತ ಅಕ್ಷರ ಒಂದೊಂದನಣಿಯಿಂದ ಹೇಳಿದರೆ ಮಾತ್ರೆಯೆಂಬ ಹೆಸರು ೩೯

ಸತ್ವವನುಳ್ಳದು ಮೈಕಾಂತಿಯೂ ನಯವನೂ ಉಳ್ಳದು ಬುದ್ಧಿಯನುಳ್ಳದು ತಳವಿಲ್ಲದುದು ಬೇಗವನುಳ್ಳದು ಕೊರಳುದ್ದವಾಗಿ ರತಿಸತ್ವವನುಳ್ಳದು ಕುದುರೆ ಮಹಾ ಉತ್ತಮ ೪೦

ಕುದುರೆಯ ಮೈಯ ಕೂದಲು ವಳಯದ ಕೂದಲು ಕೋಮಲವಾಗಿ ಇದ್ದು ಹಲ್ಲು ಅತಿಬಿಳಿದಾಗಿ ಇದ್ದು ಕಣ್ಣು ತಾವರೆಯ ಹೂವಿನೋಪಾದಿಯಲ್ಲಿ ಇದ್ದ ಕುದುರೆ ಸಂತೋಷವನೆ ಮಾಡುವದು ೪೧

ಬಲ್ಲಿಂತಿಕೆಯನುಳ್ಳದು ಸಜ್ಜನನು ಮೈಯ ಕೂದಲು ಸಣ್ಣನಾಗಿ ಕಾಂತಿಯಾಗಿ ಹುಲ್ಲೆಯ ಕಾಲುಗಳ ಮರ್ಯಾದೆ ಇದ್ದ ಕುದುರೆಯುಂ ತೀಕ್ಷ್ಣಹಯವೆಂಬರು ಉತ್ತಮ ೪೨

ಹುಲ್ಲೆಯ ಕಾಲಿನ ಹಾಗೆ ಹುಲ್ಲೆಯ ಕಣ್ಣು ಅದಱ ಮೈ ಅದಱ ಲಂಘೆ ಜಿಟ್ಟಪ ನೆಗೆಪ ಉರವಣೆಯಾಗಿ ಇದ್ದ ಕುದುರೆ ಉತ್ತಮ ೪೩

ಕುದುರೆಯು ಚರ್ಮಕೊರಳು ಕೂದಲು ಮೈ ಇವೆಲ್ಲವು ದಪ್ಪವಾಗಿ ಆನೆಯ ನಡೆಯನುಳ್ಳ ಕುದುರೆ ಮಂದನೆಂಬುದು ೪೪

ಕುದುರೆಗೆ ನಾನಾಲಕ್ಷಣಗಳನು ಐದುಪ್ರಕಾರದ ಛಾಯೆಯನು ಹೇಳಿಹೆನು ೪೫

ಭೂಮಿಯ ನೀರಿನ ಅಗ್ನಿಯ ಛಾಯೆಯನುಳ್ಳ ಕುದುರೆ ಆಯುಷ್ಯ ವುಂಟು ಲೇಸು ವಾಯು ಆಕಾಶದ ಛಾಯೆಯನುಳ್ಳ ಕುದುರೆ ಅಲ್ಪಾಯುಷ್ಯ ಕಷ್ಟವೆಂದಱುವುದು ೪೬

ಕುದುರೆಯ ಮೈಯೆಲ್ಲಂ ನಾನಾವರ್ಣವಾಗಿ ಸ್ಥಿರವಾಗಿ ಹೊಳಹಾಗಿ ತೋಱಲು ಅದಂ ಭೂಛಾಯೆಯೆಂಬರು ಲೇಸು ೪೭

ತಿಳಿನೀರಿನ ಬಿಳಿಯತಾವರೆಯೆಲೆಯ ಕಾರ್ಮುಗಿಲ ಇವರ ವರ್ಣದಲ್ಲಿ ಹೊಳಹನುಳ್ಳ ಬಣ್ಣದ ಕುದುರೆ ಜಲಚ್ಛಾಯೆ ಉತ್ತಮ ೪೮

ಹವಳದ ಚಿನ್ನದ ಮೂಡುವ ಸೂರ್ಯನ ಪದ್ಮರಾಗದ ನೇರಿಲದೋರೆವಣ್ಣಿನ ಇವರೋಪಾದಿಯ ಕಾಂತಿಯನುಳ್ಳ ಬಣ್ಣದ ಕುದುರೆ ಅಗ್ನಿಚ್ಛಾಯೆ ಉತ್ತಮ ೪೯

ಕುದುರೆಯ ಮೈಯರೋಮಗಳು ಕೆದಱಿ ಕೊಂಡು ಜೋಗುಗಳಾಗಿ ಕುರುಳಿನ ಹಾಗೆಡೊಂಕಾಗಿ ನಿಬಿಡನಾಗಿ ಇದ್ದರೆ ಆ ಕುದುರೆಯಂ ಮರುತಚ್ಛಾಯೆಯೆಂಬರು, ಕಷ್ಟ ೫೦

ಬತ್ತಿದ ಮೈ ಒಣಗಿ ಇರುವಹಣ ಕಗ್ಗಿದ ವರ್ಣಗಳಾಗಿ ತೋಱದರೆ ವ್ಯೋಮಚ್ಛಾಯೆ ಕಷ್ಟವೆಂಬರು ೫೧

ಕುದುರೆಯ ಹಣೆಯಲ್ಲಿ ಅಲಂಕರಿಸಿದ ಹಾಗೆ ನೀಳವಾಗಿ ಮೂರುಸುಳಿ ಇದ್ದರೆ ನಿಶ್ರೇಣಿಕವೆಂಬುದು ಲೇಸು ೫೨

ಸ್ಥಾನ ಪುಷ್ಪ ವ್ಯಕ್ತ ಅವಸಾನ ಎಂಬ ನಾಲ್ಕು ಸ್ಥಾನದಲ್ಲಿ ಕುಱುಹುವಡೆಗು ಶುಭ ಅಶುಭವೆಂದು ಹೇಳಿಹೆನು ೫೩

ಸೂರ್ಯನ ಕಿರಣಗಳನು ಮುಗಿಲು ಮುಚ್ಚಿ ಇಹ ಹಾಗೆ ಕುದುರೆಯ ಲಕ್ಷಣಗಳನು ಛಾಯೆ ಮುಸುಕಿಕೊಂಡು ಇಹುದು ೫೪

ಪುಷ್ಪ ಗಂಧ ಕಿರಣ ಧ್ವನಿ ನಡೆ ಪ್ರಭಾವ ವರ್ಣ ಇಷ್ಟನೂ ಹೇಳಿಹೆನು ೫೫

ನಾಲ್ಕನೆಯ ಅಧ್ಯಾಯ

ಕುದುರೆಗೆ ಒಳ್ಳೆಯ ಸುಳಿಗಳು ಮೂರು ಭೇದವಾಗಿ ಇಹವು ಎಂಟು ಸ್ಥಾನಂಗಳಲ್ಲಿ ನೂರಾರುಂಟು * ೧

ಕುದುರೆಗೆ ಹತ್ತು ಸುಳಿಗಳು ಧ್ರುವಪ್ರದ ಮತ್ತೆ ಹತ್ತು ಸುಳಿ ಒಳ್ಳೆಹವು ಮತ್ತೆ ಮೂವತ್ತೇಳು ಲೇಸು ೧೨೬ರ ರೋಮದ ಸುಳಿ ವಜ್ರಿಯೆಂಬುದು ೨

ಉರದಲ್ಲಿ ಶಿರದಲ್ಲಿ ಎರಡೆರಡು ರಂಧ್ರೋಪರಂಧ್ರದಲ್ಲಿ ಎರಡೆರಡು ನೊಸಲಲ್ಲಿಯೂ ತಿಕದಲ್ಲಿಯೂ ಒಂದೊಂದು ೩

ಕುದುರೆಯ ತಿಕದಲ್ಲಿ ನಾಲ್ಕು ಸುಳಿಯಿರ್ದರೆ ಅದನಾಳುವಾತಂಗೆ ಧನವೂ ಸುಖವೂ ಉಂಟಹುದು ೪

ಕುದುರೆಯ ನೊಸಲಲ್ಲಿ ಬಲಸುಳಿಯಾಗಿ ಎರಡು ಇದ್ದರೆ ಹುಯ್ಯಲಿಗೆ ಹೋದಲ್ಲಿ ಹಗೆಯ ಕೊಂದು ಒಡೆಯನಿಗೆ ಜಯವಂ ಮಾಡುವದು ೫

ಕುದುರೆಯ ನೊಸಲಲ್ಲಿ ನಾಲ್ಕು ಸುಳಿ ಚೌಕವಾಗಿಯಿದ್ದರೆ ಅದನಾಳ್ವಾತಂ ಲೋಕ ಪ್ರಸಿದ್ಧನು ಅರಸು ಅಹನು ೬

* ಕುದುರೆಯನು ಕ್ರಯಕ್ಕೆ ತೆಗೆಯುವವನು ಆ ಕುದುರೆಯ ನೋಡುವಾಗ ಕುದುರೆ... ಬೀಸಿ ತನ್ನ ಬಲದಕಡೆ ನೋಡೆ ಲದ್ದಿಯನಿಕ್ಕಿ ಹಲುಮಣಿಸಿ ಬಲದುರವ ಮುಟ್ಟೆ ಖುರದಿಂದಾ ನೆಲವ ಹಾಯಿದರೆ ಆ ಕುದುರೆಯ...ಪಡೆದಂಗೆ ಲಾಭಲೇಸು ೨

ಲಾಯಕ್ಕೆ ಕೊಳಬಂದು ನೋಡುವಾಗ ಕುದುರೆ ತನ್ನ ಎಡದ ಕಡೆಯಂ ನೋಡಲುಂ ನಡುಗುತ್ತಾ ಮೈಯ ಬಿದಿರಿಸುತ್ತಾ ಕಾಲು ಪಸರಿಸಿ ಕಚ್ಚಿಕೊಳುತ್ತಾ ಜಂಘೆಯಾಗಿ ಸುಮ್ಮನೆ ತಲೆಯ ಕುತ್ತುತ್ತ ದನಿಹೀನವಾಗಿ ಹಲುಮಣಿಸಲುಂ ಆ ಕುದುರೆಯ ಕಟ್ಟಿದಾತಂಗೆ ಆಯುಷ್ಯ ಧನಹಾನಿ ಕೇಡುತಪ್ಪದು ೨

ಕುದುರೆಯು ವಳಯದ ಕೂದಲು ತುದಿಯ ಸ್ಥಾನದಲ್ಲಿ ಕೊರಳಲ್ಲಿ ಸುಳಿ ಯಿದ್ದರೆ ಆ ಕುದುರೆ ತನ್ನನಾಳ್ದಂಗೆ ಹಗೆಗಳ ಜಯವನು ಕೊಡುವದು ೭

ಕುದುರೆಯು ಉರದಲ್ಲಿ ನಾಲ್ಕು ಸುಳಿಯಿದ್ದರೆ ಬಹಳ ಐಶ್ವರ್ಯವು ಪರಮಾ ಯುಷ್ಯವು ಹರಷವು ಉಂಟು ೮

[೯, ೧೦, ೧೧ ನೆಯ ಪದ್ಯಗಳಿಗೆ ಟೀಕು ಇಲ್ಲ]

ಕುದುರೆಯು ಉರದಲ್ಲಿಯೂ ಪಣೆಯಲ್ಲಿಯೂ ಒಂದೊಂದು ಸುಳಿಗಳು ಇದ್ದರೆ ಅದನಾಳ್ವಂಗೆ ನೆನೆದ ಕಾರ್ಯಂಗಳಕ್ಕುಂ ೧೨

ಕುದುರೆಗೆ ಒಳ್ಳಿಹ ಸುಳಿಗಳು ಹದಿನಾರು ಹತ್ತು ಸ್ಥಾನದಲ್ಲಿ ಹತ್ತು ಸುಳಿಗಳನು ಹೇಳಿಹೆನು ೩೧

ಕುದುರೆಯು ಮೇಲಣ ತುಟಿಯಲ್ಲಿ ಸುಳಿಯಿದ್ದರೆ ತಾಯಳಿವಳು ಕೆಳಗಣ ತುಟಿ ಯಲ್ಲಿ ಸುಳಿಯಿರ್ದರೆ ತಂದೆಗೆ ಮರಣ ತಿಕದಲ್ಲಿ ಜಾಲದಲ್ಲಿ ಇದ್ದರೂ ಆ ಫಲವೆ ೧೪

ಕುದುರೆ ಎಡದ ಭಾಗದಲ್ಲಿ ಸುಳಿಯಿದ್ದರೆ ಹೆಂಡತಿ ಆಳುವವನಿಗೆ ಸಾವು ಪ್ರೋಥದೆಡೆಯಲ್ಲಿ ಸುಳಿಯಿದ್ದರೆ ಕುಲನಾಶನ ೧೫

ಕುದುರೆಯು ಮೂಗಿನಲ್ಲಿ ಸುಳಿ ಇರೆ ದ್ರವ್ಯಹಾನಿ ಕವಪುಗಳಲ್ಲಿ ಇರೆ ಒಡೆಯ ಸಾವನು ಅಂಡದ ಮೇಲೆ ಇದ್ದರೆ ಒಡೆಯನ ನಾಶವ ಮಾಡುವದು ೧೬

ಕುದುರೆಯು ಕಣ್ಣನೀರು ಬೀಳುವ ತಾವಿನಲ್ಲಿ ಸುಳಿಯಿದ್ದರೆ ಆಗಲೆ ವೈರಾಗ್ಯವುಂ ನಂಟರನಗಲಿಕೆಯನು ಮಾಡುವುದು ೧೭

ಕುದುರೆಯು ಪಾಡೆಯಲ್ಲಿ ಕಾಲಿನಲ್ಲಿ ಕೇಸರದಲ್ಲಿ ತಲೆಯ ಸಂಧಿಯಲ್ಲಿ ಕೂರ್ಚೆ ಯಲ್ಲಿ ಎರಡು ತೊಡೆಗಳ ನಡುವೆ ಸುಳಿಗಳು ಇದ್ದರೆ ಅದನಾಳುವಾತಂಗೆ ಹಾನಿಯೂ ದುಃಖ ಭಯವೂ ತಪ್ಪದು ೧೮

ಕುದುರೆಯ ತುದಿಯ ಕಿವಿಯ ಎಡೆಯಲ್ಲಿ ಸುಳಿ ಇದ್ದರೆ ಒಡೆಯನಿಗೆ ತನ್ನ ಮನೆಯಲ್ಲಿಯೆ ಮರಣ ತಪ್ಪದು ೧೯

ಕುದುರೆಯ ಸುಳಿಗಳು ಬಿಂದುಸ್ಥಾನದಲ್ಲಿ ಇದ್ದರೆ ಧನಹಾನಿಯು ಮಾಡುವದು ಕೊರಳ ಮಧ್ಯದಲ್ಲಿ ಇದ್ದ ಸುಳಿ ಅದನಾಳುವಂಗೆ ಸಾವನೈದಿಸುವದು ೨೦

ಕುದುರೆಯ ಎದೆಯಲ್ಲಿ ದಾಡೆಯಲ್ಲಿ ಇದ್ದ ಸುಳಿಯಿಂದೊಡೆಯಂಗೆ ಸಾವು ತಪ್ಪದು. ತೂರ್‍ಯದ ನಡುವೆಂದರೆ ಕಾಲಲ್ಲಿ ಸುಳಿಯಿದ್ದರೆ ಅವನಾಳುವವನ ಮಕ್ಕಳನು ಕೊಲ್ಲುವದು ೨೧

ಕುದುರೆಗೆ ಕಕುಸ್ಥಾನದಲ್ಲಿ ಸುಳಿಯಿದ್ದರೆ ಅದನಾಳುವನ ಸಂತತಿ ಸಹಾ ಎಲ್ಲರಿಗಂ ಮಹಾಕಷ್ಟ ಮರಣವಹುದು ೨೨

ಕುದುರೆಗೆ ಮಣಿ ಮೊದಲಾಗಿ ಸುಳಿಯಿದ್ದರೆ ಮನೆಯಲ್ಲಿ ಒಂದುಕ್ಷಣವೂ ಇರಿಸಲಾಗದು. ಅದರಿಂ ಹೆಂಡರು ಸಾವರು ಅದರೊಡೆಯ ರಾಜ್ಯಾಧಿಪತಿಯಾದರೂ ಕೆಡುವನು ೨೩

ಒಡೆಯನು ಕುದುರೆಯ ನೋಡ ಬಂದಾಗ ಆಕುದುರೆ ಕೋಪದಿಂ ನೋಡಿ ಅಲ್ಪವಾಗಿಯೂ ಮುಟ್ಟಲೀಸದೆ ನೋಡುವದಕ್ಕೂ ಮುಟ್ಟುವದಕ್ಕೂ ಮೊದಲೆ ಮಿಡಿವದಂ ಅದಂ ಧೂಮಕೇತುವೆಂದು ಬೇಗ ಬಿಡುವುದು ೨೪

ಲಕ್ಷಣವಿಲ್ಲದ ಕುದುರೆಗಳಂ ಬ್ರಾಹ್ಮಣರಿಗೆ ದಾನವ ಕೊಡುವುದು ಅದಲ್ಲದೆ ತನಗೆ ಹಗೆಯಾಗಿರ್ದರಿಗೆ ಕೊಟ್ಟು ಕಳುಹುವುದು ಅದಲ್ಲದೆ ದೇವರಿಗೆ ಕೊಡುವದು ಇಲ್ಲವೆ ಲೋಭವುಂಟಾದಡೆ ಅದಕ್ಕೆ ಬ್ರಾಹ್ಮರಿಂ ಹೋಮ ಶಾಂತಿ ಕರ್ಪೂರ ದಾನಂಗಳಂ ಮಾಡುವುದು ೨೫

ಕುದುರೆಯ ಕಣ್ಣನೀರು ಬೀಳುವ ಠಾವಿನಲ್ಲಿ ಇದ್ದ ಸುಳಿಯು ಕುದುರೆಯ ನೇರಿದಾತನಂ ಹುಯ್ಯಲಲ್ಲಿ ಅವನ ಕಣ್ಣ ಕಾಗೆಯೂ ಹದ್ದೂ ತಿಂದು ಹೋಹುದು ೨೬

ಕುದುರೆಯ ಹೊಟ್ಟೆಯಲ್ಲಿ ಮಣಿಕಾಲ ಕೆಳಗೆ ಸುಳಿಗಳು ಇದ್ದರೆ ಅದನಾಳುವ ಅರಸು ಹುಯ್ಯಲಲ್ಲಿ ಸಾವನು ಕಣಕಾಲಲ್ಲಿ ಸುಳಿಯಿದ್ದರೆ ಅದರಿಂ ಸೆರೆ ಸಿಕ್ಕಿ ನೋವನು ೨೭

ಕುದುರೆಯ ತುಟಿಗಳಲ್ಲಿ ಸುಳಿಯಿದ್ದರೆ ಒಡೆಯ ಸಾವನು. ನಾಭಿಯಲ್ಲಿ ಸುಳಿ ಯಿದ್ದರೆ ವ್ಯಾಧಿ ಪೀಡೆಗಳಿಂ ಬಾಧೆಗಳಕ್ಕು ೨೮

ಕುದುರೆಯ ಕಂಕುಳಲ್ಲಿ ಕೂದಲು ಸುಳಿಯೂ ಇದ್ದರೆ ಹುಯ್ಯಲಲ್ಲಿ ಅಂಬಿನ ಗಾಯದಿಂ ಸಾವನು. ಪ್ರಜಾಪತಿಯು ಮೂತ್ರಸ್ಥಾನದಲ್ಲಿ ಸುಳಿಯಿದ್ದರೆ ಗಂಡ ಹೆಂಡಿರು ಸಂಗಡ ಸಾವರು ೨೯

ಕುದುರೆಯ ಗುದದಲ್ಲಿ ಪ್ರಜಾಪತಿಯಲ್ಲಿ ಬಾಲದಲ್ಲಿ ತಿಕದಲ್ಲಿ ಸುಳಿಯಿದ್ದರೆ ಒಡೆಯನ ಅಂಬಿನ ಗಾಯದಿಂ ಕೊಲ್ಲದೆ ಮಾಣದು ೩೦

ಕುದುರೆಯು ಪಿಂಡಸ್ಥಾನದಲ್ಲಿ ಸಂದಿನಲ್ಲಿ ಅಂಡದಲ್ಲಿ ಬಿಳಿದು ಇದ್ದರೆ ಅದಂ ಹುಯ್ಯಲಿಗೆ ಏರಲಾಗದು ೩೧

ಕುದುರೆಗೆ ಅಶುಭರೇಖೆಯಾದರೂ ಶುಭರೇಖೆಯಾದರೂ ಕುಟಿನದೆಡೆಯಲ್ಲಿ ಆದಡೆ ಆ ಸುಳಿ ಉಭಯವನೂ ಕೆಡಿಸುವದು ೩೨

ಕುದುರೆಯ ಮಂಡೆಯಲ್ಲಿ ಕೂದಲ ಸಮೂಹಂ ಬಹಳವಾಗಿ ಹುಟ್ಟಿ ಇದ್ದರೆ ಅದಂ ಶ್ರೇಣಿಯೆಂಬರು. ಅದು ಅವಲಕ್ಷಣದ ಸುಳಿಯ ದೋಷಗಳನು ಪರಿಹರಿಸುವದು ೩೩

ಕುದುರೆಯ ಪೂರ್ವಭಾಗದಲ್ಲಿ ಅಶುಭವುಪ್ಪ ಸುಳಿಗಳು ಹಲವು ಕೆಲವು ಇದ್ದಡಂ ರೋಚಮಾನವೆಂದರೆ ಕಿರಣವುಳ್ಳಡೆ ದೋಷವಂ ಪರಿಹರಿವುದು ೩೪

ಕುದುರೆಗೆ ಅಪರ ಭಾಗದಲ್ಲಿ ಹಲವು ಸುಳಿಗಳ ದೋಷವಿದ್ದರೂ ಮೇಖಲೆಯಿಂದ ಪರಿಹರಿಸುವುದು. ೩೫

ಕುದುರೆಯ ಸುಳಿ ವಗ್ಧಚರ್ಮ ಅಲಂಕಾರವಿಲ್ಲದೆ ಇದ್ದರೆ ಸಮಸ್ತ ದ್ರವ್ಯಗಳನೂ ಕೆಡಿಸುವುದು ಹಣೆಯಲ್ಲಿ ಸುಳಿ ಇದ್ದರೆ ಬೇಗ ಬಿಡುವುದು ೩೬

ಕುದುರೆಯ ಮೈಯ ಮರಿಯಾದೆ ಕುದುರೆಯ ತಲೆಯ ಮೇಲೆ ಕೀಲ ಕೊಟ್ಟ ಹಾಗೆ ತೋರುವರೆ ಹೊಲ್ಲ. ನಾಡು ಹಾಳಹುದು ೩೭

ಕುದುರೆಗೆ ಪ್ರಜಾಪತಿಯಲ್ಲಿ ಮೊಲೆಯಲ್ಲಿ ಸುಳಿಗಳು ಇದ್ದರೆ ಹೊಲ್ಲ ಹಲ್ಲು ಸಹವಾಗಿ ಮರಿಹುಟ್ಟಿದರೆ ಮಹಾ ಕಷ್ಟ ೩೮

ಕುದುರೆಯ ಬಾಲದ ಕೂದಲು ಕೆಂಪಾಗಿ ಕೊರಟಾಗಿ ಉದುರಾಗಿ ಇದ್ದರೆ ಆಗದು ೩೯

ಕುದುರೆಗೆ ಒಂದೊಂದು ಸ್ಥಾನವಲ್ಲಿ ಕುಂದನೆ ಕೂದಲು ಇದ್ದರೆ ಲೇಸು ಅಂಡದಲ್ಲಿ ಕೂದಲು ಹುಟ್ಟಿ ಇದ್ದರೆ ಮಹಾಕಷ್ಟ ೪೦

ಕುದುರೆಗೆ ಅಂಡ ಒಂದು ಹಿರಿದಾಗಿ ಒಂದು ಕಿರಿದಾಗಿ ಇರ್ದಡಂ ಕುಂದಿದಡಂ ಕುಸುಮ ಇದ್ದಡಂ ನೀಳವಾದಡಂ ಕಪಿಯ ಬೀಜದ ಹಾಗೆ ಇದ್ದಡಂ ಮಹಾಕಷ್ಟ ೪೧

ಹಗಲು ಮತಿವಿಪರೀತವಾಗಿ ಇದ್ದ ಮೈ ಚೀರುವ ಧ್ವನಿ ದುಷ್ಟಮನಸ್ಸು ಮುಡುಬು ಪಾಶೆವಲ್ಲು ಇಂಥಾ ಗುಣಂಗಳುಳ್ಳ ಕುದುರೆಯನಾಳಲಾಗದು. ೪೨

ಕಕುಜೆ ಹೆಗ್ಗಂದಿತನು ಎರಡುವೊಲೆಯನುಳ್ಳದು ಅವಳಿಕಿವಿಯದು ಎರಡು ಮುಖವನುಳ್ಳದು ಅಂಡಗಾತ್ರವಾದುದು ಇವೆಲ್ಲವು ಅತಿಕಷ್ಟತಪ್ಪದು ೪೩

ಹಂದಿ ಹುಲಿ ಕಪ್ಪೆ ಬಾಗಿಯಹೂವು ಕಗ್ಗಿದ್ದ ಕಾಗೆಮುಖ ಕರಾಳಿ ಮೊರಗಿವಿ ಇಷ್ಟು ಇದ್ದ ಮನೆಗೆ ಶೋಕವನು ದುಃಖವನು ಉಂಟುಮಾಡವದು ೪೪

ಬೆಳಗುರಘಾವದಲ್ಲಿ ಮಂಗಳಪಾಠಕರ ಮದ್ದಳೆಯಧ್ವನಿ ಶಂಖಧ್ವನಿ ಇವ ನಾಲಿಸಿ ಹರುಷದಿಂದ ಹಲುಮಣಿಸುವ ಕುದುರೆ ಅಧಿಪತಿಗೆ ಜಯಮಂ ಮಾಡುವದು ೪೫

ಪತಾಕೆಗಳ ಬಿಳಿಯ ಕೊಡೆಗಳ ಆನೆಗಳ ಮುಗಿಲನು ಸೂರ್ಯನ ಕನ್ನಿಕೆಯರನು ಬ್ರಾಹ್ಮರನು ಪಾತ್ರಗಳನು ಹೂವಿನ ಸಮೂಹಗಳನು ಕಂಡು ಹಲುಮಣಿಸುವ ಕುದುರೆಗೆ ಆಯುಷ್ಯವೂ ಶುಭವೂ ಉಂಟು ೪೬

ಕುದುರೆ ಮೇವಾಗ ಹರುಷವಾಗಿ ಬಾಯಿ ತುಂಬಿದ ಹುಲ್ಲು ಸಹಾ ಹಲುಮಣಿಸಲು ಬಾಯ ಕಾಂತಿ ಮಿಂಚಿನ ಹಾಗೆ ಹೊಳವರೆ ಅದರ ನಗೆ ಮಹಾಲೇಸು ೪೭

ಕುದುರೆ ಧೂವಾಳಿಗೆ ಹೋಹಾಗ ತಿರಿಗಿ ಬಾಹಾಗ ಪೌಜು ಕಂಡಾಗ ಹರುಷದಿಂ ಹಲುಮಣಿಸಲು ಒಡೆಯಂಗೆ ಧನಲಾಭಮುಂ ಹರುಷಮುಂಮಾಡುವದು ೪೮

ಮೊದಲ ರಘಾವದಲ್ಲಿ ಕುದುರೆ ಅಗ್ನಿಯದಿಕ್ಕಿನ ಮುಖವಾಗಿ ಹರುಷದಿಂದ ಬಿಡದೆ ಹಲುಮಣಿಸುತ್ತಿರಲು ಅದರ ಪತಿ ಕಿಚ್ಚಿನದೆಸೆಯಿಂದ ಅಳಿಯುವನು ೪೯

ಕುದುರೆ ಸೂರ್ಯೋದಯದ ಸಮಯದಲ್ಲಿ ದೆಸೆಗಳ ನೋಡಿ ಮೂಡಮುಖನಾಗಿ ನಿಂತು ಗರ್ಜಿಸಲು ಹಲುಮಣಿಸಲು ಹುಯ್ಯಲಿಗೆ ಪಯಣವ ಹುಟ್ಟಿಸುವದು ೫೦

ಎರಡನೆಯ ರಘಾವದಲ್ಲಿ ಕುದುರೆ ತೆಂಕಮುಖವಾಗಿ ನಿಂತು ಗದರಿ ಹಲುಮಣಿಸುತ್ತಿರಲು ಒಡೆಯಂಗೆ ಮಕ್ಕಳಿಗೆ ಆತನ ಪೆರ್ಗಡೆಗೆ ಸಾವು ತಪ್ಪದು ೫೧

[೫೨ ನೆಯ ಪದ್ಯಕ್ಕೆ ಟೀಕು ಇಲ್ಲ]

ಕುದುರೆ ಪಡುವ ಮುಖವಾಗಿ ವಾಯುವ್ಯಮುಖವಾಗಿ ಬಹಳ ಧ್ವನಿಯಾಗಿ

ಹಲವು ಸೂಳು ಹಲುಮಣಿಸುತ್ತಿರಲು ಪೂರ್ವರಾತ್ರಿಯಲ್ಲಿಯಾದರೆ ಆ ಒಡೆಯನ ಹೆಂಡತಿಗೂ ಹೆಗ್ಗಡೆಗೂ ಮರಣವಹುದು ೫೩

ಕುದುರೆ ಬಡಗಮುಖವಾಗಿ ನಡುವಿರುಳು ರಭಸದಿಂದ ಹಲುಮಣಿಸುತ್ತಿರಲು ತನಗೆ ಪ್ರಿಯವಾದವಳ ಸಂಗಂ ದೊರಕುವುದು ೫೪

ಆವಾಗಲುಂ ಕುದುರೆ ಸಣ್ಣ ಕಟ್ಟೆಗೆಗಳ ತಿನ್ನುತ್ತಂ ನಿಸ್ಸಾರವಾಗಿದ್ದ ಹುಲ್ಲ ಕೊಳತ ಹುಲ್ಲುಗಳ ತಿನ್ನುತ್ತಂ ಇದ್ದಡಂ ದುರ್ಮನನಾಗಿ ಕೆದರಿ ಸೂರ್ಯನಂ ನೋಡುತ್ತಿರಲು ಅದು ಒಡೆಯುನಿಗೆ ಭೀತಿಯ ಮಾಡುವದು ೫೫

ಕುದುರೆಯು ಪೂರ್ವಾಹ್ಣದಲ್ಲಿ ಆಕಾಶವ ನೋಡುತ್ತ ಈಶಾನ್ಯದೆಸೆಯ ನೋಡುತ್ತ ದುರ್ಮತಿಯಾಗಿ ಬಾಲವನು ಕೆದರುತ್ತ ಹಲುಮಣಿಸುತ್ತಂ ಇರಲು ಒಡೆಯಂಗೆ ಹೇಳಿತ್ತೆಂಬುದು ೫೬

ಕುದುರೆ ಎರಡು ಕಣ್ಣಿನಲ್ಲಿ ನೀರು ಸುರಿವುತ್ತ ದುಃಖವಾಗಿ ಲದ್ದಿಯನಿಕ್ಕುತ್ತ ಗತ್ತವ ಮಾಡುತ್ತ ಹಲುಮಣಿಸುತ್ತಂ ಇರಲು ಅದರ ಒಡೆಯನಿಗೆ ಅತಿಶಯ ಭಯವಂ ಮಾಡುವದು ೫೭

ಕುದುರೆ ಮೇವ ಬಿಟ್ಟು ಚಿಂತಿಸುತ್ತ ಭ್ರಾಂತುಗೊಂಡು ಒಮ್ಮೆ ಹೀನವಾಗಿ ಒಮ್ಮೆ ದೀರ್ಘವಾಗಿ ಹಲುಮಣಿಸುತ್ತಂ ಇರಲು ಅದರಿಂ ಪತಿಗೆ ಭಯವ ಮಾಡುವದು ೫೮

ಕುದುರೆ ಬಾಲವ ಕೆದರುತ್ತ ಇರಲು ಪತಿಗೆ ಬೇಸು ಹೊಲ್ಲಂಗಳ ಹೇಳೂದು ೫೯

ಕುದುರೆಯು ಬಾಲವಡಿಯು ಕೆದರುತ್ತಾ ಬೆದರುತ್ತಾ ವೈಯುನದಿರುತ್ತಾ ಕಾಲಲ್ಲಿ ನೆಲನ ಕೆರೆಯುತ್ತಾ ಇರಲು ಬೇಗದಿಂ ಒಡೆಯಂಗೆ ಕೇಡು ತಪ್ಪದು ೬೦

ಕುದುರೆ ಬಲದ ಕಾಲಲ್ಲಿ ನೆಲನ ಅಡಿಗಡಿಗೆ ಹೊಯ್ವುತ್ತ ಬಾಲವ ಬಲದ ಕಡೆಗೆ ಕೆದರಿ ಅತಿ ಹರುಷವಾಗಿ ಇರಲು ಒಡೆಯಂಗೆ ವಿಜಯವಂ ಮಾಡುವದು ೬೧

ಕುದುರೆ ಎಡದ ಕಾಲಲ್ಲಿ ನೆಲನ ಹೊಯ್ದಡಂ ಎಡದ ಕಡೆಗೆ ಬಾಲವ ಕೆದರಿದಡಂ ಹೊಲ್ಲ ಆ ಗುಣಂಗಳು ಎರಡು ಕಡೆಯಲ್ಲಿ ಆದಡೆ ಮಧ್ಯಮಫಲ ಪಯಣ ದೂರವ ಹೇಳುವದು ೬೨

ಕುದುರೆ ಚಕ್ರಾಕಾರವಾಗಿ ಕೆವರೆ ಭಯುವಹುವು ಕುದುರೆ ಬಾಲವನಪಗಿಸಿ ಕೊಂಡರೆ ಭಯುವ ಹೇಳುವದು ೬೩

ಕುದುರೆ ಪೂರ್ವಭಾಗದಲ್ಲಿ ಉರಿಕಿಡಿಗಳು ಉದುರಿದೊಡೆ ದೇಶಕ್ಕೆ ಕೇಡು ತಪ್ಪದು ಅಪರಾಹ್ಣವಲ್ಲಿ ಉದುರಿದೊಡೆ ದೇಶಾಧಿಪತಿ ಕೆಡುಗುಂ ೬೪

ಕುದುರೆಯು ತಲೆಯಲ್ಲಿ ಉರಿ ಹುಟ್ಟಿದರೆ ಹಿರಿಯುವುಗ ಸಾವು. ಕಂಪದಲ್ಲಿ ಉರಿ ಹುಟ್ಟಿದರೆ ಒಡೆಯುನಳಿವ. ಬೆನ್ನಲ್ಲಿ ಉರಿ ಹುಟ್ಟಿದರೆ ಏರುವಾತನಳಿವನು ೬೫

[೬೬, ೬೭ ನೆಯ ಪದ್ಯಗಳಿಗೆ ಟೀಕಿಲ್ಲ]

ಕುದುರೆಯು ಮೂಗಿನ ಒಂದು ಹೊಳ್ಳೆಯಲ್ಲಿ ಉರಿಯಾದರೆ ಉಳ್ಳಂಗೆ ಒಡವೆ ನಷ್ಟ. ಎರಡು ಮೂಗಿನಲ್ಲು ಉರಿಯಾದರೆ ಆಳಿದವನ ಕೊಲುವುದು ೬೮

ತುರಗದ ಜಘನದಲ್ಲಿ ಕಿಡಿಉದುರೆ ಮಗ ಸಾವನು. ಪ್ರಜಾಪತಿಯಿಂ, ಅಂಡದಿಂ ಕಿಡಿಯುದುರಿದೊಡೆ ಕುಲಸ್ತ್ರೀ ಮರಣ ೬೯

ಕುದುರೆಯು ಬಾಲದಡಿಯಲ್ಲಿ ಉರಿದರೆ ಪತಿಗೆ ಕಾಳಗವು ಭಯುವಹುದು ಬಾಲದ ತುದಿಯಲ್ಲಿ ಆದಡೆ ಅಪಜಯುವಹುದು ೭೦

ಕುದುರೆಯು ಮೈಯಲ್ಲಿ ಉರಿಗಳು ನೆಗಳ್ದರೆ ಸಾಮಂತ ಪರಿವಾರಂಗಳಿಗೆ ಅಳಿವು ತಪ್ಪದು ೭೧

ಕತ್ತಿಯು ಕಟ್ಟುವ ತಾವು ತಲೆಯು ಕೊರಳಿನ ಮಧ್ಯ ಪಚ್ಚಳದ ನಡುವಿನ ಮಧ್ಯ ಎಡೆಯು ಮುಗುಳು ಕಂದ ಈ ಸ್ಥಲಗಳಲ್ಲಿ ಉರಿಗಳು ತೋರಿದರೆ ಕೇಡು ಅಹುದು ಈ ಸ್ಥಳಗಳಲ್ಲಿ ಮಿಂಚಿದ ಹಾಗೆ ಆದರೆ ಮಹಾ ಸಂತೋಷವಹುದು ೭೨

ಕುದುರೆ ಹಲುಮಣಿಸುವಾಗ ಬಾಯಿಂದ ಉರಿಯು ಹೊರಟು ಮೇಲುಸುರು ಹೊರಡುತ್ತ ಇದ್ದರೆ ತನ್ನ ಲಕ್ಷ್ಮಿಯು ಹಗೆಯು ಸೇರುವಳು ೭೩

ಕುದುರೆಯು ಬಾಯಲ್ಲಿ ನೀರು ಸುರಿಯುತ್ತ ಬಾಯನೊರಸುತ್ತ ಆ ನೀರು ಉರದಲ್ಲಿ ಕಾಲಲ್ಲಿ ಬೀಳಲು ಅದರಿಂ ಒಡೆಯಂಗೆ ದುಃಖ ಶೋಕ ಭಯುವಂ ಮಾಡುವುದು ೭೪

ಕುದುರೆ ಪಯಣವ ಹೋಹಾಗ ಮನೆಗೆ ಲಾಯಕ್ಕೆ ತೆಗೆವಾಗ ಹುಯ್ಯಲಿಗೆ ಹೋಹಾಗ ಹುಲಿಯ ಹಾಗೆ ಹಾವಿನ ಹಾಗೆ ನಡೆದರು ಗತ್ತುವ ಮಾಡಿದರು ಅಪಜಯ ವಹುದು ೭೫

ಕುದುರೆಗಳಿಗೆ ಅಲ್ಲದ ಸುಳಿ ಇದ್ದರೆ ಅದಂ ವೇದಶಾಸ್ತ್ರಸಂಪನ್ನರಾದ ಬ್ರಾಹ್ಮಣರಿಗೆ ಧಾರಾಪೂರ್ವಕವಾಗಿ ದಕ್ಷಿಣೆ ಸಹವಾಗಿ ಕೊಟ್ಟರೆ ಲೇಸು ೭೬

ಸುಳಿಗಳು ಕಾಲ ದೋಷ ಕಿಡಿಗಳು ಗತಿ ಚೇಷ್ಟೆಗಳು ನಾಲ್ಕನೆ ಅಧ್ಯಾಯದಲ್ಲಿ ಚಂದ್ರಕವಿ ಹೇಳಿದನು ೭೭

ಐದನೆಯ ಅಧ್ಯಾಯ

ಕುದುರೆಯ ಎರಡು ಕೆಲದೊಳಗಿನ ಲಕ್ಷಣವಂ ಹೇಳಿಹೆನು ೧

ಸ್ವರದಿಂದ ಅಜಿನದಿಂದ ಕರದಿಂದ ಚೇಷ್ಟೆಯಿಂದ ಹಲ್ಲಿನ ತುದಿಯಿಂದ ಕೂದಲುಗಳಿಂದಲು ಕುದುರೆಯ ಆಯುಷ್ಯವ ಹೇಳಿಹೆನು ೨

ಕುದುರೆಯ ತಲೆಯ ಕೂದಲು ಖುರ ಮೈ ಹಲ್ಲು ಇಸಿತರಿಂ ಹೇಳಿಹೆನು ೩

ಸವ್ಮಿಕೆಬಟ್ಟು ಖುರ ಮೃದುವಾದ ಕೂದಲು ಸರಿಯೆ ಎರಡು ತಿಂಗಳಾಯು ವೆಂದರಿವುದು ೪

ಕುದುರೆ ನಡುವಣ ಹಲ್ಲು ಹುಟ್ಟಿದರೆ ಬೇರೂರಿದರೆ ಸುಸ್ವರದಿಂದ ಹಲುಮಣಿ ಸಲು ಕಾಂತಿಯಾಗಿದ್ದ ಮೈಯಿಂ ಮೂರುತಿಂಗಳು ವರ್ತಿಸೂದು ೫

ಸಂದಂಶ ವೆಗ್ಗಳವಾಗಿ ನಡುವೆ ಒಂದು ಇದ್ದರೆ ರತಿಪ್ರಿಯನಾಗಿ ಇದ್ದರೆ ಶೃಂಗಾರವುಳ್ಳ ಮೈಯಲ್ಲಿ ಕಪ್ಪಾದರೆ ನಾಲ್ಕುತಿಂಗಳು ೬

ಅಲ್ಪವಾಗಿ ಪಾರಿಪಕ್ವಗಳು ಹುಟ್ಟಿ ನಡುತಿಂಗಳಲ್ಲಿ ಹಲ್ಲುಗಳು ಗಾತ್ರವಾಗಿ ತೋರಿದರೆ ಆರುತಿಂಗಳು ೭

ಕುದುರೆಯ ಹಲ್ಲುಗಳು ಸಣ್ಣನಾಗಿ ಮೈ ದೊಡ್ಡನಾಗಿ ಅದರ ಸಂದಶಂಗಳು ಹಾಲಿನೋಪಾದಿಯ ಬಿಳಿದಾಗಿ ಇದ್ದರೆ ಏಳುತಿಂಗಳು ೮

ಕುದುರೆಯ ಮೈಕಾಂತಿ ನಿರ್ಮಳವಾಗಿ ಪ್ರದೇಶಂಗಳು ಶೃಂಗಾರವಾಗೆ ಬಿಳಿ ದಾಗುತ್ತಯಿರಲು ಹಲ್ಲುಗಳು ಅದಕ್ಕೆ ಎಂಟುತಿಂಗಳು ೯

ಮಧ್ಯಂ ಅತಿಬಿಳಿದಾಗೆ ಉತ್ತಮ ಮಧ್ಯಮಯೆಂಬ ಎರಡೂ ಬಿಳಿದಾಗಿ ಕುಟ್ಟಿಕೆ ಕೂರ್ಚೆಯು ರೋಮಗಳು ಉದ್ದವಾದರೆ ಒಂಬತ್ತುತಿಂಗಳು ೧೦

ಕುದುರೆಯ ಉರವು ಹಸಿಖೆಯಲ್ಲಿ ಕೆಂಪಾಗಿ ಕೆಳಗಣ ಕಡೆಯ ಎರಡು ಹಲ್ಲು ಗಳು ಅತಿ ಬಿಳಿದಾಗಿ ಇರಲು ಹನ್ನೊಂದನೆಯ ತಿಂಗಳು ೧೧

ಮನುಷ್ಯರಿಗೆ ಆಯುರೇಖೆ ಕೈಯಲ್ಲಿ ಕುದುರೆಗೆ ಆಯುರೇಖೆಯನು ಪ್ರೋಥದಲ್ಲಿ ಅರಿತು ಹೇಳುವದು ೩೧

ಅತಿಗೂಢವು ಅತಿರಹಸ್ಯವು ಅತಿಶಯವು ಆದಂಥಾವನು ಶಿಷ್ಯಂಗಾಗಲಿ ಮಗಂಗಾಗಲಿ ಹೇಳುವದು ಉಳಿದವರಿಗೆ ಹೇಳಲಾಗದು ೩೨

ಕುದುರೆಯ ಒಂದು ವರ್ಷದಿಂದ ಮೂವತ್ತೆರಡುವರ್ಷ ಪರಿಯಂತರ ಆಯುಷ್ಯ ಪ್ರಮಾಣವಂ ಹೇಳಿಹೆನು ೩೩

ಒಂದುಬೆರಳಳವಿಯೊಳು ನೀಳ್ದೊಂದಳವಿಯೊಳೂರ್ಧ್ವರೇಖೆಗಳುಮಾಗಿರ್ದಡೆ ಒಂದು ವರುಷದ ಆಯುಷ್ಯವೆಂದು ಹೇಳೂದು ೩೪

ಕುದುರೆಗೆ ಪ್ರೋಥರೇಖೆ ಅಸಿಯನಾಗಿ ನೀಳವಾಗಿ ದೂರವಾಗಿ ತೋರಿದಡೆ ಶಂಭದಿಂದ ಎರಡುವರ್ಷಕ್ಕೆ ಸಾವುದು ೩೫

ಕುದುರೆಯ ಮರಿಗೆ ಪ್ರೋಥರೇಖೆ ಎರಡು ಸಣ್ಣನಾಗಿ ಮುರಿದು ಅಡ್ಡಲಾಗಿ ಇದ್ದರೆ ಆ ಕುದುರೆ ಕಿಚ್ಚಿನ ದೆಸೆಯಿಂದ ಮೂರುವರ್ಷಕ್ಕೆ ಸಾವುದು ೩೬

ಪ್ರೋಥರೇಖೆ ಎಡದಕಡೆಗೆ ಉರುಗಿದ್ದಡೆ ಎರಡು ಆದರೆ ಗಳರೋಗದಿಂದ ನಾಲ್ಕು ವರ್ಷಕ್ಕೆ ಸಾಯುವದು ೩೭

ಪ್ರೋಥದಲ್ಲಿ ಎರಡು ಅಸಿಯ ರೇಖೆಗಳಾಗೆ ಎಡದ ಕಡೆಗೆ ತುದಿಯಿಂದ ಇಳಿದು ಇದ್ದರೆ ವೃಗಜೃಂಭನೆಂಬ ರೋಗದಿಂದ ಐದು ವರ್ಷಕ್ಕೆ ಸಾಯುವದು ೩೮

ಕುದುರೆಗೆ ಪ್ರೋಥರೇಖೆ ಎರಡಂಗುಲ ಪ್ರಮಾಣದಲ್ಲಿ ನೀಳವಾಗಿ ಇರೆ ಆ ಮಧ್ಯದಲ್ಲಿ ರೇಖೆಗಳಾಗಿ ಇರೆ ಆರುವರ್ಷಕ್ಕೆ ಸಾಯುವದು ೩೯

ಕುದುರೆಯ ಪ್ರೋಥರೇಖೆ ಎರಡು ಬೆರಳ ನೀಳದ್ದು ಮೇಲಕ್ಕಾಗಿ ಇರೆ ಏಳು ವರ್ಷಕ್ಕೆ ಸಾಯುವದು ೪೦

ಕುದುರೆಯ ಪ್ರೋಥದಲ್ಲಿ ಎರಡುರೇಖೆ ಮೇಲಕ್ಕಾಗಿ ಮೂಬೆರಳುದ್ದ ಎರಡು ರೇಖೆಗಳಾಗಲು ಮಹಾತಾಪದಲ್ಲಿ ಎಂಟನೆಯ ವರ್ಷಕ್ಕೆ ಸಾಯುವದು ೪೧

ಕುದುರೆಯ ಪ್ರೋಥರೇಖೆಗಳೆರಡುಂ ತೋರವಾಗಿ ನಡು ಸಣ್ಣನಾಗಿ ಎರಡು ಒಂದೆ ಮರ್ಯಾದೆಯಾಗಿದ್ದರೆ ವಾತಶೂಲೆಯಿಂದ ಒಂಬತ್ತು ವರ್ಷಕ್ಕೆ ಸಾಯುವದು ೪೨

ಕುದುರೆಗೆ ಪ್ರೋಥರೇಖೆಗಳು ಮೊದಲು ಈ ಹೇಳಿದ ಮರ್ಯಾದೆಯಾಗಿ ಆದ್ಯಂತಪರ್ಯಂತವಾಗಿ ಇರೆ ಹತ್ತುವರ್ಷಕ್ಕೆ ಮನ್ನೆಯ ಶಂಭದಿಂದ ಸಾಯುವದು ೪೩

ಆ ಮರ್ಯಾದೆಯ ಪ್ರೋಥರೇಖೆಗಳು ಸಣ್ಣನಾಗಿ ಎರಡು ರೇಖೆಯ ತುಂಬಿಯಿರಲು ಶೂಲೆಯಿಂದ ಹಗಲಲ್ಲಿ ಹನ್ನೊಂದುವರ್ಷಕ್ಕೆ ಸಾಯುವದು ೪೪

ಕುದುರೆಯ ಪ್ರೋಥರೇಖೆ ಎರಡು ಬೆರಳ ನೀಳವಾಗಿ ಎಡದಕಡೆಯಲ್ಲಿ ಮಧ್ಯದಲ್ಲಿ ರೇಖೆಯಾಗಿರೆ ಹನ್ನೆರಡುವರುಷಕ್ಕೆ ರೂಕ್ಷಾವರ್ತದಿಂದ ಸಾಯುವದು ೪೫

ಕುದುರೆಯ ಪ್ರೋಥರೇಖೆಗಳು ಸಣ್ಣನಾಗಿ ಮೂರುರೇಖೆಗಳು ಇದ್ದರು ಅವು ತೋರವಾಗಿ ಇದ್ದರು ಪ್ರೋಥದ ನಡುವೆ ನೀಳವಾಗಿಯಿರೆ ಮೇಲುಸುರಿಂದ ಹದಿಮೂರುವರುಷಕ್ಕೆ ಸಾಯುವದು ೪೬

ಕುದುರೆಯ ಪ್ರೋಥರೇಖೆ ಎರಡು ರೇಖೆಯ ಪಾಯ್ದು ಎರಡು ಅಡ್ಡರೇಖೆ ಪದ್ಮದ ಹಾಗೆ ಇರೆ ಮಹಾ ಹುಯ್ಯಲಲ್ಲಿ ಹದಿನಾಲ್ಕುವರ್ಷಕ್ಕೆ ಸಾಯುವದು ೪೭

ಕುದುರೆಯ ಪ್ರೋಥರೇಖೆ ಎರಡು ನೀಳವಾಗಿ ಇರೆ ಪ್ರೋಥಮಧ್ಯದಲ್ಲಿ ಎಳ್ಳಿನ ಪ್ರಮಾಣ ತುದಿಯಲ್ಲಿಯಿರೆ ಬಹಳವಾಗಿಯಿದ್ದರೆ ಒಡೆಯಂಗೆ ಆಯುಷ್ಯಮನುಂಟು ಮಾಡುವದು ೪೮

ಅಂಥಾ ಕುದುರೆಯನಾಳ್ವರಸಂ ಕುಲವೃದ್ಧಿಯು ಧನವೃದ್ಧಿಯು ಧಾನ್ಯ ವೃದ್ಧಿಯು ಸಂಪತ್ತು ವಿಜಯಲಕ್ಷ್ಮೀಪತಿತ್ವವು ದೇಶಕ್ಕೊಡೆಯನಾಗಿ ಬದುಕುವನು ೪೯

ಕುದುರೆಯನೇರುವದರಿಂದ ಸಾವು ಅಹುದಾಗಿ ಆಯುರೇಖೆಯೆ ಬೇಕು ಆ ಲಕ್ಷಣದ ಕುದುರೆ ವಾತದಿಂದ ಹದಿನೈದುವರ್ಷಕ್ಕೆ ಸಾಯುವದು ೫೦

ಆ ಮರ್ಯಾದೆ ರೇಖೆಗಳು ಪ್ರೋತ್ಥಾಂತರ ಪರಿಯಂತರ ಇರೆ ವಾತದಿಂ ಪದಿನೇಳು ವರ್ಷಕ್ಕೆ ಸಾವುದು ೫೧

ಆ ಮರ್ಯಾದೆ ರೇಖೆಗಳು ಇಲ್ಲದೆ ಪ್ರೋಥಮಧ್ಯದಲ್ಲಿ ಆದರೆ ಆ ಕುದುರೆ ಮೂತ್ರಕೃಚ್ಛ್ರೆಯಿಂದ ಹದಿನಾರು ವರ್ಷಕ್ಕೆ ಸಾಯುವದು ೫೨

ಕುದುರೆ ಗಡುವನಾದರೆ ಗೋಳಿಗೆಯಾದರೂ ಪ್ರೋಥರೇಖೆಗಳು ಮೇಲಕ್ಕಾಗಿ ಇರಲು ಆ ಕುದುರೆ ಹದಿನೆಂಟುವರ್ಷಕ್ಕೆ ಹಾವಿನ ದೋಷದಿಂದ ಸಾಯುವದು ೫೩

ಕುದುರೆಗೆ ಎರಡು ಹಸ್ತದಲ್ಲಿ ಎರಡೂರ್ಧ್ವರೇಖೆಯಾಗಿ ಪ್ರೋಥಮಧ್ಯದಲ್ಲಿ ನಾಲ್ಕು ರೇಖೆಗಳು ಇರಲು ಹದಿನೆಂಟುವರ್ಷಕ್ಕೆ ಸರ್ಪನ ದೋಷದಿಂ ಸಾಯುವದು ೫೪

ಅಂಡದಲ್ಲಿಯೂ ನಾಲ್ಕುರೇಖೆಗಳು ಇದ್ದರೆ ಅದು ಶ್ರೋಣಿತವಾತದಿಂದ ಹತ್ತೊಂಬತ್ತುವರ್ಷಕ್ಕೆ ಸಾಯುವದು ೫೫

ಕುದುರೆಯ ಪ್ರೋಥರೇಖೆಗಳು ಸಣ್ಣದಾಗಿ ನೇರವಾಗಿ ಬಟ್ಟಿತಾಗಿ ಮಿಂಚುತ್ತಾ ನಾಲ್ಕುರೇಖೆಗಳಾಗಿ ಇರಲು ಅದು ಲದ್ದಿಗತ್ತವ್ಯಾಧಿಯಿಂದ ಇಪ್ಪತ್ತನೆಯ ವರ್ಷಕ್ಕೆ ಸಾಯುವದು ೫೬

ಕುದುರೆಗೆ ಆ ಮರ್ಯಾದೆಯ ಐದುರೇಖೆಗಳು ಪ್ರೋಥದಲ್ಲಿಯೂ ಅಂಡದಲ್ಲಿಯೂ ಇರಲು ಅದು ವಾತವೆಂಬ ಸಮುದ್ರದಲ್ಲಿ ಮುಳುಗಿ ಇಪ್ಪತ್ತೊಂದನೆಯ ವರ್ಷಕ್ಕೆ ಸಾವುದು ೫೭

[೫೮ ನೆಯ ಪದ್ಯಕ್ಕೆ ಟೀಕಿಲ್ಲ]

ಕುದುರೆಗೆ ಆ ಮರ್ಯಾದೆಯ ಕುರುಹು ಪ್ರೋಥರೇಖೆಗಳಾಗಿ ಇದ್ದರೆ ಅದು ಊರ್ಧ್ವರೇಖೆಯಾದರೆ ಇಪ್ಪತ್ತುಮೂರುವರುಷಕ್ಕೆ ಆನೆಯ ಕೊಂಬಿನ ಗಾಯದಿಂದ ಅಳಿವುದು ೫೯

ಕುದುರೆಯ ಮುಸುಡಿನಲ್ಲಿ ಮಾನೋಪಾದಿಯಲ್ಲಿ ಆವೆಯ ಮರ್ಯಾದೆಯ ರೇಖೆಗಳು ಇದ್ದರೆ ಇಪ್ಪತ್ತು ನಾಲ್ಕು ವರ್ಷಕ್ಕೆ ರಾಕ್ಷಸಿಯ ದೆಸೆಯಿಂದ ಸಾಯುವದು ೬೦

ಕುದುರೆಯ ಮೂಗಿನಲ್ಲಿ ತಾವರೆಯ ನೈದಿಲ ಹೂವಿನ ಮರ್ಯಾದೆಯ ರೇಖೆಗಳಿರಲು ಮುಖಪ್ರೋಣಿಯಿಂದ ಇಪ್ಪತ್ತೈದು ವರ್ಷಕ್ಕೆ ಸಾಯುವದು ೬೧

ಕುದುರೆಯ ಪ್ರೋಥರೇಖೆ ಪೇದಿಯ ಹಾಗೆ ಇದ್ದರೆ ಪತಿಗೆ ಅನಂತೈಶ್ವರ್ಯ ವಹುದು ಆ ಕುದುರೆಗೆ ರಸೋದಯದಿಂದ ಇಪ್ಪತ್ತಾರು ವರ್ಷಕ್ಕೆ ಸಾವುದು ೬೨

ಕುದುರೆಗೆ ಪ್ರೋಥರೇಖೆಯ ಮರ್ಯಾದೆಯ ರೇಖೆಯಿದ್ದರೆ ಅದನಾಳುವವನು ಅರಿಯ ಜೈಸುವನು ಆ ಕುದುರೆ ಹಾವಿನದೆಸೆಯಿಂದ ಇಪ್ಪತ್ತೇಳು ವರ್ಷಕ್ಕೆ ಸಾಯುವದು ೬೩

ಕುದುರೆಯ ಪ್ರೋಥರೇಖೆ ಬಲ್ಲಿನ ಹಾಗೆ ಹಡಗಿನಹಾಗೆ ಶಂಖದ ರೂಪದಲ್ಲಿ ರೇಖೆಗಳು ಇದ್ದರೆ ಅದರ ಪತಿ ಲಕ್ಷ್ಮಿಗೆ ಪತಿಯಹನು ಆ ಕುದುರೆ ಜ್ವರಸಂತಾಪದಿಂ ಇಪ್ಪತ್ತೆಂಟು ವರ್ಷಕ್ಕೆ ಸಾಯುವದು ೬೪

ಕುದುರೆಗೆ ಪ್ರೋಥರೇಖೆಗಳು ಧ್ರುವರೂಪಾಗಿ ಧ್ರುವವೇಷವಾಗಿ ಇದ್ದರೆ ಒಡೆಯಂಗೆ ಬಯಸಿದ ಸಿದ್ಧಿಯಕ್ಕುಂ ಆ ಕುದುರೆ ವ್ಯಾಧಿಯಿಂದ ಇಪ್ಪತ್ತೊಂಬತ್ತು ವರ್ಷಕ್ಕೆ ಸಾಯುವದು ೬೫

ಕುದುರೆಯ ಮುಸುಡಿನಲ್ಲಿ ಕಲ್ಪವೃಕ್ಷ ಕನ್ನಡಿ ಪ್ರದಕ್ಷಿಣ ಬಿದಿಗೆಯ ಚಂದ್ರ ರಂಗವಾಲಿ ಈ ಪ್ರಕಾರದ ರೇಖೆಗಳು ಇದ್ದರೆ ಸೌಭಾಗ್ಯವಹುದು. ಆ ಕುದುರೆಗೆ ಮೂವತ್ತುವರ್ಷಕ್ಕೆ ಮರಣ ೬೬

ಆ ಲಕ್ಷಣದ ಪ್ರೋಥರೇಖೆಯನಾಳುವರಿಗೆ ಧನವು ಧಾನ್ಯವು ಶತ್ರುಜಯವು ಪರಸ್ತ್ರೀಯರು ಮಕ್ಕಳು ಒಡಹುಟ್ಟಿದರು ಸಹಾ ಸಕಲ ಸಂಪದವನು ಅನುಭವಿಸುವರು ೬೭

ಕುದುರೆಯ ಪ್ರೋಥರೇಖೆಗಳು ಹರಿಯ ಚಕ್ರದ ಹಾಗೆ ರೇಖೆಗಳು ಇದ್ದರೆ ಮಹಾಲೇಸು ಆ ಕುದುರೆಯು ಮೂವತ್ತೊಂದು ವರ್ಷಕ್ಕೆ ಸಾವುದು ೬೮

ಆ ಲಕ್ಷಣದ ಕುದುರೆಯನಾಳುವ ಅರಸು ಹುಯ್ಯಲಲ್ಲಿ ಹಗೆಯ ಜೈಸಿ ರಾಜ್ಯವ ಸುಖದಲ್ಲಿ ಆಳುವನು ೬೯

ಕುದುರೆಯ ಪ್ರೋಥರೇಖೆ ಸೂರ್ಯನ ಹಾಗೆ ಅರ್ಧಚಂದ್ರನ ಹಾಗೆ ಇದ್ದರೆ ಅದನಾಳುವಾತಂ ರಿಪುವ ಜೈಸಿ ಸುಖದಲ್ಲಿ ಇಹನು ಆ ಕುದುರೆ ಮೂವತ್ತೆರಡು ವರ್ಷಕ್ಕೆ ಸಾಯುವದು ೭೦

ಪ್ರೋಥರೇಖೆಗಳು ಎಡೆವರಿಯದೆ ಮುರಿದು ಇರದೆ ಮಡಿದು ಇರದೆ ಊರ್ಧ್ವವಾಗಿ ಇದ್ದರೂ ನುಣ್ಪಾಗಿ ನೇರವಾಗಿ ಇದ್ದರೂ ಆಯುಷ್ಯವುಂಟು ಲೇಸು ೭೧

ಇದು ಆಯುರೇಖೆಯ ಪಂಚಮಾಧ್ಯಾಯ ೭೨

ಆರನೆಯ ಅಧ್ಯಾಯ

[೧ನೆಯ ಪದ್ಯಕ್ಕೆ ಟೀಕಿಲ್ಲ]

ಕುದುರೆಯು ಪೊಕ್ಕುಳಲ್ಲಿ ನಾಭಿಯಿಂದಲು ಹಲ್ಲುಗಳಿಂದಲು ನಾರುತ್ತಿರಲು ಅದು ಒಂದು ವರ್ಷವು ಬದುಕುವದು ೨

ಕುದುರೆಯು ವಾಡೆ ನಾಲಿಗೆ ಹಲ್ಲು ತುದಿ ಕಣ್ಣುಗಳು ಇವು ಎವೆಯು ಮುಚ್ಚಿ ದಿದ್ದರೆ ಎರಡುವರ್ಷಂ ಬದುಕುವದು ೩

ಕುದುರೆಗೆ ಬಾಗದಕೊರಳು ದಪ್ಪವಾದ ಮೊಣಕಾಲು ಹಲ್ಲು ಕಣ್ಣುಗಳು ನಾರುತ್ತ ಕೀಳುಗಣ್ಣಲಿ ಕೊಳೆನಾರುತ್ತ ಇದ್ದರೆ ಮೂರುವರ್ಷ ಬದುಕುವದು ೪

ಕುದುರೆಗೆ ತಾಳುಗೆ ಸಮವಾಗಿ ಇಲ್ಲದಡಂ ಗತ್ತವಂ ಬಹಳವಾಗಿ ಬಿಡುವಡಂ ಅಲ್ಪವಾಗಿ ಬಿಡುವಡಂ ನೊಸಲು ಸಣ್ಣನಾಗಿ ಬರುತಿಪ್ಪಡಂ ಅದು ನಾಲ್ಕುವರ್ಷಕ್ಕೆ ಸಾವುದು ೫

ಕುದುರೆಗೆ ಸಣ್ಣನಲ್ಲದೆ ಒಣಗಿ ಎದೆ ಇದ್ದಡಂ ಅಧಿಕವಾಗಿ ತೋರಿದಡಂ ಹಲ್ಲುಗಳು ಹತ್ತಾದಡಂ ಧ್ರುವೆಗಳು ಸ್ಥಾನಾರುಹವಲ್ಲದಿರ್ದಡಂ ಐದುವರ್ಷಕ್ಕೆ ಸಾಯುವದು ೬

ಹೀನ ಧ್ರುವನು ಮುಸುಳಿಯಲ್ಲಿ ಮೂರು ರೇಖೆಯನುಳ್ಳದಂ ಧ್ಯಾನಿಸುತ್ತ ಲಿಹುದಂ ತಲೆದೂಗುವದಂ ಅಂಡದಲ್ಲಿ ಸುಳಿಯುಳ್ಳುದುಂ ಆ ಕುದುರೆ ಆರುವರ್ಷಕ್ಕೆ ಸಾಯುವದು ೭

ಕುದುರೆ ಎದೆಯಲ್ಲಿ . ಸುಳಿಯಿದ್ದು ಬೆಕ್ಕಿನ ಕಣ್ಣಿನ ಹಾಗೆ ಕಣ್ಣು ನೀಳವಾಗಿ ಅಂಡವಿದ್ದ ಕುದುರೆ ಏಳುವರ್ಷಕ್ಕೆ ಸಾಯುವದು ೮

ಕೋಪದಿಂದ ಅಟ್ಟಿತಿಂಬಡಂ ಕಂಗಳು ಬಿಟ್ಟು ಅರಳಿಸುವಡಂ ಮುಚ್ಚು ತಿಪ್ಪಡಂ ಪೊಕ್ಕುಳ ನೆತ್ತಿ ತೊಡೆಗಳ ನೆತ್ತಿ ನಡುವೆ ಛಿದ್ರವಿಲ್ಲದೆ ಇರ್ದಡಂ ಎಂಟು ವರ್ಷಕ್ಕೆ ಸಾಯುವದು ೯

ಕುದುರೆಯ ಮೇಲಣ ತುಟಿಯು ಮೂಲ ಪ್ರಿಯವಾಗಿ ಇದ್ದರೆ ಕಂದದಲ್ಲಿ ಸುಳಿ ಇದ್ದರೆ ಅದು ಒಂಬತ್ತು ವರ್ಷಕ್ಕೆ ಸಾಯುವದು ೧೦

ಬಿಳಿದು ಕರಿದುಗೂಡಿದ ಕೊಳಗುಗಳಂ ಎವೆ ಮುಚ್ಚದ ಕಣ್ಣುಂ ವಿಭ್ರಾಂತವಾಗಿದ್ದ .ಮನಸ್ಸುಂ ಅಡಗಿಯಿದ್ದ ಗುದವಳಯದ ಕುದುರೆ ಹತ್ತುವರ್ಷಕ್ಕೆ ಸಾಯುವದು ೧೧

ಕಡುರೋಮದ ವಿಛ್ಛಾಯೆಯ ಕಡುಮುನಿಸಿನ ಶ್ರೀಘ್ರದನಡೆಯ ಕಾಲಜಡವಾದ ಕುದುರೆ ಹನ್ನೊಂದು ವರ್ಷಕ್ಕೆ ಸಾಯುವದು ೧೨

ಮುಖ ಹವಳವಾಗಿ ಇರ್ದು ಮೈಕೂದಲು ಹೊಳವುತ್ತ ಮುಂಗಾಲುಗಳು ಗಾತ್ರವಾಗಿ ಇದ್ದಡಂ ಕಿವಿಗಳು ಉದ್ದವಾಗಿ ಇದ್ದರೆ ಆ ಕುದುರೆ ಹನ್ನೆರಡು ವರ್ಷಕ್ಕೆ ಸಾಯುವದು ೧೩

ಕತ್ತೆಯ ಕಣ್ಣಿನ ಹಾಗೆ ಕಣ್ಣು ಮೃದುವಾದ ಮೈ ಖುರ ನಾಲಗೆ ತುಟಿಇವು ಅಲತಿಗೆಯ ರಸದ ಹಾಗೆ ಕಾಂತಿಯಾಗಿ ಇರೆ ಹದಿಮೂರುವರುಷಕ್ಕೆ ಸಾಯುವದು ೧೪

ಕಾಲು ದಾಡೆ ವಳೆಯ ಈ ಮೂರು ಸ್ಥಾನವು ದೊಡ್ಡದಾಗಿ ನಿರ್ಮಾಂಸವಾಗಿ ಬಾಗದ ಕಂದ ಮೂಗು ಖುರವು ಹಿತಸಿತವಾಗಿ ಇದ್ದರೆ ಹದಿನಾಲ್ಕು ವರ್ಷಕ್ಕೆ ಸಾವುದು ೧೫

ಪ್ರಜಾಪತಿಯುಂ ಖುರಮುಂ ದೊಡ್ಡವಾಗಿ ಕಾಲು ಕೊರಳು ಉದ್ದವಾಗಿ ದೆಸೆಯ ನೋಡುತ್ತಂ ಚಪಳಮುಳ್ಳ ಕುದುರೆ ಹದಿನೈದುವರ್ಷಕ್ಕೆ ಸಾವುದು ೧೬

ಆಯತವಾಗಿ ದೊಡ್ಡ ಶರೀರವಾಗಿ ಪೂರವಾರು ತೆರಪಾಗಿ ಹೊಟ್ಟೆ ತೆರಪಾಗಿ ಕಣ್ಣು ವೈಡೂರ್ಯದ ಹಾಗೆ ಇದ್ದರೆ ಆ ಕುದುರೆ ಹದಿನಾರುವರ್ಷಕ್ಕೆ ಸಾವುದು ೧೭

ಉದ್ದವಾಗಿಹ ಕೊರಳನಾಳವು ಅತಿಗಂಭೀರವಾಗಿ ದೀರ್ಘವಾಗಿ ಧ್ವನಿಯುಳ್ಳದು ಗೋಳಿಗೆಯ ಕಂಡಡೆ ಹರುಷವಹ ಕುದುರೆ ಹದಿನೇಳು ವರ್ಷಕೆ ಮರಣ ೧೮

ಖುರಗಳು ಸಣ್ಣನಾಗಿ ಹಲ್ಲುಗಳು ಕೋಮಲವಾಗಿ ವಜ್ರದ ಹಾಗೆ ಧವಳ ಕಾಂತಿಯಾಗಿ ಮೇಘದ ಹಾಗೆ ಗಂಭೀರಧ್ವನಿಯುಳ್ಳ ಕುದುರೆ ಹದಿನೆಂಟು ವರ್ಷಕೆ ಸಾವುದು ೧೯

ನೀಳವಾಗಿ ಪ್ರಜಾಪತಿಯನುಳ್ಳದು ಸಮವಾಗಿ ಆಯುತವಾದ ಶರೀರ ಹೊಟ್ಟೆ ನುಣ್ಪಾಗಿ ನಿರ್ಮಲವಾಗಿ ತೋರುವ ಕಾಂತಿಯುಳ್ಳ ಕುದುರೆ ಹತ್ತೊಂಬತ್ತು ವರ್ಷಕ್ಕೆ ಸಾವುದು ೨೦

ಕಿವಿಗಳು ಕಿರಿಯವಾಗಿ ಮೈನುಣ್ಪಾಗಿ ದನಿ ಹೆಚ್ಚಾಗಿ ಚಚ್ಚತ್ರದೊಡ್ಡಿತಾಗಿ ಒಪ್ಪುವ ರೂಪು ದೊಡ್ಡ ಹೊಟ್ಟೆಯಾದ ಕುದುರೆ ಇಪ್ಪತ್ತು ವರ್ಷಕ್ಕೆ ಸಾವುದು ೨೧

ಕಿವಿ ಮೂಗು ದೊಡ್ಡದಾಗಿ ಹೊಟ್ಟೆ ಪ್ರಜಾಪತಿ ಕಾಲು ಇವೆಲ್ಲವು ದೊಡ್ಡದಾಗಿ ಇದ್ದ ಕುದುರೆ ಇಪ್ಪತ್ತೆರಡು ವರುಷಕ್ಕೆ ಸಾವುದು ೨೨

ಮೂಗಿನಲ್ಲಿ ಎಂಟು ರೇಖೆಯನುಳ್ಳದು ಅಧಿಕಗುಣವನುಳ್ಳದು ತೇಜವುಳ್ಳದು ಗಂಭೀರಸ್ವರನುಳ್ಳದು ಕುದುರೆ ಇಪ್ಪತ್ತು ಮೂರುವರುಷಕ್ಕೆ ಸಾವುದು ೨೩

ನವದ್ವಾರಗಳು ದೊಡ್ಡದಾಗಿ ಪ್ರಜಾಪತಿಯು ಚಿಕ್ಕದಾಗಿ ಹಲ್ಲು ಸಣ್ಣನಾಗಿ ಪಿಂಗಳಾಕ್ಷನಾಡೆ ಆಕುದುರೆ ಇಪ್ಪತ್ತುನಾಲ್ಕು ವರ್ಷಕ್ಕೆ ಸಾವುದು ೨೪

ಗುಣವಂತನುಂ ಮಹಾಸತ್ವವುಳ್ಳದುಂ ಹಲ್ಲು ಸತ್ವ ರಕ್ತವರ್ಣವಾದ ಕುದುರೆ ಇಪ್ಪತ್ತೈದುವರ್ಷಕ್ಕೆ ಸಾವುದು ೨೫

ನೊಸಲಸುಳಿ ಎಡಕ್ಕೆ ಒತ್ತಿಯಿದ್ದು ಶಿರಸ್ಸು ಉನ್ನತವಾಗಿ ಇರಲು ಇಪ್ಪತ್ತಾರು ವರುಷಕ್ಕೆ ಸಾವುದು ೨೬

ಕುದುರೆಯ ಗುದ ನೀಳವಾಗಿ ಮುಸುಡು ಅದ್ದಿ ನೀರುಕುಡಿದರೆ ಅದು ಲಕ್ಷಣವುಂಟು ಇಪ್ಪತ್ತೇಳು ವರ್ಷಕ್ಕೆ ಸಾವುದು ೨೭

ಹರುಷದಿಂದ ಸುಳಿವುದುಂ ಕಾಲುನೀಳವಾಗಿ ಇಹುದುಂ ಕಿವಿಯನಾಳ ತೆರವಾಗಿ ಇದ್ದ ಕುದರೆ ಇಪ್ಪತ್ತೆಂಟುವರ್ಷ ಬದುಕುವುದು ೨೮

ಕಿವಿಗಳೆರಡು ಸಿಲಿಸಿದ ಹಾಗೆ ಇದ್ದು ಅಂಡಗಳು ನೀಳವಾಗಿ ಇದ್ದು ರೂಕ್ಷಗಳು ನೀಳವಾಗಿ ಇದ್ದರೆ ಆ ಕುದುರೆ ಇಪ್ಪತ್ತೊಂಬತ್ತು ವರ್ಷ ಬದುಕುವುದು ೨೯

ಬೆನ್ನು ಕಿರಿದಾಗಿ ಪ್ರಜಾಪತಿಯು ಕಿರಿದಾಗಿ ಇದ್ದು ಕಿವಿ ಶಾಮವರ್ಣವಾಗಿ ಇದ್ದು ಧ್ವನಿಯು ಮೂಗಿನ ಹೊಳ್ಳೆಯು ಕಿರಿದಾಗಿಇದ್ದರೆ ಮೂವತ್ತು ವರ್ಷಬದುಕುವದು ೩೦

ಕುದುರೆಯು ಕೊರಳಲ್ಲಿ ಗಂಗೆದೊಗಲಾಗಿ ಇದ್ದರೆ ಅದಂ ಗಂಗೆವಾರಿಯೆಂಬರು ಅದು ಮುವತ್ತೊಂದು ವರ್ಷಂ ಬದುಕುವದು ೩೧

ಧ್ವನಿಯೋಪಾದಿಯಲ್ಲಿಯಾದರೆ ಅದು ಮೂವತ್ತೆರಡು ವರ್ಷ ಬಾಳುವದು ೩೨

ಕುದುರೆಯು ಶರೀರದ ಲಕ್ಷಣದಿಂದ ಮೂವತ್ತೆರಡು ವರ್ಷದ ಆಯುಷ್ಯವನು ಹೇಳಿದೆವು ೩೩

ಕುದುರೆಯು ಕಂಠಸ್ಥಾನವನು ಪೂರ್ವಾಚಾರ್ಯ ಮತದಿಂದ ಹೇಳಿದೆನು ೩೪

ನೆಲದಲ್ಲಿ ತಲೆಯು ಕಾಣದಿದ್ದಡಂ ನೆಳಲಲ್ಲಿ ರವುದ್ರಂಗಳಾಗಿ ತೋರುವಡಂ ಇದ್ದ ಹಾಗೆ ಇದ್ದು ಬಡವಾದಡಂ ರೂಪುಗೆಟ್ಟು ಬರುತ್ತ ಇದ್ದಡಂ ಅಳಿವುದಕ್ಕೆ ಕುರುಹು ೩೫

ಶೀಲಾಚಾರವು ಅಸತ್ವವುವಾದಡಂ ಲದ್ದಿಯನಿಕ್ಕದಿದ್ದಡಂ ಮೇಯದಿರ್ದಡಂ ಆ ಕುದುರೆ ಬದುಕಲರಿಯದು ೩೬

ಮೈಯೆಲ್ಲವು ಬಾತು ಕೂದಲು ಶಲತುಕೊಂಡು ಮಲವನುಗುತು ಗತವನು ಝಲ್ಲಿಸಿದರೆ ನಾರಲು ಆ ಕುದುರೆ ಬದುಕದು ೩೭

ಬಿದ್ದು ಮುಗ್ಗುವಡಂ ಕಣ್ಣುಗೆಡುವಡಂ ಕಣ್ಣನೀರು ಸುರಿವಡಂ ಹಕ್ಕುಗಟ್ಟುವಡಂ ಆ ಕುದುರೆ ಬದುಕದು ೩೮

ಅಂಡ ಬತ್ತಿದಡಂ ಮೈ ಕಟ್ಟಿಗೆಯು ಹಾಗೆ ಕಠಿಣವಾಗಿ ಒಣಗಿದಡಂ ಮೈ ಕಣ್ಣು ಬತ್ತಿ ಕರಿದಾಗಿ ಇದ್ದಡಂ ಆ ಕುದುರೆ ಬದುಕಲರಿಯದು ೩೯

ಬಹಳಾಹಾರವ ಕೊಂಬ ಕುದುರೆ ಅಲ್ಪಾಹಾರವ ಕೊಂಡಡಂ ಅಲ್ಪಾಹಾರವ ಕೊಂಬ ಕುದುರೆ ಬಹಳ ಆಹಾರವ ಕೊಂಡಡಂ ಮತಿ ವಿಹ್ವಲವಾದಡಂ ಆ ಕುದುರೆ ಬದುಕಲರಿಯದು ೪೦

ಕುದುರೆಯು ಮೈ ಮರುಗಳಾದರು ನೊಣಗಳು ಮುತ್ತುವಡಂ ಸ್ವಸ್ಥವಾಗಿ ಇದ್ದಡಂ ಆ ಪ್ರಕಾರವಾದಡೆ ಆ ಕುದುರೆ ಒಂದು ತಿಂಗಳಿಗೆ ಸಾವುದು ೪೧

ತೋರವಾಗಿದ್ದ ಮೈ ಬತ್ತುವಡಂ ಎರಡು ಕಣ್ಣಿನಲ್ಲು ನೀರು ಸುರಿವಡಂ ಇಂದ್ರಿಯಂಗಳು ವಿಪರೀತವಾದಡಂ ಕಪ್ಪಾದಡಂ ಆ ಕುದುರೆ ಬದುಕದು ೪೨

ನೊಸಲಲ್ಲಿ ಬಾತು ಆ ಬಾವು ತಲೆಯೆಲ್ಲವು ಬಾತಡಂ ಗುದದಲ್ಲಿ ಬಾತು ಬಾವು ಬಾಲವೆಲ್ಲ ಬಾತರೆ ಆ ಕುದುರೆ ಬದುಕದು ೪೩

ಬಹಳ ಹುಲ್ಲ ತಿಂಬುದುಂ ಬಾಯಲ್ಲಿ ನೊರೆವೆರಸು ಲೋಳೆ ಸುರಿವದು ದುಃಖ ಇಹುದುದಂ ಆ ಕುದುರೆ ಬದುಕಲರಿಯದು ೪೪

ಕಣ್ಣಮುಚ್ಚಿ ಇರುವುದು ಖಾಣವನೊಲ್ಲದು ಬಳಲಿಕೆಯಾಗಿ ಇಹುದುಂ ಮೇಯದು ಈ ಪ್ರಕಾರದಲ್ಲಿದ್ದ ಕುದುರೆ ಬದುಕದು ೪೫

ನಳಿಯದ ಕೂದಲು ತೊಡೆದ ಹಾಗೆ ಇರಲು ಕೊಕಟೆಯ ಹಿಡಿದು ತೆಗೆದರೆ ಕೈಯಲ್ಲೂ ಕಿತ್ತು ಬಂದಡಂ ಆ ಕುದುರೆ ಏಳು ದಿನಕ್ಕೆ ಸಾವುದು ೪೬

ಕುದುರೆಯ ನಾಲಿಗೆ ವಿವರ್ಣವಾದಡಂ ತೆರವುಗೆಟ್ಟಡಂ ಕಠಿಣವಾದಡಂ ಕೀಲಿಸಿದ ಹಾಗೆಯಾದಡಂ ಬದುಕದು ೪೭

ಕುದುರೆ ಹಲುಮಣಿಸುವ ಧ್ವನಿ ದುಂದುಭಿಯ ಹಾಗೆ ಗೂಳಿಯ ಹಾಗೆ ಪುಣ್ಯಾಹತೀಳ ನೀರೊಳಗೆ ಕುದುರೆ ನೆಳಲಕಾಣದಿರ್ದಡಂ ಮುಳುಗಿದಡೆ ನೀರಹತ್ತದಿದ್ದಡಂ ಅದು ಹದಿನೈದುದಿನಕೆ ಸಾವುದು ೪೮

ಸ್ವಸ್ಥಾರಿಷ್ಟಗಳನು ಕೆಲವು ಹೇಳಿದೆನು ಇನ್ನು ಮುಂದೆ ವಿಸ್ತಾರವಾಗಿ ಹೇಳಿಹೆನು ೪೯

ಕುದುರೆಯ ಕೊರಳುಸುಗಿ ಬಾಯೊಳಗೆ ಲೋಳೆ ಸುರಿಯುತ್ತ ಧಾರೆಗಳು ಉಬ್ಬಿದರೆ ತಿಂಗಳು ಅರೆಗೆ ಸಾವುದು ೫೦

ಮೈ ಬಾತು ಕೂದಲುಗಳೆಲ್ಲ ಎದ್ದು ಬೆವರುತ್ತ ಕಾಗೆಯ ಗೂಡಿನಹಾಗೆ ಹಾರುತಂ ಇರಲು ಆಕುದುರೆ ಬದುಕದು ೫೧

ನಳಿಯದ ಕೂದಲನು ಬಿದಿರದು ಬಾಲವ ಬೀಸದು ಕಾಲನೆತ್ತದು ಅಳಿ ಮೇವಂ ಮೇವುದು ಹಲ್ಲು ಕಚ್ಚುವದು ಈ ಗುಣಗಳನುಳ್ಳ ಕುದುರೆ ಅಲ್ಪಾಯುಷ್ಯನೆಂದು ಬಿಡುವದು ೫೨

ಬಾಲವ ಬೀಸದು ಕಾಲನಾಡಿಸುವದು ಆಹಾರಕ್ಕೆ ಚಿಂತಿಸದು ಕಿವಿಗಳು ಕೀಲಿಸಿದ ಹಾಗೆ ಇಹುದು ನಡುಗುವದು ಈ ಪ್ರಕಾರಗಳಾಗೆ ಬದುಕದು ೫೩

ಬಾಯೊಳು ಬೆಳುನೊರೆ ಸುರಿಯುತ್ತ ನಾರುತ್ತ ಗತ್ತದಿ ಪ್ರಜಾಪತಿಗಳು ಇವು ರಕ್ತವರ್ಣವಾಗಿ ಇರಲು ಆ ಕದುರೆ ಅಲ್ಪಾಯು ಬೇಗ ಬಿಡುವುದು ೫೪

ಮಲಗಿದಡೆ ಕಟಿವಡೆದಡಂ ಕೆಡೆವಡಂ ಅಳಿಮೇವ ಮೇವಡಂ ಮೆಲುಕಿಲ್ಲದಡಂ ಬಯಿದು ಹೊಯಿದಡೆ ಅರಿಯದಡಂ ಬದುಕದು ೫೫

ಇದ್ದಹಾಗೆ ಬಾಧೆಬಡುವಡಂ ಸ್ವಸ್ಥಾನದಿಂದ ಮರವಟ್ಟಡಂ ಆ ಕುದುರೆ ಬದುಕಲರಿಯದು ೫೬

ಬಹಳವಾಗಿ ನೀರು ಕುಡಿಯುತ್ತ ನೈಜಡವಾಗಿ ತಲೆಯನೆತ್ತದೆ ಬಾಯು ನೀರೋಡಿ ಬಂದರೆ ಆಕುದುರೆ ಬದುಕಲರಿಯದು ೫೭

ಹೊಟ್ಟೆಯು ಮೊರೆದು ಉಚ್ಛ್ವಸಡಂ ಆ ಸ್ಥಾನದಲ್ಲಿ ವಾಯು ನಡೆಯುತ್ತ ಹೊಟ್ಟೆ ಉಬ್ಬರಿಸುತ್ತ ಇದ್ದಡಂ ಕಡೆಗಣ್ಣಿನಲ್ಲಿ ನೀರು ಸುರಿವುತ್ತ ಇದ್ದಡಂ ಆ ಕುದುರೆ ಬದುಕದು ೫೮

ಹೊಟ್ಟೆ ಮೇಲಕ್ಕೆ ಏರೆ ಹಲ್ಲ ಕಚ್ಚುತ್ತ ಕಾಲಲ್ಲಿ ನೆಲಸ ಹೊಯ್ವುತ ನಿಸ್ಸತ್ವವಾಗಿ ನೆಲದೊಳ್ ಬೀಳುತ್ತ ಅಳಿಮೇವಂ ಮೇವುತ್ತ ಇರಲು ಬದುಕದು ೫೯

ಮೂಗಿನಲ್ಲಿಯು ಗಳಗಳ ಎನ್ನುತ್ತ ನೆತ್ತರು ಸುರಿಯುತ್ತಯಿರೆ ಪ್ರಜಾಪತಿಯಲ್ಲಿ ಅಳ್ಳೆಗಳ ಹೊಯ್ವುತ್ತಲಿರ್ದಡಂ ಆ ಕುದುರೆ ಬೇಗ ಸಾವುದು ೬೦

ಕಣ್ಣ ಅರಿ ಕೆಂಚಗಿರೆ ಎವೆಗಳು ದಾಡೆಯೂ ಗೂಢವು ಮುಚ್ಚಿಕೊಂಡು ಕಣ್ಣ ಮುಚ್ಚಿ ಆಲಿ ಬೀಳಲು ಆ ಕುದುರೆ ಬದುಕದು ೬೧

ಅರುಣವರ್ಣದ ಕಣ್ಣುಗಳು ಬಿಳಿಯವಾದಡಂ ಅಲ್ಲವೆ ಬಿಳಿದಾಗಿಯಿದ್ದ ಕಣ್ಣು ಕರಿದಾದಡಂ ಆ ಕುದುರೆ ಮರಣ ತಪ್ಪದು ೬೨

ಕುದುರೆಯು ಕಣ್ಣಿಂದ ನೆತ್ತರ ಹನಿ ಬೀಳುತ್ತಂ ಆನೆಯ ಕಣ್ಣಿನ ಹಾಗೆ ಮುಚ್ಚಿ ಧ್ಯಾನಿಸುತ್ತಂ ಇರಲು ಅದಕ್ಕೆ ಮರಣವೆಂದರಿವುದು ೬೩

ಮೈಯ ಬಿದಿರದು ಒಂದು ಇಷ್ಟು ಹೊರಳದು ಅಂಡವಣಗುವುದು ಕಾಲ ಕೊಂಡಿಹುದು ಮೇಯದು ಬಾಯಬಿಡುವುದು ಈ ಮರಿಯಾದೆಯಲ್ಲಿ ಇದ್ದ ಕುದುರೆ ಬದುಕದು ೬೪

ಅಡಿಗಡಿಗೆ ಬೀಳುವುದುಂ ಎಡದ ಕೆಲದಲ್ಲಿ ಕಂದಿ ಕುಂದಿಯಿಹುದು ಮುಖವು ತುಟಿಯು ಕೆಡುವುದುಂ ಮುಂದಲ ಹುಲ್ಲನು ಮೇಯದು ಈ ಗುಣವುಳ್ಳ ಕುದುರೆ ಬದುಕದು ೧೫

ಕುದುರೆಯಕಿವಿ ರಕ್ತ ಲೋಹಿಸರದ ರಸದ ಹಾಗೆಯಿರೆ ಕಾಲು ನೀರಿನ ಹಾಗೆ ಬಿಳಿದು ಕೂಡಿ ದೇಹ ಕೆಂಪಾಗಿಯಿದ್ದರೆ ಆ ಕುದುರೆಯಿಪ್ಪತ್ತುವರುಷದಾಯುಷ್ಯವೆಂದರಿವುದು ೧೬

ಕಿವಿಯ ರಕ್ತ ಅರನೇರಿಲ ಹಣ್ಣಿನರಸದ ಹಾಗೆ ಕರಿದಾಗಿ ಇದ್ದರೆ ಹದಿನಾರು ವರುಷದಾಯುಷ್ಯವೆಂದರಿವುದು ೧೭

ಕಿವಿಯನೊತ್ತಿದರೆ ನೀಲವರ್ಣವಾಗಿ ಒಣಗಿದ ಹಾಗೆಯಿದ್ದರೆ ಆ ಕುದುರೆಗೆ ಎಂಟುವರ್ಷದಾಯುಷ್ಯವೆಂದರಿವುದು ಕಿವಿಯನೊತ್ತಿದರೆ ಬಿಸಿನೆತ್ತರು ಕಾಮುರ್ಗಿಲ ಬಣ್ಣದಂತೆ ನೀಲವರ್ಣವಾಗಿಯು ಒಣಗಿ ಇದ್ದರೆ ಆ ಕುದುರೆಗೆ ನಾಲ್ಕುವರುಷದ ಆಯುಷ್ಯವೆಂದರಿವುದು ೧೮

ದಾಸಾಳದ ಹೂವಿನ ಹಾಗೆ ಕುಂಕುಮಕೇಸರದ ಹಾಗೆ ಬೇದ ಹಣ್ಣಿನ ಹಾಗೆ ಕಿವಿಯನೊತ್ತಿದರೆ ರಕ್ತವಿದ್ದರೆ ಆಕುದುರೆ ಹದಿನೆಂಟುವರ್ಷ ಬದುಕುವದು ೧೯

ಕಿವಿಯನೊತ್ತಿದರೆ ತುದಿಯಲ್ಲಿ ನೆತ್ತರು ಮಸಿಯಹಾಗೆಯು ಉಪ್ಪುನೀರಿನ ಹಾಗೆಯಾದರು ಏನುಇಲ್ಲದೆ ಬರತು ಇದ್ದರು ಹಗಲುಇರಳಿನೊಳಗೆ ಸಾಹುದು ೨೦

ಕಣ್ಣುನೆಟ್ಟ ಈ ಎರಡರ ಸ್ಥಾನವನ್ನು ಪರಿಮಳವನು ಹಲ್ಲಿನ ಅಧಿಕ ಹೀನವನು ಛಾಯೆಯನು ಹೀನವಾದರೆ ಅಲ್ಪಾಯುಷ್ಯವೆಂದರಿವುದು ೨೧

ಮೂಗುದಾಡೆ ಅಲ್ಪವಾಗಿ ಮೂತ್ರದುರ್ಗಂಧವಾಗಿ ನಾರುತ್ತ ವಿಷಮಾಂಗನಾಗಿ ಕಲಿತನಾಗಿ ಕೋಪಿಯಾಗಿ ವಿಷಯಾತುರನಾಗಿ ಇದ್ದರೆ ಆ ಕುದುರೆ ಅಲ್ಪಾಯುಷ್ಯನೆಂದರಿವುದು ೨೨

ಅಂಗಾಹಕ್ಕೆ ಸಮಾನವಾದ ಬಾಲ ಹಲ್ಲುಗಳು ಒಣಗಿದಹಾಗೆಇದ್ದರೂ ನಳಿದೂಡಿದರೂ ಖುರವು ಗುಡ್ಡನಾಗಿ ಇದ್ದರೆ ಆ ಕುದುರೆಗೆ ಅಲ್ಪಾಯುಷ್ಯವೆಂದರಿವುದು ೨೩

ಕುದುರೆಗಳು ಹುಟ್ಟುವ ಭೂಮಿ ಐವತ್ತುನಾಲ್ಕು ದೇಶ ನರ್ಮದೆಯಿಂದ ಬಡಗಲು ಹುಟ್ಟಿದವು ಕುಲವು ಬಲವು ತೇಜವು ಸ್ವರೂಪವು ವೇಗವು ಸಂಪೂರ್ಣವಾಗಿ ಉಂಟು ೭೪

ಕಾಂಭೋಜ ಬಾಹ್ಲಿಕ ಸಿಂಧುದೇಶ ಘಟ್ಟ ಕೈಕೆಯ ಲಂಕಾದೇಶದ ಕುದುರೆಯು ಆ ದೇಶದ ಹೆಸರಲ್ಲಿ ಕರೆವುದು ೭೫

ಕಾಂಭೋಜ ಜಾಳಂದರ ಮಾಳವ ಕೊಂಗ ಕೋಸಲವರಾಂ ಭೋಜ ಬರ್ಬರ ಕೇಕೆ ದುರಾಭಾಸಿ ಹಾಟಕ ಮಾಗಧ ಕಳಿಂಗ ಕೇರಳ ಸಿಂಧು ಗೋರಕಾ ಈ ದೇಶದ ಕುದುರೆಗಳು ದೊಡ್ಡಿತು ಸತ್ವವುಳ್ಳವು ೭೬

ವಾಯಕ ಸಂಚಕಾ ಜನೆಯಕಾ ನಾಳಿ ವೀರ ಸಮುನಿಯಾಯಕ ಈ ಹೆಸರಿಂದ ಐವತ್ತುನಾಲ್ಕುದೇಶದ ಕುದುರೆಗಳ ಹೆಸರು ೭೭

ನರ್ಮದೆಯಿಂದ ತೆಂಕಲು ತೊಂಬತ್ತುಆರುಗಾವುದ ಭೂಮಿಯಲ್ಲಿ ಹುಟ್ಟಿದ ಕುದುರೆಗಳು ಕನಿಷ್ಟ ತೇಜವಿಲ್ಲ ಕುಲ ಬೇಗ ಸತ್ವ ರೂಪು ಏನು ಇಲ್ಲ ೭೮

ಬ್ರಾಹ್ಮಣನಾದಿಯಾಗಿ ನಾಲ್ಕು ಜಾತಿಯ ಹೇಳಿಹೆನು ಬಿಳಿದು ಬ್ರಾಹ್ಮಣನು ಅರಿಸಿನವರ್ಣ ಕ್ಷತ್ರಿಯನು ಕೆಂಪು ವೈಶ್ಯನು ಕಪ್ಪು ಶೂದ್ರನುಯೆಂದರಿವುದು ೭೯

ಆಯತವು ದೊಡ್ಡಿಹ ಕಾಯವು ತೇಜವು ಲಘುವು ಶುಚಿಯು ಶೂರನೂ ಗುಡುಗಿನ ಧ್ವನಿಯನುಳ್ಳದು ಕಾಂತಿಯುಳ್ಳದು ಅಭಿಮಾನಿಯು ಈ ಗುಣಂಗಳನುಳ್ಳ ಕುದುರೆಯು ಸತ್ಕುಲಜನು ಪಟ್ಟಕ್ಕೆ ಯೋಗ್ಯವುಳ್ಳದು ೮೦

ಆಗರವೆಂದುಮಿಪ್ಪತ್ತಕ್ಕೆ ಐದು ಒಂದೊಂದಕ್ಕೆ ಐದು ತೆರ ೮೧

ಅತಿವೇಗ ಅತಿಮೃದು ಶುಚನಿ ವೆಸನಿಯಲ್ಲ ನಿಯತವುಳ್ಳದು ಸ್ವೈರಣೆ ಶಾಂತ ಪ್ರಮಾಣ ದೇಹವನುಳ್ಳದು ಇದು ಜೈಸುವದು. ಆಹಾರಶಕ್ತಿಯನುಳ್ಳದು ಈ ಗುಣಂಗಳನುಳ್ಳ ಕುದುರೆ ಉತ್ತಮವು ೮೨

ಕ್ರೂರನು ಕಾಮಿ ಅಶೌಚಿ ವಿಕಾರಿ ಕೋಪಿ ಹೆಚ್ಚು ಕುಂದಿನ ಶರೀರವನುಳ್ಳದು ವಾರುಣಗಂಧನು ಚೋರನು ಪರಾಕ್ರಮವುಳ್ಳ ಕುದುರೆ ೮೩

ವಾತ ಪೈತ್ಯದ ವಿವರವನ್ನು ಹೇಳಿಹೆನು ೮೪

ಕುದುರೆ ಗರ್ಭ ವರುಷಕಾಲ ಶರತ್ಕಾಲ ಈ ನಾಲ್ಕು ತಿಂಗಳಲ್ಲಿಯಾದರೆ ವಾತ ದೇಹಿಯಾಗುವವು ಹೇಮಂತ ಶಿಶಿರಋತುವಿಲಿ ಗರ್ಭವಾದರೆ ಪೈತ್ಯದೇಹಿಯಕ್ಕು ವಸಂತಋತು ಗ್ರೀಷ್ಮಋತು ಈ ನಾಲ್ಕು ತಿಂಗಳು ಗರ್ಭನಿಂತರೆ ಶ್ಲೇಷ್ಮ ಪ್ರಕೃತಿಯಾಗಿ ಮರಿ ಹುಟ್ಟುವದು ೮೫

ಶ್ರಾವಣ ಭಾದ್ರಪದ ಆಶ್ವೀಜ ಕಾರ್ತಿಕ ಈ ನಾಲ್ಕು ತಿಂಗಳಲ್ಲಿ ಗರ್ಭ ವಾತ ಮಾರ್ಗಶಿರ ಪುಷ್ಯ ಮಾಘ ಫಾಲ್ಗುಣ ಈ ನಾಲ್ಕು ತಿಂಗಳ ಗರ್ಭ ಪೈತ್ಯ ಚೈತ್ರ ವೈಶಾಖ ಜ್ಯೇಷ್ಠ ಆಷಾಢ ಈ ನಾಲ್ಕು ತಿಂಗಳ ಗರ್ಭ ಶ್ಲೇಷ್ಮಪ್ರಕೃತಿಯಾಗಿ ಮರಿಗಳು ಹುಟ್ಟುವವು ೮೬

ತಾಯಿತಂದೆಗಳು ಬೇರೆ ಪ್ರಕೃತಿ ಇದ್ದುದರಿಂ ಋತುಗಳು ಎರಡು ಕೂಡಿದು ರಿಂದಲು ಆಹಾರವೆರಡು ಬಗೆಯಾದ್ದರಿಂದಲು ಕುದುರೆ ಎರಡೆರಡು ಪ್ರಕೃತಿಯಾಗಿ ಹುಟ್ಟುವವು ೮೭

ಭೀತನು ಬಲಹೀನನು ಚಲಚಿತ್ತನು ಬಡವಾಗಿ ಇಹದು ಸುಖಿಯಲ್ಲದು ಉಪ್ಪು ಹುಳಿಯು ಮೇಲೆ ಪ್ರಿಯವುಳ್ಳದು ಈ ಗುಣಂಗಳ ಕುದುರೆ ವಾತಪ್ರಕೃತಿ ಯೆಂದರಿವುದು ೮೮

ಸೀರು ನೀರ ಪಟ್ಟಿತಾದ ಆಹಾರಗಳು ಖಾರ ಕಹಿ ರಸಾಹಾರಗಳ ಕೊಂಬದು ಈ ಗುಣವನುಳ್ಳ ಕುದುರೆಯಂ ಶ್ಲೇಷ್ಮ ಪ್ರಕೃತಿಯೆಂದರಿವುದು ೮೯

ಪೈಯು ಕೂದಲು ಒತ್ತಲದೆ ಸೂಕ್ಷ್ಮವಾಗಿ ಇಹುದು ಹಗಲು ಕಿಚ್ಚು ಇರುಳು ದೀಪನಾದರೆ ಆ ಬೆಳಕಿನಲ್ಲಿ ಹುಲ್ಲ ಬಹಳವ ಮೇವುದು ಅದು ಪರಿಶಿಖಾಂಗವೆಂಬರು ೯೦

ಕಲಿ ಖಾರ ಕಹಿಗೆ ಪ್ರಿಯ ಸತ್ವವುಳ್ಳದು ಅಲ್ಪಾಹಾರಿ ಮಂದಗಮನನು ಕಾಂತಿ ಯುಳ್ಳದು ಸೈರಣೆಯುಳ್ಳದು ಬಲಸ್ಥಿರನು ಈ ಗುಣದ ಕುದುರೆ ಶ್ಲೇಷ್ಮಪ್ರಕೃತಿ ಎಂದು ಅರಿವುದು ೯೧

ಸಸ್ನಿಗ ಅಮ್ಮದು ಗಾಳಿಯನೆಣಿಸದು ಸೀಮೇಲೆ ಪ್ರಿಯವನುಳ್ಳದು ಷಡುರಸ ಪ್ರೀತನು ಅದು ಸಮಪ್ರಕೃತಿಯ ಕುದುರೆ ೯೨

ವಾತಕ್ಕೆ ಕರಿನಹುದು ಅರುಣವರ್ಣವು ಬಿಳಿದು ಶ್ಲೇಷ್ಮಕ್ಕೆ ಅರಿಸಿನ ವರ್ಣವು ಕೆಂಪು ಪೈಯಿತ್ಯ ಇವು ಎಲ್ಲಾವರ್ಣಂಗಳಿಂದಲು ದೋಷ ಪ್ರಕೃತಿಯೆಂದರಿವುದು ೯೩

ಐಶ್ವರ್ಯವುಳ್ಳದು ಮತಿಯನುಳ್ಳದು ಚಿರಾಯುವನುಳ್ಳದು ಮನೋಹರನು ಸತ್ವವುಳ್ಳದು ಬಾಯಲ್ಲಿ ಮೃದುವನುಳ್ಳದು ಈ ಗುಣವನುಳ್ಳ ಕುದುರೆ ಸತ್ವಗುಣವನುಳ್ಳದು ೯೪

ಅತಿ ಕೋಪಿ ದುಷ್ಟಿ ಅತಿ ಬಡವು ಅಲ್ಪ ಆಯು ಚಪಲ ಈ ಗುಣಂಗಳನುಳ್ಳದು ರಾಜಸಗುಣದ ಕುದುರೆ ೯೫

ಮತಿಹೀನನುಮಾಲಸ್ಯನು ಅತಿ ನಿದ್ರೆಯನುಳ್ಳದು ವ್ಯಾಧಿಸ್ಥನು ಈ ಗುಣವನುಳ್ಳ ಕುದುರೆ ತಮೋಗುಣವೆಂದರಿವುದು ೯೬

ಆಯುಷ್ಯ ದೇಶ ಪ್ರಕೃತಿಯಂ ಗುಣಂಗಳನು ಆರನೆಯ ಅಧ್ಯಾಯದಲ್ಲಿ ಹೇಳಿಹೆನು ೯೭

ಏಳನೆಯ ಅಧ್ಯಾಯ

ಪೋಷಣವಿಧಿಯ ಕಾಲವನು ಹೇಳಿಹೆನು ೧

ವಾತ ಪಿತ್ತ ಶ್ಲೇಷ್ಮಹರವಾದ ಸಪ್ತಧಾತು ಪಂಚೇಂದ್ರಿಯಬಲವಹಂಥ ಆಹಾರ ಕಾಲವನು ಹೇಳಿಹೆನು ೨

ಬಲಕ್ಷೀಣಂಗೆ ವೃದ್ಧಗೆ ಮರಿಗೆ ಕ್ಷೀಣೇಂದ್ರಿಯಂಗೆ ದೂರ ನಡೆದು ಬಂದುದಕೆ ಇವೆಲ್ಲಕ್ಕು ಕಾಸಿದ ನೀರು ಒಳಿತು ೩

ಜ್ವರಉಳ್ಳವಕ್ಕೆ ಗರ್ಭಿಣಿಗೆ ಅತಿಸತ್ವಗೆಟ್ಟದಕ್ಕೆ ವ್ಯಾಧಿಯುಳ್ಳದಕ್ಕೆ ಇವೆಲ್ಲಕ್ಕು ಹಾಲಪಾನವ ಕೊಡಲಾಗದು ೪

[೫ನೆಯ ಪದ್ಯಕ್ಕೆ ಟೀಕು ಇಲ್ಲ]

ವರುಷಾಕಾಲ ಶರತ್ಕಾಲಕ್ಕೆ ಗಾಳಿಇಲ್ಲದೆ ಬೆಚ್ಚನೆಯಹ ಮನೆಯಲ್ಲಿ ಕುದುರೆಗಳನು ಇರಿಸುವದು ಗ್ರೀಷ್ಮಕಾಲಕ್ಕೆ ಚಪ್ಪರಗಳ ನೆಳಲಲ್ಲಿಇರಿಸುವದು ೬

ಕಡುಬಿಸಿಲಲ್ಲಿ ಕಡುಮಳೆಗಳಲ್ಲಿ ಕಡುಗಾಳಿಯಲ್ಲಿ ಕುದುರೆಗಳನಿರಿಸಿದರೆ ಅದರಿಂದ ವ್ಯಾಧಿ ಹುಟ್ಟುವದು ಅವಾಗಿ ಕಾಲಗಳನರಿತು ಒಳ್ಳೆಯಸ್ಥಳಗಳಲ್ಲಿ ಕುದುರೆಯನಿರಿಸುವದು ೭

ಕುದುರೆಯ ಚರಣೆಯನು ಅದರ ಉರದುದ್ದವಾಗಿ ಒತ್ತೊಳು ನೀಳದಲಿ ಎರಡುಕೆಲದಲ್ಲಿಯೂ ಮುಂಡಿಗೆಗಳ ಶಿರದುದ್ದಕ್ಕೆ ನೆಟ್ಟು ಲಾಯವನು ಮಾಡುವದು ೮

ಕುದುರೆಯನು ಲಾಯದಿಂದ ತೆಗದು ಖುರಪಸೋದಿಸಿ ಸಮನೆಲದಲ್ಲಿ ಹೊರಳಿಸಿ ನಿಲಿಸಿ ಮೈಯನುಜ್ಜುವದು ದಿನಂಪ್ರತಿ ೯

ಕುದುರೆಯನು ಶಾಸ್ತ್ರಮಾರ್ಗದಲ್ಲಿ ಸಾಕಿ ಏರುವಪುಣ್ಯಪುರುಷರಿಗೆ ಐದು ಪ್ರಕಾರದ ಬಲವನು ಹೇಳಿಹೆನು ೧೦

ಕುದುರೆಗೆ ಮೈಯೆಲ್ಲ ರಕ್ತತುಂಬಿ ಕಣ್ಣುಗಳು ಸಸುಗೆಂಪಾಗಿ ಇದ್ದರೆ ಅದು ಮೊದಲ ಬಲವೆಂದರಿವುದು ೧೧

[೧೨ನೆಯ ಪದ್ಯಕ್ಕೆ ಟೀಕು ಇಲ್ಲ]

ಉರವು ಕೊರಳು ತೊಡೆಯು ಉನ್ನತಗಳಾಗಿ ಇದ್ದು ನಾಲ್ಕು ದೆಸೆಗಳಿಗೆ ವಸುದಿಂದ ನೋಡಿ ಹಲುಮಣಿಸಲು ಅದು ಮೂರನೆಯ ಬಲ ೧೨

ಮೈಯೆಲ್ಲವು ಮಾಂಸಪೂರಾಯುವಾಗಿ ಹೆಚ್ಚಿ ಚಾರಿವರಿದು ಭರದಿಂದ ಹರಿವುದು ಸತ್ವದಿಂ ಅದು ನಾಲ್ಕನೆಯ ಬಲವೆಂದರಿವುದು ೧೩

ಆರೂಢ ವಿಷಮಗತಿ ಗಂಭೀರಧ್ವನಿ ಅಧಿಕ ಸತ್ವರಿಸಂಹಾರ ಸಮರ್ಥನು ಐಶ್ವರ್ಯಕ್ಕೆ ತವರುಮನೆ ಶ್ರೋಣಿತನೆಂದು ಐದನೆಯ ಸತ್ವ ೧೪

[ಇಲ್ಲಿಂದ ೮೮ನೆಯ ಪದ್ಯ ಪೂರ್ತಿ ಟೀಕು ಇಲ್ಲ]

ಎಂಟನೆಯ ಅಧ್ಯಾಯ

ಸುಪರ್ಣಪವಿತ್ರಿ ಶ್ರೀರಾಜಸವನು ಕುದುರೆಗೆ ಮಾಡಿದರೆ ಹಗೆಯನು ಜಯಿಸುವನು ೧

ಅಶ್ವೀಜ ಶುದ್ಧ ಬಿದಿಗೆಯ ದಿನ ಕುದುರೆಗೆ ರಕ್ಷೆಯ ಕಟ್ಟಿ ಪ್ರದಾರದಿಂದ ಸಂತೋಷದಿಂ ಅರಸಾಗಿ ಇದ್ದವನು ಮಂಗಳವ್ಯಾದ ಸಹ ಮಾಡುವದು ೨

ಅಮೃತವುಳ್ಳ ದೊಡ್ಡಿತಾಗಿ ಇದ್ದ ಅತಿ ಬಿಳಿದಾಗಿ ಇದ್ದ ಬ್ರಾಹ್ಮಣನನು ದೀರ್ಘಾಯುವನು ಗುಡಿಗಿನೋಪಾದಿ ಪಸಿಯನುಳ್ಳವನು ೩

ಲಕ್ಷಣ ಸಂಪನ್ನನನು ಅಪಲಕ್ಷಣವಿಲ್ಲದನು ತೇಜವುಳ್ಳವನು ಮನೋಹರವಾಗಿ ಇದ್ದದನು ೪

ಉನ್ನತಉಳ್ಳವನು ಕುದುರೆಯ ಗುಣವೆಂಜನದಿನುಳ್ಳನ ಬಡಗಣ ಭೂಮಿಯಲ್ಲಿ ಹುಟ್ಟಿದ ವಾರುವನು ಪಟ್ಟಕ್ಕೆ ಯೋಗ್ಯವ ಮಾಡಿ ಅದಕ್ಕೆ ಸಮವಾಗಿ ಬೀಜ ಕುದುರೆಯನು ಒಂದ ಕೂಡುವದು ೫

ಲಕ್ಷಣವುಳ್ಳವನು ಸರ್ವಗುಣಸಂಪನ್ನನು ಕೋಪವುಳ್ಳವನು ವಾಯುವೇಗಿಯನು ನಾನಾಸಾಧನೆಯ ಬಲ್ಲವನು ಐದುಗುಣಂಗಳುಳ್ಳ ಹವಳದ ವರ್ಣದ ಕೆಂಪಿನ ಕುದುರೆಯನು ಯುವರಾಜಪಟ್ಟವ ಕಟ್ಟುವದು ೬

ವಗೆಯಂ ಕುಲ ಬಲ ತೇಜ ಸ್ವರ ಇವರಲಿ ಸತ್ವವುಳ್ಳವನ ಜೀವ ಪ್ರಾಣ ಲಕ್ಷಣಗಳಲ್ಲಿ ಸಂಪೂರ್ಣವುಳ್ಳವನು ಶುಭವನುಳ್ಳವನು ದೇವಾಯಿಪಟ್ಟಕ್ಕೆ ಮಾಡುವದು ೭

ಜೋಗನು ನಾಲ್ಕುವರ್ಣದಲ್ಲಿ ವಿಶೇಷಜ್ಞನನು ವರ್ಣಲಕ್ಷಣವುಳ್ಳದುದನು ವೀರವನುಳ್ಳವು ದೊಡ್ಡವು ಧೀರೋದಾರನಾದ ಕುದುರೆಯು ಪ್ರಧಾನಂಗೆ ಯೋಗ್ಯವಹದು ೮

ಮೊದಲು ಹೇಳಿದ ವರ್ಣಲಕ್ಷಣಗಳನುಳ್ಳ ಕುದುರೆಯನುಳ್ಳವಂಗೆ ಐಶ್ವರ್ಯವಹದು ಅದರಿಂದ ಚೆನ್ನಾಗಿ ಅರ್ಚಿಸುವದು ೯

ವಿಜಯವಾದ ಆನೆ ಕುದುರೆ ಭಟರು ಸ್ತ್ರೀಯು ನಾಲ್ಕು ರತ್ನಗಳಲ್ಲಿ ಲಕ್ಷಣಗಳ ನೋಡುವದು ೧೦

ಗುಡಿ ರಾಜಾನ್ನದಕ್ಕಿ ಕನ್ನಡಿ ಕಳಶ ಗರಿಕೆಯು ಕೊಸರು ತೋರಣ ಹೊಸತು ಹಣತೆ ದೀಪ ಎಲೆ ಅಡಿಕೆ ಪವಿತ್ರ ಬಿಳಿಯಸಾಸವೆ ಇವೆಲ್ಲವು ಮಂಗಳ ದ್ರವ್ಯಂಗಳು ೧೧

ಸತ್ತಿಗೆ ಮಂಗಳವಾದ್ಯ ಪಟಹ ಚಿನ್ನದ ಕಾವಿನ ಚವುರ ಸೂಳೆಯರು ಪರಿವಾರ ಸಮೂಹ ಕಹಳೆಯಧ್ವನಿ ಇವೆಲ್ಲವು ಮಹರ್ನವಮಿಗೆ ಬೇಕಾದುದು ೧೨

ತೊರೆ ಸಮುದ್ರ ದೊಡ್ಡಕೆರೆ ತಾವರೆಕೊಳ ಇವರಲಿ ಕುದುರೆಯನು ಹಾಯ ಸೇವುದು ಅಲಂಕರಿಸಿ ಹರೆ ಕಹಳೆ ಶಂಖಧ್ವನಿಗೈಸಿ ಲಾಯಕ್ಕೆ ತಾಹುದು ೧೩

ಕುದುರೆಗೆ ಕುಂಕುಮ ಅರಿಶಿನ ಪರಿಮಳದ ಗಂಧಂಗಳನು ಲೇಪಿಸುವದು ೧೪

ಕಳಸ ತೋಮರ ರತ್ನಂ ಮಸ್ತಕದಲ್ಲಿಯಿಕ್ಕಿ ಬಣ್ಣದ ಸೀರೆಗಳನು ಉರದಲ್ಲಿ ಇಳಿಯಬಿಟ್ಟು ಮತ್ತೆ ಮೆತ್ತಲಿಯಾದಿಯಾದ ಶೃಂಗಾರಗಳ ಮಾಡಿ ೧೫

ಪಟುಗೇಯಂ ಮಣಿಸರವನು ರಕ್ಷೆಯನು ಪವಿತ್ರಗಳನು ತೊಡರನು ಸಹ ಕುದುರೆಯ ಹಣೆಯಲ್ಲಿ ಪಟ್ಟವ ಕಟ್ಟುವದು ೧೬

ಅರಿಸಿನ ಉತ್ತರಣೆ ಬಿಳಿಯ ಸಾಸುವೆ ಗಜ್ಜುಗ ಅಮರದ ಬಳ್ಳಿ ಜೇವು ಲೋಧ್ರ ಬಾಗೆ ಬಜೆ ಗುಗ್ಗುಳ ಇಪ್ಪೆ ಕಕ್ಕೆ ಲೋಹ ಗೋರೋಜನ ೧೭

ಕುದುರೆಯ ಕೊರಳಿಗೆ ಧಾನ್ಯದ ಪೊಟ್ಟಣವನು ರಕ್ಷೆಯನು ಕಟ್ಟಿದರೆ ರಾಕ್ಷಸ ಪಿಶಾಚಿಗಳು ಮುಟ್ಟವು ದೃಷ್ಟಿಗಳು ತಾಕವು ೧೮

ದೇವರ ಗುಡಿಯ ಮಣ್ಣು ಆನೆಯ ಕೊಂಬು ಹುತ್ತದ ಮಣ್ಣು ಅರಮನೆಯ ಮಣ್ಣು ಇಷ್ಟನೂ ಕೂಡಿ ಕುದುರೆಯ ಮೈಗೆ ಲೇಪವ ಮಾಡುವದು ೧೯

ರಂಗವಲಿ ತೋರಣ ಮಂಗಳವಾದ್ಯ ವೇದಘೋಷ ಅಕ್ಷತೆ ಪುಷ್ಪ ಗಂಧ ಧೂಪ ದೀಪದಿಂದ ಕುದುರೆಗೆ ಶಿಶ್ನದ ಸರಿಸದಲ್ಲಿ ಅರ್ಚಿಸುವದು ೨೦

ಲಾಯದಲ್ಲಿ ಬ್ರಾಹ್ಮರ ಕೈಯಲ್ಲಿ ಹೋಮವನು ಮಾಡಿಸಿ ಅವರಿಗೆ ದಕ್ಷಿಣೆಯನು ಕೊಟ್ಟು ಅವರ ಕೈಯಲ್ಲಿ ಮಂತ್ರಾಕ್ಷತೆ ತೆಗೆದುಕೊಂಡರೆ ತನ್ನ ಹಗೆಯ

ಹುಯಲಿನಲ್ಲಿ ಜಯಿಸಿ ಪರಲೋಕ ಸಾಧನವನ್ನು ಪಡೆದು ಚೆನ್ನಾಗಿ ಬದುಕುವರು ೨೧

ರೇವಂತ ಪೂಜೆಯನು ಸಂಜೆಯಲ್ಲಿ ಓಗರ ಬಲಿ ವೀಳೆಯ ಗಂಧ ಹೂವು ಅಕ್ಷತೆ ದೀವಿಗೆ ಪಟಹ ಭೇರಿಯ ದನಿಗಳಿಂದ ೨೨

ದೇವ ಸೂರ್ಯನ ಮಗ ಜಯಜಯ ತುರಗಾರೂಢ ವಿಜ್ಞಾನಿ ಕುದುರೆಯ ಚಿತ್ರವ ಬಲ್ಲವನೆ ಜಯರಥಕ್ಕೆ ಐಶ್ವರ್ಯವನುಳ್ಳ ರೇವಂತ ೨೩

ಮೊದಲು ಹೇಳಿದ ಮರಿಯಾದಿಯಲ್ಲಿ ಕೊಂಡಾಡಿ ಅರಸಿನ ಕುಮಾರನನು ನಮಸ್ಕಾರವನು ಮಾಡಿಸಿ ಸೂರ್ಯನ ಮಗ ರೇವಂತಂಗೆ ಹುಯ್ಯಲನು ಜಯಿಸಿ ಜಯವನು ಮಾಡು ರೇವಂತ ೨೪

ಅಭಿಷೇಕವನ್ನು ಮಾಡಿ ತೋರಣದಲ್ಲಿ ಸಂಪತ್ತಿಂದ ತಂದು ಪಟ್ಟದ ಕುದುರೆಗೆ ಅರಸನು ಪೊಡಮಡಿಸಿ ರಾತ್ರೆಯಲಿ ಆಯುಧಪೂಜೆಗಳನು ಶಾಸ್ತ್ರೋಕ್ತವಾಗಿ ಮಾಡುವದು ೨೫

ಬ್ರಹ್ಮನ ಕಣ್ಣೀರಿನಿಂದ ಹುಟ್ಟಿದನೆ ಜಯ ಚಂದ್ರನಿಂದ ಕಿಚ್ಚಿನಿಂದ ಹುಟ್ಟಿದನೆ ಜಯ ಮೃಗದಿಂದ ಹುಟ್ಟಿದನೆ ಜಯ ದುಗ್ಧಮಥನದಲ್ಲಿ ಹುಟ್ಟಿದನೆ ಜಯವೆಂಬುದು ೨೬

ಜಯ ದನುಜಕುಲವಿಧೇಯ ಐಶ್ವರ್ಯಕೆ ಕಾರಣ ಜಯಹಕ್ಕೆ ಒಡೆಯನೆ ಜಯಜಯ ಎಂದು ೨೭

ಜಯಜಯ ಶತ್ರುಕ್ಷಯ ಕೀರ್ತಿ ಜಯವೆಂದು ಕೊಂಡಾಡಿ ೨೮

ಅನಂತಹರುಷದಿಂದ ಎದ್ದು ಪೊಡಮಟ್ಟು ನಾನಾವಾದ್ಯಂಗಳಿಂದ ಜಯ ಜಯ ಎಂದು ದೇವರ್ಕಳಿಗೆ ನಮಸ್ಕಾರವಂ ಮಾಡುವದು ೨೯

ಮಂಗಳ ಜವಳಿಯನು ಆಭರಣವನು ಉಂಗುರವನು ವೈದ್ಯಂಗೆ ಕೊಟ್ಟು ಬಳಿಕ ಆಯುಧಗಳನು ಅರ್ಚನೆಯ ಮಾಡುವದು ೩೦

ಒಂಬತ್ತನೆಯ ಅಧ್ಯಾಯ

[೧ನೆಯ ಪದ್ಯಕ್ಕೆ ಟೀಕಿಲ್ಲ]

ಕುದುರೆಯು ಶರೀರಗಳಲ್ಲಿ ಹೆಸರುಗಳಲ್ಲಿ ಮೊದಲಲ್ಲಿ ಕಣ್ಣಿನಲ್ಲಿ ಹೇಳಿಹೆನು ೨

ಕೆಳಗಣ ಮೇಲಣ ಹಲ್ಲುಗಳ ಮೊದಲ ಸಂದುಗಳನು ಪೀಠಿಕೆಯೆಂಬರು ತಳಗಳ ಅಣಲ ಮೇಗಣ ಹಲ್ಲ ಗಂಧವೆಂಬರು ೩

ಕುದುರೆಯು ಕಟವಾಯಿಯ ಸಂದುಗಳನು ಸೃಕ್ವಣಿಯೆಂಬರು ಮೇಢ್ರ ಸ್ಥಾನಗಳನು ಜಿಹ್ವಾಸ್ಥಂಭವೆಂಬುದು ೪

ತಾಳುಗೆಯಿಂದ ನಾಲಿಗೆಯ ಮೇಲೆ ಇಹುದು ನಾಲಿಗೆಯ ಕೆಳಗುಂ ತಾಳುಗೆ ಎಂಬುದು ತಾಳಿಗೆಯ ತೆರ ಮೂವತ್ತೆರಡು ಅರ್ಧಕೂರ್ಮೆಯೆಂಬುದು ೫

ಆ ತೆರೆಗಳ ನಡುವಣ ರೇಖೆಗಳಂ ವಾಜಿಯೆಂಬರು ಆ ತೆರೆಗಳ ಮೇಲಣ ರೇಖೆ ಯನು ತಾಳುಗೆಯೆಂಬರು ೬

ಅಣಲಲ್ಲಿ ಹುಟ್ಟಿ ತೋರುವ ಹಲ್ಲಂ ದಂತವೆಂಬುದು ಅಣಲುಗಳ ದಾಡೆಯು ಹಲ್ಲಂ ದಂಷ್ಟ್ರವೆಂಬುದು ೭

ಕಡೆಯ ಹಲ್ಲುಗಳ ನಾಲ್ಕನು ಪಾರಿಪಕ್ವವೆಂಬ ಹೆಸರು ನಡುವಣ ನಾಲ್ಕು ಹಲ್ಲ ಮಧ್ಯವೆಂಬುದು ೮

ಮುಂಬಲ್ಲು ನಾಲ್ಕು ಸಂದಂಶವೆಂಬ ಹೆಸರು ಮೇಲಣ ಅಗ್ರ ಹಲ್ಲಂಅಗ್ರವೆಂಬರು ಆ ಹಲ್ಲ ಹೊರಗಂ ಬಾಹ್ಯವೆಂಬರು ೯

ಹಲ್ಲಿನ ಒಳಗಂ ಅಭ್ಯಂತರವೆಂಬುದು ತುದಿಗಳನು ಅಗ್ರವೆಂಬುದು ಕಿವಿಯ ಮೊದಲನು ಮೂಲವೆಂಬುದು ೧೦

ಹಲ್ಲಮುಚ್ಚಿಹ ಹಲ್ಲ ಕೆಳಗಣ ಹಲ್ಲತಾಳಂ ಪಲ್ಲೋಷ್ಠವೆಂಬುದು ಅವರ ಕೆಳಗಂ ಚುಬುಕವೆಂಬುದು ೧೧

ಮೇಲಣ ತುಟಿಯು ನಡು ಪ್ರಸ್ಥಾನವೆಂಬುದು ಮೇಲಣ ತುಟಿಯುಂ ಉತ್ತರೋಷ್ಠವೆಂಬುದು ೧೨

ತುಟಿಯ ಕಡೆ ಘೋಣವೆಂಬುದು ಮೂಗಿನ ಕಂಬಿಯಂ ನಾಸಾವಂಶ ವೆಂಬುದು ಮೂಗಿನ ಒಳಗಂ ಸ್ರೋತಮಾರ್ಗವೆಂಬದು ೧೩

ಕಣ್ಣೊಳಗಣ ಮೊದಲಂ ನಯನಾಶ್ರುಪಾತವೆಂಬುದು ಕಣ್ಣ ಮೇಲಣ ಎವೆ ಗಳ ಅಕ್ಷಿಪಾತವೆಂಬದು ೧೪

ಕಣ್ಣ ಮುಚ್ಚಿಹ ಹೊಟ್ಟೆಯನು ಪಕ್ಷ್ಮಣಿಕೆಯೆಂಬುದು ಅದರ ಮೇಲಣ ರೇಖೆಯ ಯಕ್ಷಿಣಿಯೆಂಬುದು ಆ ಕಣ್ಣೊಳಗಣ ಬಿಳಿಯ ಆಲಿಯನು ಶುಕ್ಲ ವೆಂಬರು ೧೫

ಆ ಕಣ್ಣಿನ ಬಿಳಿದಿನ ಭಾಗದ ಕಪ್ಪಂ ಕೃಷ್ಣ ಭಾಗವೆಂಬರು ಅದರ ಬಿಳಿದಿನ ನಡುಭಾಗವಮಂ ದೃಷ್ಟಿಭಾಗವೆಂಬದು ೧೬

ಕಣ್ಣ ಹೊಟ್ಟೆಯ ಮೇಲಣದಂ ನಯನಾಕ್ಷಿಕೂಪವೆಂಬುದು ಕಣ್ಣ ಹೊರಗಣ ಹುಬ್ಬಂ ಭ್ರೂವೆಂಬುದು ೧೭

ಎರಡು ಹುಬ್ಬಿನ ನಡುವಂ ಭ್ರುಕುಟಿಯೆಂಬುದು ಕಣ್ಣ ಮೊದಲ ಮಾಂಸದ ಕೆಂಪಿಗೆ ಕಣ್ಣೀರವೆಂಬರು ೧೮

ಕಣ್ಣೀರ ಬಿಳಿಭಾಗಕ್ಕೆ ಸುಸಿರಕ್ಕೆ ಆಕಾರವೆಂಬುದು ಕಣ್ಣು ಹೊರಗಣ ಕಡೆ ಗಣ್ಣಂ ಅಪಾಂಗವೆಂಬುದು ೧೯

ಸ್ಥೂಪದ ಹುಬ್ಬಿನಯೆಡೆಯನು ಲಲಾಟವೆಂಬರು ಆ ಲಲಾಟವನ್ನು ಸ್ಥೂಪ ವೆಂಬರು ೨೦

ಎರಡು ಕಿವಿ ಎಡೆಯ ಶಿರವೆಂಬರು ಅದರ ಶಿರದ ನಡುವಂ ಮಸ್ತಕವೆಂಬರು ಅದರ ಎರಡು ಕೆಲನಂ ಕಿವಿಕರ್ಣವೆಂಬರು ೨೧

ಕಿವಿಗಳ ಮುಂದಣ ರೇಖೆಯನು ಕರ್ಣಕುಡಿಯೆಂಬರು ಕಿವಿಯೊಳಗಣ ಬಯಲಂ ಶ್ರೋತ್ರಾಣಿಯೆಂಬರು ೨೨

ಹಣೆ ಕಿವಿಗಣ್ಣೆಡೆಯಲ್ಲಿ ಕಟಕಟವೆಂಬದು ಚುಬುಕದ ಮೇಲಣ ಅಣಲಿಗೆ ಹನುವೆಂಬರು ಹನುವಿನ ನಡುವಿನ ಪೂವಿಗೆ ಗಂಡವೆಂಬುದು ೨೩

ಗಂಡದ ಕೆಳಗಣ ಪೊರಗಣ ಕೆಳಗಂ ಹನುಚಕ್ರವೆಂಬರು ಹಲ್ಲಾದಿಯಾಗಿ ಹನುಕಡೆ ನಾಲ್ವತ್ತೆೀಳುವಂ ತಿಕವೆಂಬದು ೨೪

ಕದುರೆಯು ಕೊರಳ ನಡುವಣ ಪ್ರದೇಶವನು ನಿಗಳವೆಂಬುದು ಕಿವಿಗಳ ಹೊರಗನು ಬೇಡುಗೆಂಬರು ೨೫

ಬೇಡುವಿನ ಸಮೀಪದೆಡೆಗಂ ವರ್ಣಣಿಯೆಂಬ ಪೆಸರು ನಡು ಕಂಡನಾಳಿಯಿಕೆ ಲದೆಡೆ ಮಧ್ಯವೆಂಬೀ ಹೆಸರು ೨೬

ಮಧ್ಯಗಳ ತಲೆಯ ಎಡೆಯುಂ ಗ್ರೀವವೆಂಬುದು ಅದರ ಮೇಲಣ ಹೆಗಲ ಸ್ಕಂದವೆಂಬರು ೨೭

ಕಂದದ ಮೇಲಣ ವಳಯುವನು ಕೇಸರವೆಂಬುದು ಕೇಸರದಿಂದಾ ಕೆಳಗೆರಡಂ ವೃಧ್ಧರ ಕಂದವೆಂಬುದು ಆ ಕೇಸರದ ಕೆಲಂಗಳಂ ಕಾಕಸೆಯೆಂಬುದು ೨೮

ಕೊರಳಿನ ನಡುವಣ ನೀಳದ ಹೆಸರಂ ಕಕ್ಷೆಗಳೆಂಬುದು ಆ ಕಕ್ಷಂಗಳ ನಡುವಂ ಕಂಟಕವೆನಿಸಿಕೊಂಬದು ಆ ಕಂಠದ ನೀಳ ಕಡೆಯ ಹನ್ನೊಂದು ೨೯

ಬೇಡುವನ ಸಮೀಪದೆಡೆಗಂ ವರ್ಣಣಿಯೆಂಬ ಪೆಸರು ನಡಕಂಡ ನಾಳಿಯಿಕ್ಕೆಲ ದೆಡೆ ಮಧ್ಯವೆಂಬ ಹೆಸರು ಕೊರಳ ಕೆಳಗಂ ವಕ್ಷವೆಂಬುದು ಆ ವಕ್ಷದೆಡೆಯುಂ ಕೋಳ ವೆಂಬರು ೩೦

ಆ ವಕ್ಷವನಾಶ್ರೈಸಿದ ಠಾವು ಎರಡಕೆ ಕುಟಿಸವೆಂಬರು ಕುಂದಿಯ ಮೊದಲಾ ಶ್ರಯುವನು ದಾಮುವೆಂಬರು ೩೧

ದಾಮುದಿಂದಾ ಕೆಳಗಂ ಬಾಹ್ಯವೆಂಬುದು ಆ ಬಾಹ್ಯಮೂಲವುಂ ಜೋಳಗ ವೆಂಬರು ಆ ಬಾಹ್ಯದೊಳಗಳ ಕಟಿಗಳಿಗೆ ಕೇಣವೆಂಬರು ೩೨

ಬಾಹ್ಯದ ಕೆಳಗಣ ಮೊಳಕಾಲಂ ಬಾಹ್ಯವೆಂಬುದು ಆ ಮೊಳಕಾಲಕರಟವಂಕ ಯೆಂಬರು ೩೩

ಅದರಿಂದ ಮೇಲೆ ಮಡಿಸಂದನು ಜಾನುಎಂಬರು ಆ ಜಾನುವಿನ ಕೆಳಗನು ಜಂಘೆಯೆಂಬರು ೩೪

ಜಂಘೆಯ ಕೆಳಗಂ ಪಳಿಹಸ್ತವೆಂಬುದು ಮೊಳಕಾಲ ಕೆಳಗೆ ಪಳಿಹಸ್ತವ ಆಶ್ರೈಸೆ ಕೂರ್ಚೆಯೆಂಬುದು ಕೂರ್ಚೆಯಿಂದಾ ಕೆಳಗೆ ಕಳೆಯೆಂಬುದು ೩೫

ಆ ಕಳೆಯೆರಡು ಕೆಲನಂ ಮಿಸಿನಿಯೆಂಬುದು ಕಳರದಿಂದ ಪಾಶೆಯೆಂಬರು ೩೬

ಆ ಜಂಘೆಯ ಕೆಳಗೆ ಮುಂದಣ ಕಾಲುಗಳ ಪ್ರದೇಶದಲ್ಲಿ ಮೊದಲಿಗೆ ಇಪ್ಪತ್ತೊಂದಂ ೩೭

ಅಲ್ಲಿಂದ ಕೆಳಗೆ ಹೃದಯವೆಂಬ ಹೆಸರು ಆ ಹೃದಯಮಧ್ಯಮಂ ನಾಭಿಯೆಂಬುದು ೩೮

[೩೯ ನೆಯ ಪದ್ಯಕ್ಕೆ ಟೀಕಿಲ್ಲ]

ಆಸನದಿಂದ ಕೆಳಗಣ ಬರೆಯುಲೊತ್ತುಂ ಕೋಷ್ಠವೆಂಬುದು ಆ ಕೋಷ್ಠದ ಕೆಲದ ರೇಖೆಗಳನು ಕುಕ್ಷಿಯೆಂಬುದು ೪೦

ಕುಕ್ಷಿಯ ಮೇಲಂ ಕಕುದಿಯೆಂಬವು ಆ ಕುಕ್ಷಿ ಒಳಗು ಹೊರಗು ಅದಂ ಕಕುದಿಯೆಂಬರು ಅದರ ಸಂಧಿಯ ಎಡೆಯಂ ರಂಧ್ರವೆಂಬರು ೪೧

ನಾಭಿಯ ರಂಧ್ರದ ಎಡೆಯಲ್ಲಿ ಉಪರಂಧ್ರವೆಂಬುದು ಆ ರಂಧ್ರಕ್ಕು ಉಪರಂಧ್ರಕ್ಕು ನಡುವಂ ಮೇಖಳೆಯೆಂಬುದು ನಾಭಿಕೋಶಕ್ಕು ಮಧ್ಯಮಂ ರೋಮರಾಜಿಯೆಂಬುದು ೪೨

ಕಕುದಿಗೂ ರೋಮಕ್ಕೂ ನಡುವಂ ಕಾಕಸೆಯೆಂಬರೂ ಕಾಕಸೆಗ ಶಾಸನಕ್ಕೂ ಮಧ್ಯವೆಂಬರು ಆ ಕಕುವಿನ ಹೊರಗಂ ಆಸನವೆಂಬುದು ೪೩

ಆಸನದ ಪೊರಗಂ ಪೃಷ್ಠವೆಂಬುದು ಆಸನವ ಪೃಷ್ಠದ ನಡುವಣ ನೆಟ್ಟಿಲುವಂ ಮಲಕುಠಾರಿಯೆಂಬುದು ೪೪

ತಿಕದಿ ಕೆಲವಂ ರೋಹಿಣಿಯೆಂಬುದು ಅವರ ಕೆಳಗಂ ಪಾಂಡುವೆಂಬುದು ಜಂಘೆಯಿಂದ ಕೆಳಗಣ ಬಾಲದದಂಡೆಯಂ ಪುಚ್ಛದಂಡವೆಂಬುದು ೪೫

ಬಾಲದ ಕೆಳಗಂ ಗುದವೆಂಬರು ಆ ಗುದದ ಎರಡು ಕೆಲನಂ ಪ್ರತ್ರಿಕೆಯೆಂಬರು ಆ ಪ್ರತ್ರಿಕೆಯ ಕೆಳಗುಂ ಆಸನವೆಂಬರು ೪೬

ಬಾಲದಂಡೆಯುಂ ಬಾಲದಂಡೆಯೆಂಬುದು ಆ ಬಾಲದ ಮರೆಯೊಳಗೆ ಇದ್ದಡಂ ಪಾನವೆಂಬರು ೪೭

ಅಪಾನದ ಎರಡು ಕೆಲನಂ ಶ್ವೇತಪಿಂಡವೆಂಬರು ಅದರ ಕೆಳಗಂ ಚಟುಳ ನೆಂಬುದು ಆ ಕೆಳಗಂ ಶಕ್ತಿಯೆಂಬರು ೪೮

ಶಕ್ತಿ ಶಿವನಿಯ ಮುಷ್ಕದ ಎಡೆಯುವಂ ಬಣ್ಣವೆಂಬುದು ಆ ಶಿವನಿಯುದ ಎಡೆಯಂ ಹೋಮವೆಂಬುದು ೪೯

ಅಂಡದ ಹೊಕ್ಕುಳದ ಮಧ್ಯಮಂ ಶಿಶ್ನವೆಂಬರು ಆ ಶಿಶ್ನದ ತುದಿಯಂ ಕರ್ಣಿಕೆ ಯೆಂಬರು ೫೦

ಮೂತ್ರ ಬಹ ಠಾವಂ ಶಿಶ್ನದ್ವಾರವೆಂಬುದು ಮೂತ್ರಕೋಶದ ಪಿಂಡದ ಕೆಳಗಂ ಅಂಡಜಾತವೆಂಬ ಪೆಸರು ೫೧

ಸ್ತುರೆಯ ಮೇಲ ಚಕ್ರಶಕ್ತಿಯೆಂಬರು ರೋಹಿಣಿಯ ಸಂಧಿಯ ಕೆಳಗಂ ಸೂಳೆ ಮೆಂಬರು ಪಾಶದ ನಡುವೆ ಸಂಧಿಯೆಂಬರು ೫೨

ಯುಗಸಂಧಿಯ ಕೆಳಗಂ ಶಕ್ತಿನಿಯೆಂಬುದು ಆ ಪಾಂಡು ಪಿಂಡ ಗಲ್ಲದ ಕೆಳಗೆ ಊರು ಎಂಬುದು ಊರುವಿನ ಕಣ್ಣದೆಡೆ ತಾನಾವೈ ಪಾಂಡು ಪಿಂಡ ಎಂಬಭಿಧಾನಂ ೫೩

ಊರುವಿನ ಕೆಲನಂ ಪಾಂಡುಪಿಂಡವೆಂಬುದು ಚಕ್ರಶಕ್ತಿಯ ಕೆಳಗಂ ಜಂಘೆ ಯೆಂಬರು ೫೪

ಸ್ತುರೆಯ ಕೆಳಗಂ ಮಂಜರಿಯೆಂಬುದು ಆ ನಡುವಂ ಶಂಖವೆಂಬರು ಸ್ತುರೆಯ ಕೆಳಗಂ ಜಂಘೆಯೆಂಬುದು ೫೫

ಅದರದರ ಮೇಲಣ ಕಳಗಳಂ ಕೇಣವೆಂಬುದು ಶಿವನಿಯ ನಡುವಂ ಯೋನಿ ಯೆಂಬರು ಅದರ ಅಪರವಿಂದಣ ಭಾಗ ಮೂವತ್ತಮೂರು ೫೬

ಕಡವನಿಗೂ ಗೋಳಿಗೆಗೂ ಒಂದೇ ಪ್ರಕಾರ ಎಂಟು ಪ್ರಕಾರದ ಲಕ್ಷಣವು ಸರಿ ಗೋಳಿಗೆಗೆ ಯೋನಿಯು ಮೊಲೆಯು ಲಕ್ಷಣ ವಿಶೇಷ ೫೭

ಹಲ್ಲಿನ ಪೀಠಿಕೆ ಮೊದಲಾಗಿ ಯೋನಿ ಕಡೆಯಾಗಿ ಸರ್ವಾಂಗವನು ಹೇಳಿ ತೊಂಬತ್ತಾರು ಪ್ರದೇಶ ೫೮

ಮೊದಲು ನಡು ಕಡೆ ಕುದುರೆಯ ಮುಖ ಮೈಯಿ ಬಾಲ ಬೆನ್ನುಗಳಲ್ಲಿ ಹೇಳಿಹೆನು ೫೯

[೬೦ ನೆಯ ಪದ್ಯಕ್ಕೆ ಟೀಕಿಲ್ಲ]

ಕಣ್ಣು ಮುಖ ಕೊರಳು ಕಿವಿ ಅಂಡ ಶಿಶ್ನ ಕಾಲುಗಳು ಇಕ್ಕೆಲವೂ ಇವು ಹತ್ತು ಸ್ಥಾನಂಗಳು ಕುದುರೆಗಳಿಗೆ ಬಲಂ ೬೧

ಇದು ವಚನ ರಚನಾ ಮನೋಹರವಪ್ಪ ಕುದುರೆಯ ಶಾಸ್ತ್ರದೊಳಗೆ ಒಂಬತ್ತನೆಯ ಅಧ್ಯಾಯಂ ೬೨

ಹತ್ತನೆಯ ಅಧ್ಯಾಯ

ಗುರು ಆಚಾರ್ಯ ನೀತಿವುಳ್ಳ ಶಿಷ್ಯಂಗೆ ಕುದುರೆಶಾಸ್ತ್ರವನುಪದೇಶವನು ಮಾಡುವದು ದುರಾಚಾರಿಯಪ್ಪ ಶಿಷ್ಯಂಗೆ ಹೇಳಲಾಗದು ೧

ಗುರುವಿನ ವಿದ್ಯವನು ಕೆಡಿಸುವಂಗೆ ದಯಾಹೀನಂಗೆ ಲಜ್ಜೆ ಇಲ್ಲದವಂಗೆ ಅಜ್ಞಾನಿಗೆ ನಿಷ್ಠುರನಿಗೆ ಆಲಸ್ಯವುಳ್ಳಂಗೆ ಕುರೂಪಿಗೆ ದೀಪನಕಾರಿಗೆ ಸುರೆಯ ಸೇವಿಸುವವಂಗೆ ವ್ಯಾಧಿತಂಗೆ ವಿಕಾರಿಗೆ ಕಿವುಡಂಗೆ ಕುರುಡಗೆ ವಿಚಾರವಿಲ್ಲದವಗೆ ಇವರೆಲ್ಲರಿಗೂ ವೈದ್ಯಗಳ ಕಲಿಸಬಾರದು ೨

ಗುರುಭಕ್ತಿಯುಳ್ಳವಂಗೆ ಕುಶಲವನುಳ್ಳಂಗೆ ಮತಿಉಳ್ಳವಂಗೆ ಧರ್ಮಬುದ್ಧಿಯುಳ್ಳವಂಗೆ ಹರುಷವನುಳ್ಳವಂಗೆ ಪರಸ್ತ್ರೀಗಮನವಿಲ್ಲದವಗೆ ಶಾಸ್ತ್ರಸಂಪನ್ನಂಗೆ ಸ್ಥಿರಂಗೆ ಸರ್ವಜನೋಪಕಾರಿಗೆ ಶುಚಿಗೆ ಸತ್ಯವುಳ್ಳವಂಗೆ ಆಲಸ್ಯವಿಲ್ಲದವಂಗೆ ಈ ಗುಣಗಳನುಳ್ಳವರ ನೋಡಿ ಕುದುರೆಯ ಶಾಸ್ತ್ರವನ್ನು ಕಲಿಸುವುದು ೩

ತಿರಿದುಂಡು ಕಪ್ಪಡವ ಹೊದ್ದು ಜಿತೇಂದ್ರಿಯನಾಗಿ ಇದ್ದ ಶಿಷ್ಯ ಸಕಲ ವಿದ್ಯವನು ಕಲಿವನು ೪

ಕುದುರೆಯ ವ್ಯಾಧಿಯ ನಿದಾನವನರಿಯದ ವೈದ್ಯನ ತಡೆದ ಅರಸಿಂಗೆ ಅಶ್ರ್ವೇತಿಯ ಪಾತಕ ಶಾಸ್ತ್ರಸಂಪನ್ನನ ತಡೆದರೆ ಅಶ್ವಮೇಧದ ಫಲವಹುದು ೫

ಕುದುರೆಯ ರಕ್ಷಕನಿವನು ಎಂದು ಸಲಹಲರಿಯದ ಅರಸನೋಲೈಸುವದರಿಂದ ಅಡವಿಯನೊಣನೋಲೈಸಿದರೆ ಜೇನುತುಪ್ಪವ ಕೊಟ್ಟು ರಕ್ಷಿಸುವುದು ೬

ಕಾಲಕಾಲಗಳನರಿತು ಕುದುರೆಯ ಚಿಕಿತ್ಸೆಯ ಮಾಡುವ ವೈದ್ಯನಂ ರಕ್ಷಿಸದ ಅರಸುಗಳು ಗಿರಸರನೆ ಅದು ಹೇಗೆಯೆಂದರೆ ಹಸುಮಕ್ಕಳನು ಅರಸು ಎಂಬರು ೭

ಉರಿವರಿದು ಬೇವ ಸಮಯದಲ್ಲಿ ನೀರಕುಡಿದೇನೆಂದು ಅರಸುವ ಹೆಡ್ಡನ ಹಾಗೆ ಕುದುರೆಯ ವ್ಯಾಧಿಗೆ ಗಿಡುವಿನ ಮರಬಳ್ಳಿಗಳ ಔಷಧಿಯ ಮಾಡಿಹೆನೆಂಬುವನು ಆ ತೆರ ೮

ಕಾಲದಲ್ಲಿ ತ್ರಿಳಿದು ಕುದುರೆಗೆ ತಕ್ಕ ಮದ್ದನರಿತು ವ್ಯಾಧಿ ತೊಡಕಿದಾಗಲೇ ಚಿಕಿತ್ಸೆಗಳ ಮಾಡಿದವನೇ ವೈದ್ಯನೆಂಬುದು ೯

ಅವುಷಧಿಯು ಕೂಡಿ ಇರಿಸಿ ಬೇಡಿದಾಗ ಕೊಡುವುದು ಅಲ್ಲದಿರ್ದಡೆ ಹಾನಿ ಬಾಹದು ಅದು ಹೇಗೆಯೆಂದರೆ ಕಾಡಿನಲ್ಲಿ ತಿರಿತಂದೇನೆಂಬ ಹೆಡ್ಡನ ಹಾಗೆ ೧೦

ಒಂದು ಕುದುರೆಯು ಕೊಂದವಗೆ ಪಂಚಮಹಾಪಾತಕಕ್ಕೆ ಮೊದಲಪಾತಕ ಬಂಧಿಸಿ ಕುದುರೆಯು ಸಾಕದೆ ಕೊಂದವಗೆ ಆ ಪಾಪನು ಹೇಳಲರಿದು ೧೧

ಬರಿಮಾತನಾಡಿ ವ್ಯಾಧಿಯು ಕುರುಹಿಡಲರಿಯದ ವೈದ್ಯ ಬೞಗಪ್ಪೆಯರಿಚಿ ಸಾವ ಮರಿಯಾದೆ ೧೨

ವ್ಯಾಧಿಯು ಹೆಸರು ಕುರುಹುಗಳನು ಬಲ್ಲಷ್ಟು ಹೇಳಿಹೆನು ತಪ್ಪುವುಂಟಾದರೆ ಬಲ್ಲವರು ತಿದ್ದುವುದು ೧೩

ಶೂಲೆ ಮಸಗಿದರೆ ಬಾತರೆ ಹೊಟ್ಟೆ ಬಾತರೆ ಹೊಟ್ಟೆ ಬಡವಾದರೆ ವೈಗುದ ಮೆಲ್ಲವನು ನೋವುದು ಶಿಶ್ನವ ಸಿಳಿಯಬಿಟ್ಟರೆ ೧೪

ಅದಕ್ಕೆ ಸುರೆಯುನು ಹಸುವಿನ ಹಾಲಲ್ಲಿ ಕಲಸಿಯರದು ಗೋಮೂತ್ರವನು ಓಗರವನು ಕಲಸಿ ಭೋಜನವನಿಕ್ಕುವದು ೧೫

[೧೬, ೧೭ ನೆಯ ಪದ್ಯಗಳಿಗೆ ಟೀಕು ಇಲ್ಲ]

ವರುಷದ ಮರಿಗೆ ಯರಡುವರುಷದ ಮರಿಗೆ ಮೂರುವರುಷದ ಮರಿಗೆ ನಾಲ್ಕು ವರುಷಕೆ ಬಡಕುದುರೆಗೆ ಬಳಿ ೧೮

ನಾಲ್ಕು ಬೆರಳುದ್ದ ನೇತ್ರವಾಳವಂ ತರಿಸಿವಂ ಪ್ರಯೋಗಿಸುವದು ೧೯

ಕುದುರೆಯು ಪ್ರಾಯ ಸಮಯ ಮೂರುಕಾಲವನು ಆರೈದು ಮೂರುದಿನ ಬೆಣ್ಣೆಯನಿಕ್ಕಿ ನೇತ್ರವಾಳಕ್ರಿಯೆಯುಲಾಸನವಲ್ಲಿ ಮಾಡಿದರೆ ಅನುಹ ಹರವಾಗಿ ದೀಪನ ಹುಟ್ಟುವದು ೨೦

ತೊಳಸಿ ನುಗ್ಗೆ ಕೊಗ್ಗಿ ಚವುಡಂಗಿ ಕಕ್ಕೆ ಎಕ್ಕೆ ಇವುಗಳನೆಲ್ಲವನು ಕೂಡಿ ಲಾಲಿಸಿ ಪತ್ರಶಾಕವಂ ಮಾಡುವದು ೨೧

ಮಳಲನು ಹುರಿದು ಸೀರೆಯನು ನೆನಹಿ ಆ ಮಳಲ ಕಟ್ಟಿ ಹದನರಿತು ಶಾಕವಂ ಮಾಡುವದು ಕುದುರೆಗೆ ಲೇಸು ೩೨

ಕಡುಮಳೆ ಗಾಳಿ ಸೋನೆಯು ಮಳೆಯು ಕಾಲದಲ್ಲಿ ಕರ್ಪುರದಲ್ಲಿ ಕುದುರೆಯು ತೋಳುಗಳಲಿ ಸುಡಲಾ ಶಾಕ ಲೇಸು ೩೩

ಆನೆ ಒಂಟೆ ಕುದುರೆ ಕತ್ತೆ ಇವರ ಲದ್ದಿಗಳಂ ಸಣ್ಣಕೆಸರಿಂ ಕಲಸಿ ಬೇಯಿಸಿ ಕುದುರೆಗೆ ಬೇಕಾದ ಠಾವುಗಳಲ್ಲಿ ಶಾಕವಂ ಮಾಡುವದು ೩೪

ಜ್ವರ ಅತಿಸಾರ ಕ್ರಿಮಿ ದಾಹ ಅಕ್ರಾಂತ ಮೇಲುಬ್ಬಸ ಇವು ಕಾಣಿಸಿ ಇದ್ದಾಗ ಶಾಕಕ್ರಿಯೆಯು ಮಾಡಲಾಗದು ೩೫

ಹೊಕ್ಕುಳು ನೆಟ್ಟೆಲು ಎದೆ ಇಂಥಾಠಾವುಗಳಲ್ಲಿ ಕುದುರೆಗೆ ಬರೆಯು ಹಾಕಲಾಗದು ಅರಿಯದೆ ಬರೆದರೆ ಅದರಿಂದ ಕುದುರೆಗೆ ಅಪಾಯವು ಒಡೆಯಂಗೆ ದುಃಖ ಅಹುದು ೩೬

ಮೊದಲು ಹೇಳಿದ ಠಾವುಗಳು ಹೊರತಾಗಿ ಮತ್ತೆ ಎಲ್ಲಿಯಾದರು ಸೂರ್ಯನ ಹಾಗೆ ಚಂದ್ರನ ಹಾಗೆ ಬರೆಗಳನು ಬರೆದು ಆ ಬರೆ ಮಾಣುವ ಪರಿಯಂತರವು ತುಪ್ಪವನ್ನು ಊಡುವುದು ೩೭

ಕುದುರೆಯ ಮೈಯ ರೇಖೆಗಳು ೬೪ ಉಂಟು. ಅದರಲಿ ಸೆರೆಯು ಬಿಡುವುದು ಆಯಿದು ಆರಲ್ಲಿ ಎಲ್ಲವು ಸಾಧ್ಯ ೩೮

ಎರಡು ಕಣ್ಣುಗಳ ಕೆಳಗೆ ಇಬ್ಬೆಳಲ್ಲಿ ಮುಂಗಾಲ ಬರೆಯು ಕೆಳಗೆ ಎರಡು ಬೆರಳಲ್ಲಿ ಬಸುರಲ್ಲಿ ಎದೆಯಲ್ಲಿ ಎರಡು ತೊಡೆಗಳಲ್ಲಿ ಬಿಡುವುದು ೩೯

ಕುದುರೆಗೆ ಬರೆಯು ಹಾಕುವರೆ ಉದಯದಲ್ಲಿ ಸೆರೆಯು ಬಿಡುವಡೆ ಮೂರನೆ ಜಾವದಲ್ಲಿ ಮಾಡುವುದು ಯುಕ್ತ ೪೦

ವಸ್ತಿ ಕರ್ಮಸೆಯು ಬಿಡುವುದಂ ಬರವುದು ಬೇಕಾದ ವಸ್ತು ಇವೆಲ್ಲವನು ಹತ್ತನೆ ಅಧ್ಯಾಯದಲ್ಲಿ ಹೇಳಿ ಇಹೆನು ೪೧

ಹನ್ನೊಂದನೆಯ ಅಧ್ಯಾಯ

ಕಳಕಳಿಸುವ ಹಸಿಯ ಪೈರುಗಳಿಂದ ಈ ಭೂಮಿಯು ಒಪ್ಪುವ ಹಾಗೆ ಕುದುರೆಗೆ ಭೋಜನಗಳಿಂದ ಅಲಂಕಾರವಾಗಿ ಇಹುದು ೧

ಕುದುರೆಗೆ ದೀಪನವರಿದು ಭೋಜನವನಿಕ್ಕುವುದು ತುಪ್ಪ ಘಸವಾದರೆ ಉದರಾಗ್ನಿ ಕೆಟ್ಟು ವಿಕೃತಿಯಾಗಿ ಬೀಳುವುದು ೨

ಹಸಿದು ಪಡಿದಡಿಸುವ ಕುದುರೆಗೆ ಹೊಟ್ಟೆ ಶೂಲೆಯಾಗಿ ಇದ್ದಾಗ ಖಾಣವಂ ಕಟ್ಟಿದರೆ ಆದರಿಂದ ಉಬ್ಬಸವಾಗಿ ಜೇನೆಯು ಸೈರಿಸಲಾರದೆ ಬಿದ್ದರೆ ಅದಂ ಸುಭಿಕ್ಷ ಶೂಲೆಯೆಂಬುದು ೩

ಮಲಗುವದು ಹೊರಳುವದು ಏಳುವದು ಸಿಡಿಮಿಡಿಗೊಂಬದು ಬೆವರುವದು ಉಮ್ಮಳಿಸುವದು ತಲೆಗುತ್ತುವದು ಇದು ಸುಭಿಕ್ಷಶೂಲೆಯೆಂಬರು ೪

ಶುಂಠಿಯನ್ನು ನೀರಲ್ಲಿ ಅರೆದು ನಸ್ಯವಂ ಮಾಡಿ ಅಂಜನವಂ ಕಣ್ಣಿಗೆ ಎಚ್ಚುವದು ಅಲ್ಲದೊಡೆ ನಿರೂಹಕರ್ಮಂಗಳಂ ಮಾಡುವದು ೫

ಸಾಸುವೆಯನು ಸೈಂಧವಲವಣವನು ಸರಿಗೊಂಡು ಅರದು ಎಳ್ಳೆಣ್ಣೆಯಲ್ಲಿ ಕೂಡಿ ಅಂಬಿಲದಲ್ಲಿ ಕುದುರೆಗೆ ನಿರೂಹಣಂಗೈಯೆ ಸರ್ವಶೂಲೆಗಳು ಮಾಣ್ಗು ೬

ಇಂಗು ತೂಕ ೧ ಬಜೆ ತೂಕ ೨ ಚಿತ್ರಮೂಲ ೩ ಕರ್ಕಾಟಕಶೃಂಗಿ ೪ ಅಜಮೋದ ೫ ಅಳಲೆ ಕಾಯಿ ೬ ಕಣಿಗಿಲ ಬೇರು ೭ ಚಂಗಲ ಕೋಷ್ಠ ೮ ಗಜ್ಜುಗದ ತಿರುಳು ೯ ತಿಗಡೆ ೧೦ ತೂಕವಂ ಕೂಡಿ ೭

ಹಿಂದೆ ಹೇಳಿದ ಮರಿಯಾದೆಯ ಔಷಧಂಗಳು ಬಿಸಿನೀರಿಂದ ಅರದು ಕೊಡಲು ಸರ್ವಶೂಲೆ ಹರ ೮

ಕರ್ಕಾಟಕಶೃಂಗಿ ಇಂಗು ಬೆಳ್ಳುಳ್ಳಿ ತಿಗಡೆ ಸೈಂಧವಲವಣ ಈ ಪಂಚಾಂಗವುಮಂ ಸಮನಾಗಿ ಈ [illegible]ದನು ಸಮಂಗೊಂಡು ಕುದುರೆಗೆ ಇಕ್ಕಲು ಸರ್ವಶೂಲೆ ಹರ ೯

[೧೦ ನೆಯ ಪದ್ಯಕ್ಕೆ ಟೀಕು ಇಲ್ಲ]

ತ್ರಿಕಟುಕ ಇಂಗು ಚಿತ್ರಮೂಲ ಕಿರುದೇಗು ಗಜ್ಜುಗದತಿರುಳು ಬಿಡಲವಣ ಜೀರಿಗೆ ಚವ್ಯ ಕಲ್ಲುಪ್ಪು ಸಂವತ್ಸರಲವಣ ನಾಭಿಯುಂ ಬಿಸಿನೀರಿಂದ ಕೊಡೆ ಶ್ಲೇಷ್ಮ ವಾತಶೂಲೆಹರ ೧೧

ಬಜೆ ಇಂಗು ತಿಗಡೆ ಶುಂಠಿ ಮೆಣಸು ಹಿಪ್ಪಲಿ ಅತಿಬಜೆ ಬಿಡಲವಣ ಗಾಜುಲವಣ ಸೈಂಧವಲವಣ ಸಂವತ್ಸರಲವಣ ಸಮುದ್ರಲವಣ ಅಳಿಲೆಕಾಯಿ ಅಜಮೋದ ಇವಂ ಬಿಸಿನೀರಂ ಹಾಕಿ ಕೊಡೆ ಕುಡುರೆಗೆ ಸರ್ವಶೂಲಹರ ೧೨

ಇಂಗು ಬಜೆ ಪಂಚಲವಣ ಶೃಂಗಿಯ ಬೇರು ಅತಿಬಜೆ ಹಿಪ್ಪಲಿ ಅಣಿಲೆಕಾಯಿ ಗಜ್ಜುಗದ ತಿರುಳು ಮೆಣಸು ಇವೆಲ್ಲವಂ ಸುರೆಯಲಿ ಕಲಸಿ ಇಕ್ಕಲು ಕುದುರೆಗೆ ಸರ್ವಶೂಲೆ ಹರ ೧೩

ಅಲ್ಲದ ನೀರುಗಳಿಂದಲು ಅಲ್ಲದ ಖಾಣಗಳಿಂದಲು ಮಲವಿರೋಧವಾಗಿ ಉದರದಲಿ ಶೂಲೆ ಹುಟ್ಟಿ ಅತಿವೇದನೆಗಳಿಹುವು ೧೪

ಮೊದಲು ಅಂಡಜಾಳಿ ತೊಡಿಸಿ ಬಿಡದೆ ಸೂರ್ಯನ ನೋಡುತ್ತಿಹುದು ಧಾತುಗಳೆಲ್ಲವೂ ಕೆಡವುದು ಅತಿಭ್ರಮಣವಾಗೆ ಅದು ರೂಕ್ಷಾವರ್ತ ೧೫

ಮೇಲುಸುರು ಇಕ್ಕುವದು ತಲೆಯ ಬಾಗುವದು ಕಾಲ ಪೈಯ ನಡುಗುವದು ಮೂಗು ಒಸರುವದು ವೇದನೆಯಿಂದ ಬೇಗ ಬೀಳುವುದು ೧೬

ಎಳ್ಳೆಣ್ಣೆ ಹಾಲು ಹಿಪ್ಪಲಿ ಮೆಣಸು ಮೊಸರು ತುಪ್ಪ ಇವಂ ಕೂಡಿ ಶುಂಠಿಯುಂ ತೇದು ಕಣ್ಣಿಗೆ ಅಂಜನವನಿಕ್ಕಿ ಪಿಂಡಮಾಡುಗೆ ೧೭

ಹೊಸತುಪ್ಪದಲ್ಲಿ ಕೊಡಸಿಗೆಯ ಬೀಜ ಸೈಂಧವ ರೇಣುಕ ಚಿತ್ರಮೂಲ ಇಂಗು ಇವಂ ಕೂಡಿ ಪಿಂಡವಾಗಿ ಇಕ್ಕಲು ಸರ್ವಶೂಲೆ ಹರ ೧೮

[೧೯ನೆಯ ಪದ್ಯಕ್ಕೆ ಟೀಕು ಇಲ್ಲ]

ಕಡುಬಿಸಿಲು ತಾಗಿದಡಂ ನೀರಡಸಿದಡಂ ಮೂತ್ರಕೃಚ್ಛ್ರಯಹುದು ಅದಕ್ಕೆ ಬಳಲುವುದು ಪೊಕ್ಕಳು ಬಾತು ಏಳುವುದುಂ ಬೀಳುವುದುಂ ಬೆವರುವುದುಂ ಪ್ರಜಾಪತಿ ಬಾವುದುಂ ೨೦

ಹಿಪ್ಪಲಿ ಮೆಣಸು ಸೈಂಧವ ಶುಂಠಿ ಕಾಳಿಂಗ ಇಂಗು ಸಾಸವೆ ಇವೆಲ್ಲವಂ ಕೂಡಿ

ಬತ್ತಿಯೊಳಗಿಕ್ಕಿ ಪ್ರಜಾಪತಿಯಲ್ಲಿಯೂ ಗುದದಲ್ಲಿಯೂ ಇರಿಸೂದು ೨೧

ಶುಂಠಿಯನು ನೀರಲ್ಲಿ ಅರೆದು ಚೆನ್ನಾಗಿ ಅಜುವೆಯಲ್ಲಿ ಶೋಧಿಸಿ ನಶ್ಯವ ಮಾಡಿ ಅಂಜನವನು ಇಕ್ಕುವುದು ೨೨

ಇಷ್ಟಪಷ್ಟ ರಕ್ತವಾಗಿ ಮೂತ್ರಿಸುತ್ತ ಇರಲು ಅದು ಶ್ರೋಣಿತಮೇಹನ ವೆಂಬುದು ಅದಕ್ಕೆ ಕೃತ್ರೋಪಚಾರಗಳನೆ ಮಾಡೂದು ೨೩

ಎಲಚಿಯಬೀಜ ಯಷ್ಟಿಮಧುಕ ಜೇನತುಪ್ಪ ಮಂಜಿಷ್ಟೆ ತುಪ್ಪ ಇವಂ ಕಲಸಿ ಇಕ್ಕುವುದು ಹಾಲಕ್ಕಿ ಜೇನುತುಪ್ಪ ಹಾಲು ಅಂಬಿಲ ಇವು ಕೂಡಿ ಇಕ್ಕಲು ರಕ್ತ ಮೇಹಾದ್ಯಂ ಮಾಣ್ಗುಂ ೨೪

ಉಪ್ಪು ಕಬ್ಬಿನರಸ ಹಿಪ್ಪಲಿ ತುಪ್ಪ ಎಳ್ಳು ಇವು ಕೂಡಿ ಇಕ್ಕಲು ಹಾಲಲ್ಲಿ ರಕ್ತ ಮೇಹ ಕೆಡುವುದು ೨೫

ಸಪ್ರತೆಯ ಬೇರಂ ನೀರಲ್ಲಿ ಅರೆದು ಎರೆವುದು ಸಪ್ರತೆಯ ಬೀಜವನು ಅರೆದು ಬೆಲ್ಲದಲ್ಲಿ ಕಲಸಿ ಇಕ್ಕುವುದು ಮತ್ತೆ ನೀರಂ ಕುಡಿಸುವುದು ೨೬

[೨೭ ರಿಂದ ೪೮ ಪದ್ಯಗಳಿಗೆ ಟೀಕು ಇಲ್ಲ]

ಬೂರಣವಾದ ಕಡಲೆಯಿಂದ ಕೊಳೆನೀರಿಂದ ದುರ್ಗಂಧರಸಭೋಜನಗಳಿಂದ ವಾತಪಿತ್ತ ಶ್ಲೇಷ್ಮಗಳು ಹೆಚ್ಚಿ ಸಿಂಹ್ವಾಣ ಹುಟ್ಟುವುದು ೪೯

ಕುದುರೆಗೆ ಕಣ್ಣನೀರು ಸುರಿವುತ್ತಲಿಹುದು ಮೂಗಿನಲ್ಲಿ ಶ್ಲೇಷ್ಮ ಸುರಿವುದು ಕೆಮ್ಮುವುದು ಅದಂ ಸಿಂಹ್ವಾಣವೆಂಬುದು ೫೦

ಅರಿಸಿನ ಬರಿಸವಣೆ ಕಟುಕತ್ರಯವಂ ಆಡಿನ ಹಾಲಲ್ಲಿ ಅರೆದು ಆಡಿನ ಹಾಲಲ್ಲಿ ಎರೆವುದು ಅದಂ ನಶ್ಯಂ ಮಾಡಲು ವಾತ ಪಿತ್ತ ಶ್ಲೇಷ್ಮದಿಂದ ಸಿಂಹ್ವಾಣ ಮಾಣ್ಗು ೫೧

ಅಗಸೆಯ ಎಲೆಯಂ ಅರೆದು ಹಿಂಡಿಕೊಂಡು ಆ ರಸದಲ್ಲಿ ತ್ರಿಕಟುಕತ್ರಿಫಲೆಗಳಂ ಕೂಡಿ ನಶ್ಯಂ ಮಾಡಲು ಸಿಂಹ್ವಾಣ ಹರ ೫೨

ಆಲ ಅತ್ತಿ ಅರಳಿ ಬಸುರಿ ಇವರ ಹಾಲುಗುಡಿಯಂ ತಂದು ತುಳಿದು ಜೇನ ತುಪ್ಪದಲ್ಲಿ ಕಲಸಿಯಿಕ್ಕಲು ಆರು ಏಳು ದಿನಕೆ ಕುದುರೆಯ ಖಾಸ ನಾಶವಹುದು ೫೩

ಗೋಮೂತ್ರದಲ್ಲಿ ಸೈಂಧವವಂ ಶುಂಠಿಯಂ ಅರೆದು ಆ ಗುಳ್ಳದ ಹಣ್ಣಿನ ರಸವಂ ಕೂಡಿ ನಸ್ಯಂಗೆಯ್ಯಲು ಸಿಂಹ್ವಾಣ ಹರ ೫೪

ರಸಗಳನು ಕೊಡಲಾಗದು ನಶ್ಯಗಳನೆ ಮಾಡುವುದು ರಾತ್ರಿಯಲ್ಲಿ ಮುಖಕ್ಕೆ ಶೇಖವಂ ಮಾಡಿ ಕಣ್ಣ ಕೆಳಗೆಯೆರಡು ಬೆರಳ ಬಳಿಯಲ್ಲಿ ಶಿರೆಯ ಬಿಡಿಸುವುದು ೫೫

ಕುದುರೆಯ ಮೂಗಿನಲ್ಲಿ ಕುರುವಮೂಡಿದ ಹಾಗೆ ಗಂಟಾಗಿಯಿರೆ ಅದಂ ರಕ್ತ ಸಿಂಹ್ವಾಣವೆಂಬುದು ಆ ಮೂಗಿನಲ್ಲಿ ಉಸುರು ಹರಿಯದೆ ಇದ್ದರೆ ಆ ಕುದುರೆಗೆ ಮರಣವೆಂದಱಿವುದು ೫೬

ಹಸುವಿನ ಹಾಲಂ ದಾಳಿಂಬದ ಹೂವಿನ ರಸವಂ ಕೂಡಿ ನಸ್ಯಂಗೆಯ್ಯಲು ಮೂಗಿನಲ್ಲಿ ಬೀಳುವ ರಕ್ತಂ ಮಾಣ್ಗುಂ ೫೭

ಕರಿಕೆಯ ರಸವಂ ಹಾಲನೂ ಕೂಡಿ ನಶ್ಯಂ ಮಾಡಿ ಉತ್ತರಣೆಯ ರಸವಂ ತಲೆಯಲ್ಲಿ ಎಱಿಯಲು ಮೂಗಿನಲ್ಲಿ ಬೀಳುವ ರಕ್ತ ನಿಲುವುದು ೫೮

ವಾತಾದಿಯಾಗಿ ಪ್ರಜಾಪತಿ ವಿಕೃತಿಯಾಗಿ ಅಂಡವು ಬಾತುಯಿಹುದು ಆ ಕುದುರೆಯಂ ಬಿಸಿಲಲ್ಲಿ ಕಟ್ಟುವುದು ೫೯

ಬಜೆ ಇಂಗು ಅಣಿಲೆ ವಾಯುವಿಳಂಗ ಅರಿಸಿನ ಗುಳ್ಳ ನೆಲಗುಳ್ಳ ಕಟುತ್ರಯ ಕಡಸಿಗೆಬೀಜ ಸಾಸವೆ ಸಂಪತ್ಸರಲವಣ ಅಜಮೋದ ಇವೆಲ್ಲವಂ ಸಮಂಗೂಡಿ ಪಿಂಡವ ನಿಕ್ಕಲು ಅಂಡವಾತ ಹರ ೬೦

ಬರಿವದಣೆ ಸುಗಂಧಿ ಪಾದರಿ ಗುಳ್ಳ ನೆಲಗುಳ್ಳ ಅಣಿಲೆ ಬಿಳಿಯಚಿತ್ರಮೂಲ ಆಸಡಿ ಹೊಂಗೆ ಬಿಲ್ಲವತ್ತ ಗರುಗ ಗೋರಂಟೆ ತವಸ ಅಪ್ಪಡಲ ಇವೆಲ್ಲವರ ಬೇರು ೬೧

[೬೨ ನೆಯ ಪದ್ಯಕ್ಕೆ ಟೀಕು ಇಲ್ಲ]

ಅಜಮೋದ ಬೇರೆಲ್ಲವಂ ನಾಗುಳ ಸೀರೆರಮೂ ಕಾಸಿದ ಕಷಾಯ ಒಂದು ಕೊಳಗದಲ್ಲಿ ತುಪ್ಪ ೧ ಎಣ್ಣೆ ೧ ವನೂ ಕೂಡಿ ಆ ಎಣ್ಣೆ ತುಪ್ಪ ಉಳಿಯಲಟ್ಟು ಕಾಸಿ ಆಸನ ವಸ್ತಿಯ ಕಟ್ಟಲು ಅಂಡವಾತ ಹರ ೬೩

ತ್ರಿಫಳೆ ಬಜೆ ಜಿಲ್ಲಿ ಸುಣ್ಣ ಕುಷ್ಠ ಸದಗುಪ್ಪೆ ಜಟಾಮಾಂಸಿ ಇಂಗು ಇವೆಲ್ಲವಂ ಸಮಂಗೂಡಿ ಎಣ್ಣೆಯಲ್ಲಿ ಅಟ್ಟು ಕುದುರೆಗೆ ಆಸನ ವಸ್ತಿಯಂ ಕಟ್ಟುವುದು ವಾತಹರ ೬೪

ತೊಡೆ ಜಂಘೆ ಪ್ರಜಾಪತಿ ಕಿಬ್ಬಸುರು ಅಂಡ ಹೊಕ್ಕಳು ಹೊಟ್ಟೆ ಇವು ಬಾತರೆ ತೊಡೆಯಲ್ಲಿಯೂ ಪಾಂಡುವಿನಲ್ಲಿಯೂ ಸೆರೆಯಂ ಬಿಡಿಸಿ ರಕ್ತ ಬಿದ್ದ ಬಳಿಕ ಆ ಗಾಯಕ್ಕೆ ಕೆಸರಂ ತೊಡವುದು ೬೫

ಅಂಗಡಿಯ ಮದ್ದು ಬಹಳ ಉಂಟು ಎಂದು ಆಲಸ್ಯವ ಮಾಡುವವನಿಗೆ ಮದ್ದ ಹೇಳಬಹುದೆ ೧೬

ತಗ್ಗಿಯ ತೊಪ್ಪೆಯನೂ ತುಳಿದು ಆ ರಸವನು ಅಂಡಕ್ಕೆ ಬಳಿವುದು ತಗ್ಗಿಯನೂ ಅಂಬಿಲದಲ್ಲಿ ಕಲಸಿ ಹಿಂಡವನಿಕ್ಕುವುದು ೧೭

ಕುದುರೆಯು ಬೀಜದೊಂದು ಬರಿದೊಂದು ಇಳಿದು ಇದ್ದರೆ ಕಾಲು ಕುಂಟಿದರೆ ವೇಧೆಪಟ್ಟರೆ ಅದಂ ಮುಷ್ಕನಾಳವೆಂದೆನ್ನುವುದು ಅದಕ್ಕೆ ತಕ್ಕ ಮದ್ದು ೧೮

ಎರಡು ಬೀಜವನು ಮೊದಲಲ್ಲಿ ಒಂದಾಗಿ ಕಟ್ಟಿ ಸೀರೆಯಲ್ಲಿ ಶೇಖವು ಮಾಡುವುದು ಪಾಳಿಸಿಂದ ತಿಕದ ಮುಂದೆ ಬರೆಯಲು ಮಾಣ್ಗು ೧೯

[೨೦ ನೆಯ ಪದ್ಯಕ್ಕೆ ಟೀಕು ಇಲ್ಲ]

ಸಣ್ಣ ಕೆಸರಂ ಕಾಸಿ ಅದಜಿಲ್ಲಿ ಸಾಸವೆ ಕಲ್ಲುಪ್ಪು ಕಣಿಕ ಉದ್ದಿನಪುಡಿಯಂ ಉಮ್ಮತ್ತದ ರಸದಿಂದಲಿ ಕಲಸಿ ಅಂಡಜಾತ ಎಡೆಗಳಿಗೆ ಪೂಸೂದು ೨೧

[೨೨–೨೩ ಪದ್ಯಗಳಿಗೆ ಟೀಕು ಇಲ್ಲ]

ಹನ್ನೆರಡನೆಯ ಅಧ್ಯಾಯ

ಕೆರಕು ತುರಿ ಕಜ್ಜಿ ಕಂಚುಕೆ ಖುರರಪಂಬುಳು ಪುತ್ತುಬಾಹು ಭಗಂಧರ ಅರಿಷೆ
ಕುಷ್ಟ ನರವಲಿಯಿವೆಲ್ಲವೂ ಕೆಟ್ಟಹುಣ್ಣೆಂದು ಅರಿವದು ೧

ತಳದಲ್ಲಿ ಕುಟ್ಟಿಕೆಯಲ್ಲಿ ಬಾಯಲ್ಲಿ ಕಂಕುಳಲ್ಲಿ ಕಣ್ಣನೀರು ಬೀಳುವ ತಾವಿನಲ್ಲಿ
ಉರದಲ್ಲಿ ಕೊರಳಲ್ಲಿ ಪಾಂಡುವಿನಲ್ಲಿ ಹುಣ್ಣುಗಳು ಹುಟ್ಟಲು ಹೊಲ್ಲ ೨

ಎಮ್ಮೆಯ ಕೊಂಬಿನಿಂದ ಹಲವು ಪರಿಯ ಆಯುಧಂಗಳಿಂದ ದಸಿಗಳಿಂದ ಆದ
ಹುಣ್ಣಂ ಅಱೀವುದು ೩

ಉತ್ತರಣೆ ಕೊಳವಳಿಕೆ ಇವಂ ಸುಟ್ಟು ಬೂದಿಯಂ ಗೋಮೂತ್ರದಲ್ಲಿ ಕಲಸಿ
ತೊಡೆಯಲು ಕೆಟ್ಟ ಹುಣ್ಣುಗಳು ಮಾಣ್ಬು ೪

ನೆಲದಲ್ಲಿ ಮದ್ದಂ ಸುಟ್ಟು ಆ ಬೂದಿಯಂ ಗುಡಿಸಿಕೊಂಡು ಎರಡುಮಡಿ ನೀರ
ನೆಱೆದು ಸೋದಿಸಿ ಆ ನೀರಂ ಕಾಸಿ ಮಂದವಾಗಿ ಆದ ಬಳಿಕ ಅಡಿಸುವುದು ೫

ಅದನು ಒಳ್ಳೆಯ ಮಡಕೆಯಲ್ಲಿ ಹೊಯಿದು ಅಂಬಿಲ ಎಕ್ಕದ ಹಾಲು ಆಡಿನ
ಹಾಲು ಜೆಲ್ಲ ಎಮ್ಮೆಯಹಾಲು ಇವ ಹದನಱಿದು ಅಟ್ಟು ತೊಳಸುವುದು ೬

ಗಿಣಿಮೂಗಿ ಅರಿಸಿನ ಹಿಪ್ಪಲಿಮೂಲ ಇಂಗು ಶುಂಠಿ ಹಿಪ್ಪಲಿ ನುಗ್ಗಿ ತಗ್ಗಿ
ನೆಲ್ಲಿಯಕಾಯಿ ಯವಕ್ಷಾರ ಸಾಸವೆ ಬಜೆ ಅತಿಬಜೆ ೭

ಹೊಸಸುಣ್ಣವನು ಸೋದಿಸಿ ಅದಂ ಮೊದಲ ಬದಿಯಲ್ಲಿ ಕೂಡಿ ಇವೆಲ್ಲರ
ರಸ ಒಂದು ಪಡಿಯಂ ಕೂಡಿ ತೊಳಸುತ್ತ ಮತ್ತಂ ೮

ಅಟ್ಟು ಇಳುಹಿ ತಂದು ಕೈಯಲ್ಲಿ ಮುಟ್ಟದೆ ಮತ್ತೊಂದು ಗಡಿಗೆಯಲ್ಲಿ ಎಱೆದು
ಇಱಿಸಿ ಹದನರಿದು ಪೂಸಲು ಕೆಟ್ಟ ಹುಣ್ಣುಗಳು ಮಾಣ್ಗು ೯

ಮಾಘಮಾಸದಲ್ಲಿ ಬಿಸಿಲಿನಲ್ಲಿ ಬೇಸಗೆಯಲ್ಲಿ ಬಿಸಿಲು ಹೋದ ಬಳಿಕ ಮುಗಿಲು
ಮಳೆಯು ಈ ಕಾಲಂಗಳಲ್ಲಿ ವಿಚಾರಿಸಿಕೊಂಡು ೧೦

ಆ ಹುಣ್ಣುಗಳಿಗೆ ಅರಳೆ ಚೆನ್ನಾಗಿ ಇಕ್ಕಿ ಕೆಟ್ಟ ಹುಣ್ಣಿನ ರಸತಿಗೆಯಂ
ಪೋಹಾಗೆ ಶಾಖವನು ಹಾಲು ತುಪ್ಪದಲ್ಲಿ ಮಾಡುವುದು ೧೧

ಹೊಗೆಯವರ್ಣ ಅರೆನೇರಿಲತನಿವಣ್ಣವರ್ಣವಾಗಿಯಿದ್ದರೆ ಅದಕೆ ಚಿತ್ರ
ಮೂಲನ ಸಮೂಲವಂ ಸುಟ್ಟು ಆ ಬೂದಿಯಂ ತಳಿದು ಮತ್ತೆ ೧೨

ಹಾವು ಮೆಕ್ಕೆ ಬೇರಂ ಎಕ್ಕದ ಹಾಲಲ್ಲಿ ತೊಯಿದು ನಾಳಿ ನರುಹುಣ್ಣಿನ ಬೇರಿಗೆ ಬತ್ತಿಯನೇರಿಸಿ ಹುಣ್ಣನು ಚೆನ್ನಾಗಿ ಶೋಧಿಸುವುದು ೧೩

ಎಕ್ಕದ ಹಾಲನು ಉಪ್ಪನು ಕಣಿಕದಲ್ಲಿ ಕೂಡಿ ಬತ್ತಿಯಂ ಮಾಡಿ ಆ ಹುಣ್ಣಿಗೆ ಊರಿಸಿ ಒಂದೆರಡು ದಿನವಿರಿಸಿ ಮತ್ತೆ ತೆಗೆದು ಎಣ್ಣೆಯನು ತೊಡೆದರೆ ಆ ನಾಳೀವ್ರಣಂ ಮಾಣ್ಗು ೧೪

ಬೆಣ್ಣೆಯನೂ ಮತ್ತಿಯ ತೊಪ್ಪೆಯನೂ ಹಿರಿಯ ಮದ್ದಿನಬೇರು ಅಂಬಿಲ ಜೇನತುಪ್ಪ ಇವೆಲ್ಲವಂ ಕೂಡಿ ಅರದು ಆ ಹುಣ್ಣಿಗೆ ದಿನಂಪ್ರತಿಯಲ್ಲೂ ಇಡಲು ಎಲ್ಲಾ ಹುಣ್ಣುಗಳೂ ಮಾಣ್ಗು ೧೫

ಕೊಳುಗುಳಿಕೆ ಹುಣಿಸೆ ಎತ್ತುನಾಲಗೆ ಇದಜವಲೆಯಂ ಅರದು ಎಳ್ಳೆಣ್ಣೆಯಲ್ಲಿ ಕಲಸಿ ಹುಣ್ಣಿಗೆ ಇಕ್ಕಿ ಮೇಲೆ ತೊಡೆವುದು ೧೬

ಹಾಲಮರಗಳು ಅತ್ತಿ ಆಲ ಗೋಣಿ ನೇರಲು ಇವುಮೊದಲಾದವರ ತಿಗುಡಂ ಎಳನೀರಿನಲ್ಲಿ ಅರೆದು ತುಪ್ಪವಂ ಕಲಸಿ ಆ ಹುಣ್ಣಿಗೆಯಿಕ್ಕುವುದು ೧೭

ಕಾಗೆದೊಂಡೆ ಜೇನುತುಪ್ಪ ಮತ್ತಿಯತಿಗುಡು ಹಿರಿಯಮದ್ದು ಇವೆಲ್ಲವಂ ಅರದು ತುಪ್ಪದಲ್ಲಿ ಕಲಸಿ ಹುಣ್ಣಿಗೆ ಇಕ್ಕಲು ಮಾಣ್ಗು ೧೮

ಉಪ್ಪನೂ ಜೋಳವನೂ ಮಸಿಯಾಗಿ ಹುರಿದು ಎಣ್ಣೆಯಲ್ಲಿ ಅರದು ಕಜ್ಜಿಗೆ ಕೆಟ್ಟ ಹುಣ್ಣಿಗೆ ಇಕ್ಕಲು ಮಾಣ್ಗು ೧೯

ಹರಳು ಆಗದ ಹಾಗೆ ಸುಣ್ಣದ ಪುಡಿಯಂ ಅರುವೆಯಲ್ಲಿ ಸೋದಿಸಿ ಅರಿದಳ ವನೂ ಬೆರಸಿ ಚೂರ್ಣವಂ ಮಾಡಿ ತುಪ್ಪದಲ್ಲಿ ಅಟ್ಟು ಕೆಟ್ಟ ಹುಣ್ಣುಗಳಿಗೆ ತೊಡೆಯಲು ಮಾಣ್ಗು ೨೦

ಬಿಳಿಯ ಅವುಡಲದ ಬೇರಂ ಗೇರಹರಳಂ ಕೂಡಿ ಅರದು ಎಣ್ಣೆಯಲ್ಲಿ ಅಟ್ಟು ಆ ಎಣ್ಣೆಯ ಕೆಟ್ಟ ಹುಣ್ಣಿಗೆ ತೊಡೆಯೆ ಮಾಣ್ಗು ೨೧

ಗೇರಹರಳು ಹೊಂಗೆಯ ಬೀಜ ಚೆಂಗಣಗಿಲ ಕೋಷ್ಠ ತಿಲ ಸೈಂಧವ ಸದ್ಯಕ್ಷಾರ ಇವೆಲ್ಲವಂ ಕೂಡಿ ಅರದು ಆಡಿನ ಹಾಲಲ್ಲಿ ಅರದು ಲೇಪವಂ ಮಾಡುವುದು ೨೨

ಗರುಗವಾಗಲಿ ಉಮ್ಮತ್ತದೆಲೆಯಾಗಲಿ ನರಮೂತ್ರದಲ್ಲಿ ಉಪ್ಪುವೆರಸಿ ಅರದು ಕುದುರೆಯ ಹುಣ್ಣಿಗೆ ಬಳಿವುದು ೨೩

ಬಹಳ ದಿನದ ಹುಣ್ಣುಗಳಿಗೆ ಗುಳಿಯಾಗಿಯಿರ್ದಡಂ ಉಬ್ಬಿಯಿರ್ದಡಂ ಬಾತು ಯಿರ್ದಡಂ ಗಂಟು ಗಟ್ಟಿಯಿರ್ದಡಂ ಅದಕ್ಕೆ ತಕ್ಕ ಬರೆಯಂ ಬರೆವುದು ೨೪

ಸೋರೆಯೆಲೆಯಂ ಅರದು ಕೆಟ್ಟ ಹುಣ್ಣುಗಳಿಗೆ ಇಕ್ಕಿ ಮೂಱು ನಾಲ್ಕು ದಿನದ ಮೇಲೆ ಎಣ್ಣೆಯಲ್ಲಿ ಅದಂ ಅಟ್ಟು ತೊಡೆವುದು ಆ ಎಲೆಯಂ ತುಪ್ಪದಲ್ಲಿ ಶೇಖವಂ ಮಾಡುವುದು ೨೫

ಹೊಸ ಸುಣ್ಣ ಸದ್ಯಕ್ಷಾರವನೂ ಕೂಡಿ ಆ ಹುಣ್ಣಿಗೆಯಿಕ್ಕುವುದು ೨೬

ನೊರೆವಾಲಲ್ಲಿ ಕಲ್ಲುಪ್ಪು ಗರುಗದ ರಸ ಉಮ್ಮತ್ತದ ಸೊಪ್ಪಿನ ರಸ ಗೇರತುಪ್ಪ ಇವೆಲ್ಲವಂ ಕೂಡಿ ಅಟ್ಟು ಪೂಸಲು ನಾಳಿವ್ರಣ ಕೆಡುಗು ೨೭

[೨೮ನೆಯ ಪದ್ಯಕ್ಕೆ ಟೀಕು ಇಲ್ಲ]

ಹದಿಮೂರನೆಯ ಅಧ್ಯಾಯ

ಮೂತ್ರ ರಕ್ತದ ಹಾಗೆ ಬಿಡುವುದು ಲದ್ದಿಯುಂ ಒಣಗಿದಂತೆ ಇಕ್ಕುವದು ಹುಲ್ಲು ಮೇಯದು ಖಾಣಮನೊಲ್ಲದು ಅದು ಜ್ವರ ತೋರಿತೆಂದರಿವುದು* ೧

ಕುದುರೆಗೆ ಜ್ವರ ತೋರಿತ್ತು ಎಂದು ಅರಿದು ಬೇಗ ಚಿಕಿತ್ಸೆಯುಂ ಮಾಡುವುದು ೨

ಬೇವಿನ ಎಲೆಯುಂ ತುಳಿದು ಪಿಂಡವನಿಕ್ಕಿ ಉಪ್ಪುಮುಟ್ಟಲಾಗದು ಮೇಹನೂ ಅಲ್ಪವಾಗಿ ಕರಿಕೆಯ ಹುಲ್ಲಿಯಿಕ್ಕಿ ಬಿಸಿಲಾದ ಠಾವಿಲಿಯಿರಿಸುವುದು ೩

ಪಿತ್ತಜ್ವರವೆಗ್ಗಳವಾದರೆ ಕುದುರೆಯ ಬಾಯಿಬತ್ತುವಡೆ ಸುರೆಯಲ್ಲಿ ಅಣಿಲೆ ಕಾಯಿ ಹಿಪ್ಪಲಿ ಯಿಂಗು ಸಂವತ್ಸರಲವಣ ೪

ನೊರೆವಾಲಲ್ಲಿ ಹಾಲನೂ ಸಕ್ಕರೆಯನೂ ಕೂಡಿಕೊಂಡು ಪಾನಾಂತರದಲ್ಲಿ ಕುದುರೆಗೆ ಹಾಲಬತ್ತಿಯನೇರಿಸುವುದು ೫

ರಾಜಾನ್ನದಕ್ಕಿಯ ಓಗರವನು ಜೇನುತುಪ್ಪವನೆರದು ಕಲಸಿ ಇಕ್ಕಿ ಕರಿಕೆಯ ಹುಲ್ಲನೂ ಹಾಕಿ ಗಾಳಿ ಹಾಗೆ ಬಿಸಿಲುಯಿಲ್ಲದ ಠಾವಿನಲ್ಲಿ ಕಟ್ಟುವುದು ೬

[೭ನೆಯ ಪದ್ಯಕ್ಕೆ ಟೀಕು ಇಲ್ಲ]

ಕುದುರೆಯ ಮುಖದಲ್ಲಿ ಕಣ್ಣಿನಲ್ಲಿ ಶ್ಲೇಷ್ಮ ತೊರದು ಬೀಳುತ್ತಾ ಮೇಹ ನೊಲ್ಲದೆ ಇದ್ದರೆ ಅದಂ ಶ್ಲೇಷ್ಮಜ್ವರ ತೋರಿತೆಂದರಿವುದು ೮

---

* ಅಡಿಟಿಪ್ಪಣಿಯಲ್ಲಿರುವ (ಜ) ಪ್ರತಿಯ ಪದ್ಯಕ್ಕೆ ಟೀಕು

ನೆಳಲ ಸಾರುವುದು ಕಣ್ಣ ನೀರು ಬೀಳುವುದು ಶ್ವಾಸಮಾಡುವುದು ಬೆವರುವುದು ಕಣ್ಣು ಕೆಂಪಾಗಿಯಿರುವುದು ಮೇಯದು ಈ ಪ್ರಕಾರವಾಗಿ ಇದ್ದರೆ ಜ್ವರ ತೋರಿತು ಎಂದು ಅರಿದು ಚಿಕಿತ್ಸೆಯನು ಮಾಡುವುದು ೨

ಈಶ್ವರಿಯ ಸಮೂಲವಂ ತುಳಿದು ಜೇನತುಪ್ಪದಲ್ಲಿ ಕಲಸಿಯಿಕ್ಕುವುದು ಕಳವೆಯ ಕೂಳನೂ ಹೆಸರ ಕಟ್ಟನೂ ಕಲಸಿಯಿಕ್ಕಲು ಶ್ಲೇಷ್ಮಜ್ವರ ಹರ ೯

ಕುದುರೆ ಮರವೆಯಾಗಿ ಇರ್ದಡಂ ಥಟ್ಟನೆ ತಿರುಗುವಡಂ ಮೂರ್ಛೆಯಾಗಿ ಇರ್ದಡಂ ಲದ್ದಿಯಲ್ಲಿ ನೊರೆಯೂ ರಕ್ತವೂ ಕೂಡಿಕೊಂಡು ಇದ್ದಡಂ ಅದಂ ಜ್ವರ ಸನ್ನಿಪಾತವೆಂದಱಿವುದು ೧೦

[೧೧ನೆಯ ಪದ್ಯಕ್ಕೆ ಟೀಕು ಇಲ್ಲ]

ಘೋರನೆ ಉಚ್ಚುವುದು ಆ ದ್ವಾರವು ಗುಳಿಯಾಗಿ ತೆರದಿಹುದು ಬೊಬ್ಬುಳಿಕೆ ಯಾಗಿ ಇಱುವದಂ ವಾತಾತಿಸಾರವೆಂದಱಿವುದು ೧೨

ದಾಳಿಂಬದ ಕೊನರು ದರ್ಭೆಯ ಚಿಗುರು ಬೆಳದ ತಿಗುಡು ಇಪ್ಪೆಯ ತಿಗುಡು ಇವೆಲ್ಲರ ರಸದಿಂ ರಾಜಾನ್ನದ ಅಕ್ಕಿಯ ಪಾಯಸವನಟ್ಟು ಆರಿಸಿ ಜೇನತುಪ್ಪವಂ ಕಲಸಿ ಯಿಕ್ಕಲು ಅತಿಸಾರ ಮಾಣ್ಗು ೧೩

ಯಷ್ಟಿಮಧುಕ ಪೊಸತುಪ್ಪ ಬೆಳದಹಣ್ಣು ಜೇನುತುಪ್ಪ ಮೊಸರಂ ಕೂಡಿ ಇಕ್ಕಲು ವಾತಾತಿಸಾರ ಮಾಣ್ಗುಂ ೧೪

ಬಿಸುಸುಯ್ವುದು ಬಡವಹುದು ಸತ್ವಗೆಡುವುದು ದಾಹವೆತ್ತುವುದು ಶೈತ್ಯವ ಬಯಸುವುದು ರಕ್ತವಾಗಿ ಗತ್ತವಮಾಡುವುದು ಇದು ರಕ್ತಾತಿಸಾರಲಕ್ಷಣವೆಂದಱಿ ವುದು ೧೫

ಬಹಳ ಬಡವಾಗಿ ಸುಯಿವುತ್ತಿರಲು ಚಿಂತಾಕ್ರಾಂತನಾಗಿ ಇರಲು ಅದಂ ಶ್ಲೇಷ್ಮಾ ತಿಸಾರವೆಂದಱಿದು ಹಿಪ್ಪಲಿಯಂ ಅರದು ತುಪ್ಪದಲ್ಲಿ ಕಲಸಿ ಇಕ್ಕಲು ಶ್ಲೇಷ್ಮಾತಿಸಾರಂ ಕೆಡುಗುಂ ೧೬

ಅರಿಸಿನ ಎಕ್ಕೆ ಚೆಂಗಣಗಿಲ ಕೋಷ್ಠ ಸಾಸವೆ ಸದ್ಯಕ್ಷಾರ ಇವೆಲ್ಲವಂ ಸರಿಗೂಡಿ ಮೂತ್ರದಲ್ಲಿ ಅರೆದು ಪೂಸಲು ಕುದುರೆಯ ಕಜ್ಜಿ ಮಾಣ್ಗು ೧೭

ಮರದರಿಸಿನ ಉತ್ತರಣೆ ಕರಿಯೆಳ್ಳು ಗೇರಗೊಟ್ಟೆ ಇವೆಲ್ಲವಂ ಕೂಡಿ ಅಟ್ಟು ಪೂಸಲು ಕಜ್ಜಿ ಮಾಣ್ಗು ೧೮

[೧೯ನೆಯ ಪದ್ಯಕ್ಕೆ ಟೀಕು ಇಲ್ಲ]

ಮುಂಡಗಳ್ಳಿಯನೂ ಎಕ್ಕವನೂ ಸುಟ್ಟು ಕರಿಮಾಡಿ ಎಳ್ಳನೂ ಹುರಿದು ಕರಿ ಮಾಡಿ ಮೂತ್ರದಿಂದರೆದು ಪೂಸಲು ಕಜ್ಜಿ ಮಾಣ್ಗು ೨೦

ಮನುಷ್ಯರಿಗೆ ಕುದುರೆಗೆ ಜೀವಧನಗಳಿಗೆ ಕಜ್ಜಿಯಾದರೆ ಹೊಂಗೆಯ ಎಣ್ಣೆಯಂ ಪೊಸ ಸುಣ್ಣವಂ ಕೂಡಿ ಪೂಸಲು ಮಾಣ್ಗು ೨೧

ಸಜ್ಜರಸವನೂ ಪುಡಿಮಾಡಿ ಹೊಸತುಪ್ಪದಲ್ಲಿ ಕಲಸಿ ಇಕ್ಕಲು ಮೂಜು ದಿನಕೆ ಕಜ್ಜಿ ತದ್ದುಗಳೆಲ್ಲಂ ಮಾಣ್ಗು ೨೨

ಎವೆ ಕಣ್ಣು ಮುಚ್ಚಿ ಮುಖ ಬಾಲಿಕೆಯಾಗಿ ನೀರೋಡಿ ಚೇಷ್ಟೆಗೆಟ್ಟು ಬಾಲವಂ ಬೀಸದೆ ರಕ್ತವಂ ಮೂತ್ರಿಸುತ್ತಿರಲು ಆ ಕುದುರೆ ಬದುಕದು ೨೩

ಮುಖದಿಂ ಶ್ಲೇಷ್ಮ ಸುರಿವುತ್ತಲಿರಲು ರಕ್ತವೂ ಹುಳುಗಳೂ ಕೂಡಿ ಲದ್ದಿಯ ನಿಕ್ಕಲು ಭರವಾಗಿ ಬೀಳುತ್ತೇಳುತ್ತ ಹೊರಳುತ್ತವಿರಲು ಈ ಗುಣದ ಕುದುರೆಗೆ ಮದ್ದನು ಇಕ್ಕಿದರೆ ಬದುಕದು ೨೪

[೨೫ ನೆಯ ಪದ್ಯಕ್ಕೆ ಟೀಕು ಇಲ್ಲ]

ಕೊರಳು ಉಜುಗಿರ್ದಡಂ ಮೂಗಿನಲ್ಲಿ ರಕ್ತ ಸುರಿವುತಿರ್ದಡಂ ಬಾಯಲ್ಲಿ ಶ್ಲೇಷ್ಮ ಸುರಿದಡಂ ವಶಪಳಿದಡಂ ಬಾಲವ ಬೀಸದೆ ಇದ್ದಡಂ ಆ ಕುದುರೆ ಏನು ಮಾಡಿಯೂ ಬದುಕದು ೨೬

ನೊರೆ ಸಹ ಲದ್ದಿಯನಿಕ್ಕಲು ದಡದಡಿಸಿ ನಡೆಯಲಾರದೆ ಇರಲುಂ ಅದಂ ರಸ ದೋಷವೆಂದರಿವುದು ೨೭

ಇಪ್ಪೆಯ ಹೂವು ಒಂದು ಬಳ್ಳವ ನೀರಲ್ಲಿ ಅರೆದು ಹಸುವಿನ ಹಾಲಲ್ಲಿ ಕಲಸಿ ಇಕ್ಕಲು ರಸದೋಷ ಕೆಡುವುದು ೨೮

ಮೊದಲು ಹೇಮಂತಋತುವಿನಲ್ಲಿ ಹೇರಿದ ಕವಳವನಿಕ್ಕಿ ಮತ್ತೆ ಮೂರು ದಿನಕೆ ಲೇಪಂಗೆಯ್ಯೆ ರಸದೋಷಹರ ೨೯

ಉಪ್ಪು ಕೊಮ್ಮೆ ಹಿಪ್ಪಲಿ ಯಾಲಕ್ಕಿ ಗರುಗದ ಸೊಪ್ಪು ಇವೆಲ್ಲವಂ ಸಮಂಗೂಡಿ ಮೃದುವಹ ಮರದ ತಿಗುಡಿನಿಂದ ಇಕ್ಕಲು ರಸದೋಷ ಹರ ೩೦

ಮಳಲನೂ ಕಡುಬಿಸಿಯಾಗಿ ಹುರಿದು ನೆನಹಿದ ಸೀರೆಯಲ್ಲಿ ಪೊಟ್ಟಣವಂ ಕಟ್ಟಿ ಶಿರದಿಂದ ನೆಟ್ಟಿಲು ಕಾಲು ಪರಿಯಂತರ ಶೇಖಂ ಮಾಡುವುದು ೩೧

ಮಾಘಮಾಸದಲ್ಲೂ ಮಳೆಗಾಲದಲ್ಲೂ ಶೇಖವಂ ಮಾಡುವುದು ಬೇಸಗೆಯಲ್ಲೂ ಆಷಾಢಮಾಸದಲ್ಲೂ ಶೇಖವಂ ಮಾಡಲಾಗದು ೩೨

ಅಳಿವೆಹ ಮೇವುದುಂ ಕಣ್ಣು ಕುಳಿವುದುಂ ಕೊರಳು ಬಸಿವುದುಂ ಗಂಟು ಗಟ್ಟುವುದುಂ ಬಸುಱಿಕ್ಕಳಿಸುವುದುಂ ದಡದಡಿಸಿ ಕಾಲನೆಳವುದುಂ ಅದಂ ಮೃಗಜೃಂಭ ನೆಂದಱಿವುದು ೩೩

ಅದಂ ಬಿಸಿಲಿನಲ್ಲಿ ಕಟ್ಟಿಸುವುದು ಬಿಸಿಲಿಲ್ಲದೆ ಗಾಳಿ ಮಳೆ ಮೋಡಗಳಾದಂದು ಮನೆಯಲ್ಲಿ ಕಟ್ಟಿ ನೆಟ್ಟಿಲವು ಮೊದಲುಗೊಂಡು ಪಿರುಡುಗಳು ಪರಿಯಂತ ಶೇಖವಂ ಮಾಡುವುದು ೩೪

ಬಜೆ ಕೊಡಸಿಗೆಯ ಬೀಜ ಇಂಗು ಅತಿಬಜೆ ಕೋಷ್ಠ ಪಂಚಲವಣ ಚಿತ್ರಮೂಲ ಗಜಪಿಪ್ಪಲಿ ಪಿಪ್ಪಲಿ ಅಜಮೋದ ತ್ರಿಫಳೆ ಶುಂಠಿ ಲವಂಗ ಲವಂಗಪತ್ರೆ ನಾಗಕೇಸರ ೩೫

ಮೊದಲು ಪೇಳ್ದ ಔಷಧವೆಲ್ಲವಂ ಕೂಡಿ ಪುಡಿ ಮಾಡಿ ಬಿಸಿನೀರಲ್ಲಿ ಕಲಸಿ ಇಕ್ಕಲು ಮೃಗಜೃಂಭಂ ಮಾಣ್ಗು ೩೬

ಸರಳಂ ಚಂಗಣಗಿಲ ಕೋಷ್ಠ ಮಂಜಿಷ್ಠ ರಾಸ್ನೆ ಬೆಳ್ಳುಳ್ಳಿ ಸೈಂಧವ ತಗರ ಇವೆಲ್ಲವಂ ಕೂಡಿ ಪುಡಿಮಾಡಿ ಕರಿಯಹಸುವಿನ ಹಾಲು ಎಳ್ಳೆಣ್ಣೆ ಇವಂ ಕೂಡಿ ಎಳ್ಳೆಣ್ಣೆ ಇಳಿಯಲಟ್ಟು ೩೭

ಪದನಱಿದು ಅಟ್ಟು ಯವ ಕ್ಷಾರವಂ ಪುಡಿಮಾಡಿ ತಳಿದು ಆರಿಸಿದ ಎಣ್ಣೆಯಂ ಬಿಸಿನೀರಿಂ ಕೂಡಿ ಎರವುದು ೩೮

ಕುದುರೆಗೆ ಕಣ್ಣ ಕೆಳಗೆ ಉರದಲ್ಲಿ ಕಾಲಿನಲ್ಲಿ ತೋಳುಗಳಲ್ಲಿ ಹಿಂದಣ ಅಪಾನ ಗಳಲ್ಲಿ ಶಿರೆಯ ಬಿಡಿಸುವುದು ೩೯

ಹುರಿದಮಳಲಿಂದೆ ಶೇಖವನೂ ನೆಟ್ಟಿಲುವಿಡಿದು ಜಘನಪರಿಯಂತರಂ ಮಾಡಿ ಕೈಗೆ ಅಳವಾದಡೆ ಶಿರದಿಂದ ನೆಟ್ಟಿಲುವಿಡಿದು ಜಘನಪರಿಯಂತರ ಬರೆವುದು ೪೦

ಬಸುಱು ಎತ್ತಿ ಕಟ್ಟಲು ಮೈ ಸುಕ್ಕಿಸುತ್ತಂ ಇರಲು ಬಾಯಲ್ಲಿ ಲೋಳೆ ಸುರಿ ಪಡಂ ಕಣ್ಣುಬಿಟ್ಟು ಉಬ್ಬಸವಾದಡಂ ಶೂಲೆಯಿಂದ ಕಿವಿ ಕೆತ್ತಿಸಿದಂತೆ ಇದ್ದಡಂ ಹುಲ್ಲು ನೀರು ಖಾಣಗಳನೊಲ್ಲದೆ ಇದ್ದಡಂ ೪೧

ಕಾಲುದಡದಡಿಸಿದಡಂ ಹಲ್ಲುಗಳು ಗಿಡಿಗಿಱಿಕದಿರಲುಂ ಬಾಲ ಬಿದ್ದ ಹಾಗೆ ಮಿಡುಕದಿರಲುಂ ಅದಂ ಹರಿಣರೋಗವೆಂದಱಿದು ಚಿಕಿತ್ಸೆಯಂ ಮಾಡುವುದು ೪೨

[೪೩ನೆಯ ಪದ್ಯಕ್ಕೆ ಟೀಕು ಇಲ್ಲ]

ಹದಿನಾಲ್ಕನೆಯ ಅಧ್ಯಾಯ

ಕುದುರೆ ಕಡು ಬಿಸಿಲಲ್ಲಿ ಇರ್ದು ತಾಳುಗೆ ಒಣಗಿ ಮುಖ ಒಣಗಿ ನೀರನೂ ಆಹಾರವನೂ ಒಲ್ಲದೆ ತಾಪದಿಂ ದಡದಡಿಸಲು ಅದಂ ತಾಳುರೋಗವೆಂಬುದು ೧

ಕುದುರೆ ದಡದಡಿಸಿ ಮೇಯದಿರ್ದೊಡೆ ತಡವೆನಿಸಿ ಅಲ್ಪ ಅಲ್ಪಂ ಮೇವಡಂ ಕಡುಗುಂದಿ ರೋಮ ಒಡೆದು ಕಣ್ಣು ಕುಳಿಯಾಗಿ ಇದ್ದಡಂ ತಾಳುರೋಗವೆಂಬುದು ೨

ಕುದುರೆಗೆ ಕಣ್ಣ ಕೆಳಗೆ ಸೆರೆಯನೂ ಬಿಡಿಸುವುದು ಗೋಮೂತ್ರ ಎಣ್ಣೆ ಸೈಂಧವ ಇವಂ ಕೂಡಿ ತಾಳುಗೆಗೆ ಒರಸಲು ತಾಳು ರೋಗಂ ಮಾಣ್ಗು ೩

ನಾಲಗೆ ಕರಿದಾಗಿ ಬಾತು ಹುಣ್ಣುಗಳು ಹುಟ್ಟಿ ಶ್ಲೇಷ್ಮ ಸುರಿವುತ್ತಿರಲುಂ ಪ್ರಜಾಪತಿ ಸೋರುತ್ತಿರಲುಂ ಅದಂ ನಾಲಗೆಯರೋಗವೆಂಬುದು ೪

ಹಿಪ್ಪಲಿ ಜೇನತುಪ್ಪ ಚಂಗಣೆಗಿಲ ಕೋಷ್ಠ ಬಜೆ ಜೆಪ್ಪಳಿ ಸೈಂಧವ ಅರಿಸಿನ ಮರವರಿಸಿನ ಇವೆಲ್ಲವಂ ಕೂಡಿ ತುಪ್ಪದಲ್ಲಿ ಕಲಸಿ ಬಾಯಲ್ಲಿ ಇಕ್ಕಲು ಆ ಹುಣ್ಣುಗಳೂ ಮಾಣ್ಗು ೫

ಕೋಷ್ಠ ಕಾಡುಪಡಲ ಅಣಿಲೆಕಾಯಿ ಇವೆಲ್ಲವಂ ಓಗರದಲ್ಲಿ ಅರದು ಇಕ್ಕಿ ಆಡಿನ ಮೂತ್ರ ತುಪ್ಪದಲ್ಲಿ ಸೈಂಧವಮಂ ಅರದು ನಸ್ಯಂ ಮಾಡುವುದು ೬

[೭, ೮, ೯, ೧೦ನೆಯ ಪದ್ಯಗಳಿಗೆ ಟೀಕು ಇಲ್ಲ.]

ಚಿತ್ರಮೂಲ ಅತಿಬಜೆ ದಂತಿಕ ಇಪ್ಪಲಿ ಕಾಗೆದೊಂಡೆ ಗಿಣಿಮೂಗಿ ಇವಂ ಮೂತ್ರದಲ್ಲಿ ಅರದು ಪೂಸಲು ಶೋಭೆ ಮಾಣ್ಗು ೧೧

ಗೇರಹಣ್ಣು ಚಿತ್ರಮೂಲನನೂ ಅರದು ಮನುಷ್ಯರ ಮಲವಂ ಕೂಡಿ ಪೂಸಲು ಶೋಭೆ ಮಾಣ್ಗು ೧೨

ಉರಜಾನು ಜಂಘೆ ಪ್ರಜಾಪತಿ ಈ ಸ್ಥಾನಂಗಳಲ್ಲಿ ಬಾತರೆ ಹುಣ್ಣುಗಳು ಹುಟ್ಟುತ್ತ ಇದ್ದರೆ ಬಾಯಲ್ಲಿ ರಕ್ತಬೀಳುತ್ತ ಇದ್ದರೆ ಅದಂ ಉಳೂಕವೆಂಬರು ೧೩

ಹೊಂಗೆಯ ಬೀಜ ಕಬ್ಬಿನರಸ ಬಜೆ ಹಿಪ್ಪಲಿಮೂಲ ಉಪ್ಪು ಹಿಪ್ಪಲಿ ಅರಿಸಿನ ಮರದರಿಸಿನ ಸಾಸವೆ ಚಿತ್ರಮೂಲ ಉಮ್ಮತ್ತ ಇವೆಲ್ಲವಂ ಗೋಮೂತ್ರದಿಂದ ಅರದು ಗೋಮೂತ್ರ ಆಡಿನ ಮೂತ್ರದಿಂದ ಅಜದು ಪೂಸಲು ಉಳೂಕಂ ಮಾಣ್ಗು ೧೪

ಕಗ್ಗಲಿಹಗಿನು ಮತ್ತಿಯಹಗಿನು ತ್ರಿಫಳೆ ಹಿಪ್ಪಲಿ ಹಿಪ್ಪಲಿಮೂಲ ಚವ್ಯ ಚಿತ್ರ ಮೂಲ ಶುಂಠಿ ಇವೆಲ್ಲವಂ ಚೂರ್ಣಂ ಮಾಡಿ ಧೂಳಿ ಎಂಟು ಭಾಗೆ ಎಳ್ಳೆಣ್ಣೆ ಒಂದು ಭಾಗವಂ ಕೂಡಿ ಕಲಸಿ ೧೫

ಅವಂ ಗೋಮೂತ್ರವಂ ಬೆರಸಿ ಎಣ್ಣೆ ನಿಲೆ ನಾಲ್ಕಱತೊಳಗೊಂದು ಭಾಗವಂ ಹೆಚ್ಚಿಸಿದ ಮೂತ್ರವಂ ಎಱದು ಬತ್ತುವ ಪರಿಯಂತರ ಲೇಪಂ ಮಾಡುವುದು ೧೬

ಬೇವಿನ ಕಷಾಯದಲ್ಲಿ ಹೊಯ್ದು ಆಡಿಸಿ ಹೆಸರಕಟ್ಟು ಜೇನತುಪ್ಪ ಶುಂಠಿ ಹಿಪ್ಪಲಿ ೧೭

ಮೊದಲ ಅಪುಷ್ಪಿಯ ಪುಡಿಮಾಡಿ ಕೊಡುವುದು ಏಳುದಿನ ಪರಿಯಂತರ ಭೋಜನವ ಕೊಡಲು ತೊಡೆ ಜಾನು ಜಂಘೆ ಕೂರ್ಚೆಯಲ್ಲಿ ಇದ್ದ ನಾಳಿಹುಣ್ಣು ಗಳೆಲ್ಲ ಮಾಣ್ಗುಂ ೧೮

ವಾಮೆ ಡ್ರೋಣಿಕೆ ಉಳೂಕಕ್ಕೆ ಸಿದ್ರವಿಗೆ ಘೀಮಾದ್ರಿಗೆ ವಿಸರ್ಪಿಗೆ ಇವೆಲ್ಲ ವಕ್ಕಂ ಕ್ರಮವರಿದು ಕೆಸರಂ ಬಳಿವುದು ೧೯

ತೊಡೆ ಜಘನ ಮುಖ ಕಡೆಗಣ್ಣು ಇವಱಲ್ಲಿ ಹುಣ್ಣುಗಳು ಆದರೆ ತುಪ್ಪವನೂ ಜೇನತುಪ್ಪವನೂ ಕೂಡಿ ಕೊಡುವುದು ಜೇವಣಿಗೆಯನೂ ಮೊದಲು ಹೇಳಿದ ರೋಗ ಹರಿವ ಪರಿಯಂತರ ಕೊಡುವುದು ೨೦

ಹರಿದು ಬಂದು ಬಹಳ ನೀರ ಕುಡಿವಡಂ ಹೊಟ್ಟೆ ವಿಪರೀತವಾದೊಡಂ ಬುದ್ಬುದವಾದೊಡಂ ಅದಂ ಜಲಗರವೆಂಬುದು ೨೧

ಹೊಕ್ಕುಳ ಕೆಳಗಿಬ್ಬೆರಳಲ್ಲಿ ಹೊಕ್ಕುಳ ಮೇಲೆ ಎಡದ ಕೆಲದಲ್ಲಿ ಒಂದು ಬೆರಳಲ್ಲಿ ನಖಜೇಣದಿಂ ಕುಟ್ಟಿ ಶಸ್ತ್ರದಲ್ಲಿ ನಾಲ್ಕು ಅಂಗುಲ ಎರಡು ಅಂಗುಲದಲ್ಲಿ ಶಸ್ತ್ರವ ಬಿಡಿಸುವುದು ೨೨

ಅದಂ ಹದ್ದಿನ ಗಱಿಯಂ ಗುಳಿಗೆಯ ಮಾಡಿ ಕೊಱದು ಅದಱತೊಳಗೆ ಇಕ್ಕಿ ಧಾರೆಯಂ ಬಟ್ಟು ನೀರನೊಸರಿಸುವುದು ೨೩

ಆ ಹುಣ್ಣಂ ಶೋಧಿಸಿ ಜೇನುತುಪ್ಪವಂ ತುಪ್ಪವಂ ಕೂಡಿ ಬಿಡುವುದು ಮತ್ತೆ ಶೇಖಂಗಳಂ ಎಣ್ಣೆಯಲ್ಲಿ ಮಾಡೂದು ೨೩

ಉರದಿಂದ ಎರಡು ಪಕ್ಷದಿಂದಲೂ ಕ್ರೋಡ ಮೂಲದಿಂದ ಬಾಹುಹರಿದರೆ ಅದಕ್ಕೆ ಮೊದಲು ಹೇಳಿದ ಹಾಗೆ ಮುಂದಣ ಕಾಲಲ್ಲಿ ಸೆರೆಯು ಬಿಡಿಸುವುದು ೨೪

ಮರುದೊಂಡೆಯುನರದು ಬೇವಿನ ಕಷಾಯದಲ್ಲಿ ಕೂಡಿ ಪೂಸಲು ಶೋಭೆಹರ ಬಲ್ಲವರಿಗೂ ಅರಿಯದವರಿಗೂ ಇದೆ ಮದ್ದು ೨೬

ಕೆಂತಲಿಯುನ ಗೆಣಸನೂ ನವಣೆಯನೂ ಕೂಡಿ ಸಣ್ಣನಾಗಿ ಅರೆದು ಪೂಸಲು ಶೋಭೆಕೆಡುವುದು ೨೭

ಹುತ್ತವನಗದು ಸತ್ತ ನಾಯಿಯಂ ಹೂಳಿ ಮುಚ್ಚಿರಿಸಿ ಅದೆಲ್ಲಂ ಭೋಗಿಸಿದ ಬಳಿಕ ತೆಗೆದು ಆ ಎಲುಗಳಿಗೆ ಮಣ್ಣ ಮೆತ್ತಿ ಇರಿಸಿ ಆ ಮಣ್ಣಂ ಸಣ್ಣನಾಗಿ ಅರದು ೨೮

ಆ ಮಣ್ಣನೂ ಅಸ್ತಿಯನೂ ಕೂಡಿ ತಗ್ಗಿಯ ಸೊಪ್ಪಿನ ರಸದಲ್ಲಿ ಅರೆದು ಪೂಸಲು ಹೆಸಱಯದು ಬಾಹು ವಿಷದೋಷವೆಲ್ಲಂ ಮಾಣ್ಗು ೨೯

ಸಣ್ಣ ಬಗ್ಗುಡವನೂ ಕಾಸಿ ಅದರೊಳಗೆ ಸಾಸುವೆ ಕಲ್ಲುಪ್ಪು ಕಣಿಕ ಉದ್ದಿನ ಚೂರ್ಣ ಇವೆಲ್ಲವಂ ಹಾಕಿ ಪೂಸಲು ಬಾಹು ಬತ್ತುವುದು ೩೦

ಜಲೋದರ ತಾಳುಗೆ ಜಿಹ್ವರೋಗ ಗಳಗ್ರಹ ದ್ರೋಣಿಕೆ ಕಕ್ಷ ಶೋಭ ಕೆರಕು ಬಾಹು ಇವೆಲ್ಲ ಹದಿನಾಲ್ಕನೆಯ ಅಧ್ಯಾಯದಲ್ಲಿ ಹೇಳಿದವು ೩೧

ಹದಿನೈದನೆಯ ಅಧ್ಯಾಯ

ಹರಳುಗಲ್ಲು ಕೆಸರು ಕೊರಡು ಮುಳ್ಳು ಇಡುಕು ಇಂಥ ಠಾವಿನಲ್ಲಿ ಪೋಹಾಗ ಕೊಳಗು ಸವೆದು ಅಳುಕಿ ನಡೆಯಲು ಅದಂ ತಳರೋಗವೆಂಬುದು ೧

ಆ ಕೊಳಗನೂ ಹಾಲಿನಿಂದ ತೊಳೆದು ಹಾಲುಮರದ ಹಾಲಿಂದ ಕನ್ನೆಯ ದಿಲಗೆಡ್ಡೆ ಲೋಧ್ರ ತ್ರಿಫಳೆಯಿವೆಲ್ಲವಂ ನೀರಿನಿಂದ ಅರೆದು ಜೇನುತುಪ್ಪವನೂ ಕಲಸಿ ಕೊಳವಿಗೆ ಪೂಸುವುದು ೨

ಅರಗು ಸಜ್ಜರಸ ಬೆಲ್ಲವತ್ತದ ಹಗಿನು ಗುಗ್ಗುಳ ಇವೆಲ್ಲವಂ ಕೂಡಿ ಎಣ್ಣೆ ತುಪ್ಪ ದಿಂದರೆದು ಖುರಕ್ಕೆ ಲೇಪಿಸಿ ಇಟ್ಟಿಗೆಯಂ ಕಾಸಿ ಮೆಟ್ಟಿಸಲು ತಳರೋಗಂ ಮಾಣ್ಗುಂ ೩

ಅರಿದಳ ತುಪ್ಪ ಮೆಣಸು ಸಜ್ಜರಸ ಗೇರಹರಳು ಇವೆಲ್ಲವಂ ಕೂಡಿ ಕಾಸಿ ಪೂಸಿ ಇಟ್ಟಿಗೆಯಂ ಕಾಸಿ ಖುರವ ಮೆಟ್ಟಿಸಲು ತಳರೋಗ. ಹರ ೪

ಅರಿದಳ ಲೋಧ್ರ ಎಳ್ಳು ಅರಿಸಿನ ತ್ರಿಫಳೆ ಗೇರಹರಳು ಇವೆಲ್ಲವಂ ಕೂಡಿ ಎಣ್ಣೆ ಯಲ್ಲಿ ಕಾಸಿ ಬಳಸಿ ಪೂಸಿ ಇಟ್ಟಿಗೆಯಂ ಕಾಸಿ ಮೆಟ್ಟಿಸೂದು ೫

ತಳರೋಗಕ್ಕೆ ಇನ್ನೊಂದು ಉಪಾಯವುಂಟು ತ್ರಿಫಳೆಯನೂ ಎಣ್ಣೆಯಲ್ಲಿ ಕಲಸಿ ಇಕ್ಕಲು ಮಾಣ್ಗು ೬

ಕುದುರೆಯು ಕೂರ್ಚದ ಠಾವಿನಲ್ಲಿ ಅತಿನೋವಾಗಿ ಭೀತಿಯಿಂದ ಕುಂಟುತ್ತ ಇರಲು ಅದಂ ಕೂರ್ಚರೋಗವೆಂದೆಂಬುವುದು ೭

ಸರಳ ಕೋಷ್ಠ ಮಂಜಿಷ್ಠೆ ರಾಶ್ಮೆ ಬೆಳ್ಳುಳ್ಳಿ ಸೈಂಧವ ಇವೆಲ್ಲವಂ ಕೂಡಿ ಹಸು ವಿನ ಹಾಲಲ್ಲಿ ಕದಡಿ ಕಾಸಿ ಪೂಸಲು ಕುದುರೆಯು ಕೂರ್ಚರೋಗಂ ಮಾಣ್ಗು ೮

ಕೂರ್ಚರೋಗಕ್ಕೆ ಶೇಖವಂ ಮಾಡೂದು ಗುಣವಾಗದೆ ಇದ್ದರೆ ಹತ್ತಿರೆ ಬರೆಯ ನಿಡುವುದು ೯

ಕುದುರೆ ಕಣ್ಣಿನಲ್ಲಿ ನೀರು ಸೋರುತ್ತಾ ಇರಲು ಪಿತ್ತವೆಂದೆಂಬುವುದು ಕಣ್ಣಿಂ

ಪಕ್ಕ ಸುರಿಯೆ ಶ್ಲೇಷ್ಮವೆಂದಱಿವುದು ನೋವಿಂದ ಕಣ್ಣು ಮುಚ್ಚಿಯಿದ್ದರೆ ವಾತವೆಂದ ಱಿವುದು ೧೦

ಇಂತು ತ್ರಿದೋಷಗಳಿಂದ ತಿಮಿರ ಕಾಚು ಪಟಲ ಹೂವು ಕಣ್ಣುಗಳಲ್ಲಿ ಹುಟ್ಟು ವುದುಂ ೧೧

ಪರಿವ ಪರಕಲಿಸಿ ಹರಿದುಬಹ ಅರಿಯುನರಿವ ತೆರದಲ್ಲಿ ತೆಗೆದು ಸೈಂಧವವನೂ ಚೂರ್ಣವಂ ಮಾಡಿ ಕಣ್ಣಿಗೆಯಿಕ್ಕಲು ಮಾಣ್ಗು ೧೨

ಕಪ್ಪುರ ಸೈಂಧವ ಹಿಪ್ಪಲಿ ಜೇನುತುಪ್ಪ ಇವಂ ನೊರೆವಾಲಲ್ಲಿ ಕೂಡಿ ತುಪ್ಪ ನಿಲಲಿಟ್ಟು ಕಣ್ಣಿಗೆ ಎಚ್ಚಲು ಕಣ್ಣರೋಗ ಮಾಣುವುದು ೧೩

ಅರಗು ತೂಕ ೧ ಅಣಿಲೆ ಕಾಯಿ ತೂಕ ೨ ತಾಱೆಕಾಯಿ ತೂಕ ೩ ಮಣಿಸಿಲೆ ತೂಕ ೪ ಮೆಣಸು ತೂಕ ೫ ಹಿಪ್ಪಲಿ ತೂಕ ೬ ಶಂಖ ತೂಕ ೭ ಬೇವಿನಕಡ್ಡಿ ತೂಕ ೮ ತೂಕವಂ ಕೂಡಿ ಆಡಿನ ಮೂತ್ರದಲ್ಲಿ ಅರದು ಕಣ್ಣಿಗೆ ಎಚ್ಚಲು ಎಲ್ಲಾ ಚಕ್ಷು ರೋಗಂ ಮಾಣ್ಗು ೧೪

ಅರಿಗಣ್ಣು ಪಟಲಗಣ್ಣು ಹಕ್ಕು ರಕ್ತ ಮಂಜು ಮೊಳೆ ತಿಮಿರ ಅರಿಗಣ್ಣು ಹೂ ಗಣ್ಣು ಇವೆಲ್ಲವುಂ ಈ ಅಂಜನದಲ್ಲಿ ಮಾಣ್ಗು ೧೫

ಕುದುರೆಗೆ ವಾತದಿಂದಲೂ ಶ್ಲೇಷ್ಮದಿಂದಲೂ ಕಿವಿಯಲ್ಲಿ ಜೇನೆ ಹುಟ್ಟುವುದು ಅದು ಪಿತ್ಥವಾದರೆ ಕೆಲವು ದಿವಸ ಕಾಡುವುದು ೧೬

ಅಂಬಿಲವನೂ ಸೋದಿಸಿ ಹಸಿಯ ಶುಂಠಿಯುಂ ಜಜ್ಜುಗುಟ್ಟಿ ಹಾಕಿ ಮಾದಲದ ಹಣ್ಣಿನ ರಸವಂ ಕೂಡಿ ಎಳ್ಳೆಣ್ಣೆಯುಂ ಬೆರಸಿ ಕಾಸಿ ಬಿಸಿಯಲಿಕ್ಕಿ ಕಿವಿಯಲ್ಲಿ ಎರೆ ಯಲು ಕರ್ಣರೋಗ ಮಾಣ್ಗು ೧೭

ಗುದದಿಂದ ಪುಟ್ಟಿ ಮರಿಪ್ರೋರಮಡೆ ಬಿಸಿಯ ಹಾಲಲ್ಲಿ ಅದಂ ತೊಳೆದು ಕಿವಿಯ ಲ್ಲಿಯೂ ಗುದದಲ್ಲಿಯೂ ಎಣ್ಣೆಯಲ್ಲಿ ಶೇಖಂ ಮಾಡುವುದು ೧೮

ಅತಿ ಬೆಳೆದು ಅಹ ಪರಿಯಂತರ ತೊಳೆದು ತುಪ್ಪ ಸೈಂಧವ ತಣ್ಣೀರು ಇವಂ ಕೂಡಿ ಒರಸಿ ತುಪ್ಪವನು ಗುದಕ್ಕೆ ಪೂಸುತ್ತ ಬರಲು ಕುದುರೆಗೆ ಗೂದೆ ಹೊರಂಟದು ಮಾಣ್ಗು ೧೯

ಸೊಗಯಿಪ ಅಣೆಬಂಧ ಕೊಲ್ಲಗೆ ಕೊಳೆ ಕೋಮಲಗೆಟ್ಟು ಗಂಟಾದರೆ ಕುದುರೆಗೆ ಅದಂ ಉಂಡಗೆಯೆಂಬುದು ೨೦

ಆ ಗಂಟ ಕೊಯ್ದು ರಕ್ತವಂ ಬಿಡಿಸಿ ಎಳ್ಳೆಣ್ಣೆಯಂ ಪೂಸಿ ಶೇಖವಂ ಮಾಡಿ ಮತ್ತೆ ಶುಂಠಿ ಅರಿಸಿನ ಮರದಅರಿಸಿನ ಇವಂ ಕೂಡಿ ಗೋಮೂತ್ರದಿಂದರೆದು ವಸ್ತ್ರಗಾಳಿತಂ ಮಾಡಿ ಆ ಹುಣ್ಣಿಗೆ ಕಟ್ಟಲು ಗಂಟು ಮಾಣ್ಗು ೨೧

ತಳರೋಗ ಕೂರ್ಜೆ ಉಂಡಗೆ ಗಂಟು ಗಂದೆ ಕಣ್ಣುರೋಗ ಕಿವಿಯರೋಗಂ ಇವೆಲ್ಲವಂ ಹೇಳಿಹೆನು ೨೨

ಹದಿನಾರನೆಯ ಅಧ್ಯಾಯ

ಮತ್ಸ್ಯ ಶೋಫೆ ಗಂಟು ಮುಖದಲ್ಲಿ ಶ್ಲೇಷ್ಮ ಸುರಿವುತ್ತಂ ಇರಲು ರೋಮ ಒಡೆದರೆ ೧

ಜಾಲದ ಕೂದಲು ಉದುರುವಡಂ ನಾಲಗೆ ಕರಿದಾಗಿ ಇದ್ದಡಂ ತಿವಿರವಾಗಿ ಇದ್ದಡಂ ಕೋಪವಾಗಿ ದೃಷ್ಟಿ ಕ್ಷೀಣವಾಗಿ ಇದ್ದಡಂ ವಿಷ ತಾಗಿತೆಂದರಿತು ಚಿಕಿತ್ಸೆಯಂ ಮಾಡುವುದು ೨

ಹಾವು ಕಚ್ಚಿದರೆ ಆ ತಾವಂ ಕೊಯಿದು ತೆಗೆದು ಆ ವಿಷಮಂ ಕಳೆದು ಆ ಗಾಯಕ್ಕೆ ಉಪ್ಪನೂ ತುಪ್ಪವನೂ ಕಲಸಿ ಕಟ್ಟಲು ವಿಷಂ ತೀರ್ಗು ೩

ಮತ್ತೆ ಕುದುರೆಯ ಮೈಯನು ಕೆಸರಿನಲ್ಲಿ ಬಳಿದು ಜೇನತುಪ್ಪಗಳಿಂದಲ್ಲಿ ಲೇಪಿಸಿ ಕಿರುಕುಸಾಲೆಯ ಸಮೂಲಸಂ ತುಳಿದು ಆ ರಸವನೂ ತುಪ್ಪವ ಬೆರಸಿ ಎರೆಯಲು ವಿಷಂ ಮಾಣ್ಗು ೪

ಎರಡು ಸೈಂಧವ ತಿಗುಡುಂ ಆಡಿ ಕಿರುಕುಸಾಲೆಯ ಬೇರು ಇವಂ ಕೂಡಿ ಅಂಬಿಲದಲ್ಲಿ ಅರೆದು ಕುದುರೆಗೆ ಎರೆಯಲು ವಿಷ ಹರ ೫

ಎಮ್ಮೆಯ ಸಗಣಿಯ ರಸವನು ಎರಡು ಮಾನ ತುಪ್ಪದಲ್ಲಿ ಕೂಡಿ ಎರೆಯಲು ವಿಷ ಹರ ಅಂಬಿಲ ಎರಡುಮಾನ ನೀಲಿಯ ಸೊಪ್ಪಿನ ರಸ ಒಂದು ಮಾನ ಇವಂ ಕೂಡಿ ಎರೆಯಲು ವಿಷ ಮಾಣ್ಗುಂ ೬

ಕಡವನ ತಿಗಡನು ಇಡಿದು ತುಪ್ಪದಲ್ಲಿ ಕಲಸಿ ಇಕ್ಕಲು ವಿಷ ಹರ ವಿಷ ಗೆಲ ತಾಗಿದರೆ ತಗ್ಗಿಯ ಸೊಪ್ಪಿನ ರಸವನು ಎರೆಯೆ ವಿಷ ಹರ ೭

ಕುಳಿಕ ಕಚ್ಚಿದರೆ ಕುದುರೆ ನಡ ನಡುಗುವುದು ಬಾವುದು ಕೋಪಿಯಪ್ಪುದು ಅದಕ್ಕೆ ಏಡಿಯ ಬಿಲದ ಮಣ್ಣಂ ತಂದು ಪೂಸಿ ತಗ್ಗಿಯ ಸೊಪ್ಪಿನ ರಸವನು ಕೊಡಲು ಮಾಣ್ಗು ೮

ಹಾವು ಕೀಟಕಂಗಳು ಕಚ್ಚೆ ಆ ಎರಡಕ್ಕಂ ಆಸಡಿಯ ಗೆಣಸು ದಂಟು ಎಲೆ ಹೂವುಕಾಯಿ ಈ ಐದರ ರಸವನು ಕುದುರೆಯ ಕಣ್ಣಿಗೆ ಅಂಜನವ ಇಕ್ಕಿ ಮೂಗಿಗೆ ನಶ್ಯಂ

ಮಾಡಿ ಒಡಲಿಗೂ ಎಱೆಯಲು ವಿಷಗಳು ಮಾಣ್ಗು ೯

ಸ್ಥಾವರವೆಂಬರೆ ಮರ ಗಿಡು ಬಳ್ಳಿ ಕಾಯಿ ಹೂವು ಬೇರಿಂದಾದ ವಿಷಗಳು ಜಂಗಮವೆಂದರೆ ಹಾವು ಮೊದಲಾದ ಕ್ರೂರ ಜೀವಗಳಿಂದಾದ ವಿಷ ಈ ಎರಡು ಪ್ರಕಾರಕ್ಕೂ ಕುದುರೆ ಮನುಷ್ಯರಿಗೂ ಕರಿಯ ನೀಲಿಯ ಬೇರನೂ ಅಂಬಿಲದಲ್ಲಿ ಆಗಲಿ ಹಳೆಯ ನೀರಿಂದಲಾಗಲಿ ಅರದು ಎಱೆಯಲು ಎಲ್ಲಾ ವಿಷ ಹರ ೧೦

ಅಜಮೋದವನು ಎಮ್ಮೆಯ ರಕ್ತದಿಂದಲರದು ಕಲಸಿ ಇಕ್ಕಲು ಹಾವು ಕಚ್ಚಿದ ವಿಷಂ ಮಾಣ್ಗು ೧೧

[೧೨ ನೆಯ ಪದ್ಯಕ್ಕೆ ಟೀಕು ಇಲ್ಲ]

ನಾಗರ ಹಾವಿನ ವಿಷ ಕುದುರೆಯ ಮೂಗ ಹೊಕ್ಕರೆ ಕೂದಲುಗಳೆಲ್ಲಾ ಒಡೆದು ಮೈಯೆಲ್ಲಾ ಗಂಟಾಗಿ ಮುಖವೂ ಬಾತು ಜೋಗಂ ಹೋದಂತೆ ಕುದುರೆ ಮೇಯದು ೧೩

ಕುದುರೆಯ ಮೈಯೆಲ್ಲವನೂ ಅರಿಸಿನದಲ್ಲಿ ಒರಸಿ ಬಳಿಕ ಶುಂಠಿಯ ಅಂಬಿಲದಿಂದ ತೇಯಿದು ನಶ್ಯಂ ಮಾಡಿ ಬಣ್ಣದ ಸೀರೆಯಲ್ಲಿ ಒರೆಸಲು ವಿಷ ಹರ ೧೪

ಅಡವಿಯಲ್ಲಿಯೂ ಸುಡುಗಾಡಿನಲ್ಲಿಯೂ ಕುದುರೆ ಬೆಚ್ಚಿ ಅಂಜಿದರೆ ಅಲ್ಲಿದ್ದ ಭೂತ ಹಿಡಿವುದು ೧೫

ಅದಕ್ಕೆ ಕುದುರೆ ತಿರುಗುತ್ತಲಿಹುದು ಬೀಳುತ್ತಿಹುದು ಮೈಮುಪ್ಪುರಿದು ಹಲ್ಲ ಕಚ್ಚುವುದು ಕಣ್ಣು ಹಲವರ್ಣವಹುದು ಅತಿಭೀತನಾಗಿಯಿಹುದು ಅದು ಅಸಾಧ್ಯವೆಂದಱುವುದು ೧೬

ಅದಕ್ಕೆ ಬೇಗ ಸಮುದ್ರ ಪಾಳವಂ ಮನುಷ್ಯರ ಮೂತ್ರದಿಂದ ಅರೆದು ಕುದುರೆಗೆ ನಶ್ಯಂ ಮಾಡಿ ಅಂಜನವಂ ಇಕ್ಕಲು ಗ್ರಹ ಬಿಡುವುದು ೧೭

ಮೆಣಸು ವಿಳಂಗ ಬಜೆ ಮಣಿಸಿಲೆ ಚಂಗಣಗಿಲ ಕೋಷ್ಠ ಜಟಾಮಾಂಸಿ ಶುಂಠಿ ಇವೆಲ್ಲವಂ ಅರೆದು ಪಿಂಡ ಮಾಡಲು ಗ್ರಹದೋಷಂ ಮಾಣ್ಗು ೧೮

ಕುದುರೆ ಬಹಳ ಬಡವಾಗಿ ಮೈಯೆಲ್ಲವೂ ಸೊರಗಿದು ಮೇಯದೆ ಅಳಿಸೋಪ ಮೇವಡಂ ಧ್ಯಾನಿಸುತಿಹುದು ಮೂಗಿನಲ್ಲಿ ನಾರುತ್ತಿಹುದುಂ ಅದಂ ಕ್ಷಯರೋಗವೆಂದಱುವುದು ೧೯

ಕರಿಯೆಕ್ಕೆಯ ಹುಲ್ಲುಕಲ್ಲುಪ್ಪನುಂ ಅಂಬಿಲದಲ್ಲಿ ಕಲಸಿ ಇಕ್ಕಲು ಕುದುರೆಯ

ಕ್ಷಯರೋಗ ಮಾಣ್ಬ ೨೦

ಹೆಗ್ಗುಳ್ಳ ನೆಲಗುಳ್ಳ ತ್ರಿಫಲೆಯರಸ ಚಿತ್ರಮೂಲನ ಬೇರು ಇವೆಲ್ಲವಂ ಕೂಡಿ ಚಾರಿಸಿ ಇಕ್ಕಲು ಆರೋಗ್ಯ ಕ್ಷಯರೋಗ ಹರ ೨೧

ಹೇಮವರ್ಣ ನೀಲ ಕಪ್ಪು ಕೆಂಪು ಹಸುರು ಈ ೫ ವರ್ಣದ ಗುಗ್ಗುಳದ ಪರೀಕ್ಷೆಯ ನೋಡುವುದು ೨೨

ಈ ೫ ತೆರದ ಗುಗ್ಗುಳದಲ್ಲಿ ನಾಲ್ಕು ಭೇದವನಱಿವುದು ೨೩

ಆನೆಗೆ ನೀಲವರ್ಣ ಕುದುರೆಗೆ ಹಸಿರು ವರ್ಣ ಮನುಷ್ಯನಿಗೆ ಪೀತಾಂನ್ನ ಬಣ್ಣ ವಿಚಾರಿಸಿಕೊಂಬುದು ೨೪

ದಿನದಿನಕ್ಕೆ ಕುದುರೆಗೆ ಒಂದೊಂದು ಹಲವ ಹೆಚ್ಚಿಸಿ ಐದು ದಿನ ಪರಿಯಂತರ ಕೊಟ್ಟು ಮತ್ತೆ ಒಂದೊಂದು ಹಲವ ಇಳುಹಿಕೊಂಡು ಬಹುದು ೨೫

ಕುದುರೆಗೆ ಗುಗ್ಗುಳವನೂ ತುಪ್ಪವೆರಸಿ ಆಶ್ವಯುಜ ಕಾರ್ತಿಕ ಈ ಎರಡು ತಿಂಗಳೂ ಜೈಗಿನಲ್ಲಿ ಇಕ್ಕುವುದು ಚೈತ್ರ ವೈಶಾಖ ಈ ಎರಡು ತಿಂಗಳೂ ರಾತ್ರೆಯಲ್ಲಿ ಇಕ್ಕುವುದು ೨೬

ಜ್ಯೇಷ್ಠ ಆಷಾಢ ಶ್ರಾವಣ ಭಾದ್ರಪದ ಈ ನಾಲ್ಕು ತಿಂಗಳೂ ಗುಗ್ಗುಳವನು ತುಪ್ಪದಲ್ಲಿ ಕಲಸಿ ಹದನಱಿದು ಶುದ್ಧ ಪಾಡ್ಯ ಮೊದಲು ಆ ಪಂಚಮಿ ಪರಿಯಂತರ ಐದುದಿನವಿಕ್ಕುವುದು ಬಹುಳ ಪಾಡ್ಯ ಮೊದಲು ಆ ಪಂಚಮಿ ಪರಿಯಂತರ ಐದುದಿನ ವಿಕ್ಕುವುದು ಈ ಪ್ರಕಾರದಲ್ಲಿ ಆ ನಾಲ್ಕು ತಿಂಗಳೂ ಕುದುರೆಗೆ ಪೋಷಣವನೂ ಇಕ್ಕಲು ಬಲವಹುದು ೨೭, ೨೮

ಈ ಹೇಳಿದ ಕ್ರಮದಲ್ಲಿ ಹನ್ನೆರಡು ತಿಂಗಳಲ್ಲಿ ಕವಳವನಿಕ್ಕಲು ಕುದುರೆಗೆ ನಿರೋಗವಾಗಿ ಮಹಾಬಲವಹುದು ೨೯

ಈ ಗುಗ್ಗುಳರಸಾಯನವನು ಕೊಟ್ಟು ಬಳಿಕ ಮೇಲೆ ಅಣಿಲೆಯ ಕಾಯನೂ ಬಿಡದೆ ಇಕ್ಕುವುದು ೩೦

ಬೇವಿನ ಕಷಾಯವನೂ ಗೋಮೂತ್ರವನೂ ಮಣಿಸಿಲೆಯಂ ತೇದು ಓಗರ ವನೂ ಕಲಸಿ ಕಬ್ಬಿನದ ಬಟ್ಟಲಲ್ಲಿ ಕಲಸಿಯಿಕ್ಕುವುದು ೩೧

ಕಿಱುಗುದುರೆಗೆ ಮಣಿಸಿಲೆಯನೂ ಮೊದಲು ಹೇಳಿದ ಓಗರದಲ್ಲಿ ೬೦ ತೂಕ ವನೂ ಇಪ್ಪತ್ತೊಂದು ದಿನ ಪರಿಯಂತರ ಇಕ್ಕುವುದು ಅದರಿಂದ ದೊಡ್ಡ ಕುದುರೆಗೆ ೮ ತೂಕದ ಮಣಿಸಿಲೆಯನೂ ೨೧ ದಿನ ಓಗರದಲ್ಲಿ ಇಕ್ಕುವುದು ಹಿರಿಯ ಕುದುರೆಗೆ ೧೦೦ತೂಕವನೂ ೨೧ ದಿನಕ್ರಮದಲ್ಲಿ ಇಕ್ಕಲು ಸರ್ವರುಜೆ ಹರ ೩೨

ಅಣಿಲೆಯ ಕಾಯನೂ ತುಪ್ಪವನೂ ಕೂಡಿ ದಿನ ೧ಕ್ಕೆ ಕಾಯಿ ೫ ಎರಡನೆ ದಿನಕೆಕಾಯಿ ೧೦ ಮೂರನೆದಿನಕೆ ಕಾಯಿ ೧೫ ನಾಲ್ಕನೆ ದಿನಕೆ ಕಾಯಿ ೨೦ ಐದನೆಯ ದಿನಕೆ ಕಾಯಿ ೨೫ ಈ ಕ್ರಮದಲ್ಲಿ ಇಕ್ಕಿ ಆರನೆಯ ದಿನಕೆ ೨೦ ಏಳನೆ ದಿನಕೆ ೧೫ ಎಂಟನೆಯ ದಿನಕೆ ೧೦ ಒಂಬತ್ತನೆಯ ದಿನಕೆ ೫ ಕಾಯಿ ಈ ಪ್ರಕಾರದಲ್ಲಿ ತುಪ್ಪವೆರಸಿ ಇಕ್ಕುವದು ೩೩

ಈ ಹೇಳಿದ ಅಣಿಲೆಯ ಕಾಯನೂ ಆ ಕ್ರಿಯೆಯಲ್ಲಿ ಕೊಡಲು ಈ ಎಲ್ಲಾ ವ್ಯಾಧಿಗಳನ್ನು ಕಳೆದು ಗುಣವ ಕೊಡುವುದು ೩೪

ಸಕಲ ವಿಷವನೂ ಕ್ಷಯಹರವನೂ ಪೋಷಣವಿಧಿಯನೂ ವಾತ ಪಿತ್ತ ಶ್ಲೇಷ್ಮಹರವನೂ ಹದಿನಾರನೆಯ ಅಧ್ಯಾಯದಲ್ಲಿ ಹೇಳಿದೆನು ೩೫

ಶಾಲಿಹೋತ್ರನ ಮತ

ಉತ್ಪಲಮಾಲೆ

ಸಂಸ್ಕೃತ ಶಾಲಿಹೋತ್ರ ಸದ್ವಾಕ್ಯದೊಳಂ ಹಯ ಚೇಷ್ಟೆ ರೂಪು ದಂ
ತ ಶ್ರವಣಾಕ್ಷಿ ವರ್ಣ ಸುಳಿ ನಾಲಗೆ ಗಂಧ ಶುಭಾಶುಭಂಗಳಂ
ವಿಸ್ತೃತ ಮೂವತ್ತೈದೆನಿಪ ವೃತ್ತದೊಳುಂ ನೆರೆ ಪೇಳ್ದನಾಗವ್ಯೆ
ಕಾಸ್ತ್ರಯ ಚಾವುಡರಾಜಸುತ ಬಂಜರಸಂ ಸುಜನೈಕಬಾಂಧವಾ ೧

ನಿಂದಿರಿಸಿ[1] [ಲ್ಕೈಯಾ][1] ತುರಗ ನೋಳ್ಪರಿಗಕ್ಕರು ತೋರಿ ಬಾಲಮಂ
ಸಂದಿಸಿ ಬೀಸಿ ತನ್ನ ಬಲದಂಗಮನೀಕ್ಷಿಸಿ ಲದ್ದಿಯಿಕ್ಕಿ ಭೋ
ರೆಂದುಲಿದಾಸ್ಯದಿಂದುರವ ಮುಟ್ಟಿ ಖುರಾಗ್ರದಿಂ ಕೆತ್ತೆ ಧಾತ್ರಿಯಂ
ಸಂದೆಹಮಿಲ್ಲ ಲಾಭಗೊಡುಗಾ ಹಯಮುಂ ರಿಪುಗಂಧವಾರಣಂ ೨

ಗ್ರಾಹಕ ಬಂದು ನೋಡಲೆಡದಂಗಮನೀಕ್ಷಿಸಿ ಕಂಪಿತಾಂಗದಿಂ
ದೇಹವನೆಳ್ದು ಕಂಠಣಿಸಿ ಕಾಲ್ಗಳ ಹಂಗರಿಸುತ್ತ ಕರ್ಚುತಂ
ಮೋಹದುಷ್ಮಾನದಿಂ ತಲೆಯ ದೂಗುತಲುಂ ಧ್ವನಿಹೀನಮಾಗಿರ
ಲ್ಕಾ ಹಯ ಕೊಂಡ ಮಾನವನೊಳರ್ಥವಿನಾಶಮನುಂಟುಮಾಡಗುಂ ೩

ಚಂಪಕಮಾಲೆ

ಪಸರಮುಮಾಗಿಯುಂ ಖುರ ಸರಂ ನಯದಿಂ ನಿಲಿಸಿರ್ದ ಘಂಟೆಯೊಳ್
ಸಸಿನಮಿರಲ್ಕೆ ಕುಷ್ಟಿಕೆಯು ಬಳ್ಕಿಡೆ ಗಂಟತಿ ಸಣ್ಣಮಾಗಿ ನು
ಣ್ಪೆಸೆದಿಸೆ ಜಾನುಮಾಂಸಮಣಮಿಲ್ಲದಿರಲ್ ಮೊಳಕಾಲಗಂಟುಗಳ್
ನಸುಪಿರಿದಾಗಿಯುಂ ಕರಟ ತಗ್ಗದೆ ವೃ[2]ತ್ತ[ಮದಾಗೆ] ಜಂ[2]ಘೆಯೊಳ್ ? ೪

ಉತ್ಪಲಮಾಲೆ

ಪೇರುರಮಾಗಿ ಹಂಸಲತೆಯಂತೆ ಮಯೂರನ ಕಂಠದಂದದಿಂ
ದೋರಣಮಾಗಿಯುಂ ನಿಡುಕೊರಲ್ಕಡು ಸಣ್ಣ[3][ವು][3] ಗಂಡಮಂಡಲಂ
ಚಾರು ಕಪೋಲಮು ತೆಳುಪುವೆತ್ತೆ ಸೆಯಲ್ಕೆವಿ ಸಣ್ಣನಾಗಿಯುಂ
ಸೇರಿದವಾಗಿ ಸುಣ್ಪು ನಯಮುಂ ಪಡೆಯಲ್ಕದು ರಾಜವಾಹನಂ ೫

---

[1] ಲ್ಕಾ [2] ತ್ತ ಜಂ [3] ಣ್ಣ

ಚಂಪಕಮಾಲೆ

ಶಿರವದು ಪರ್ತುಲಾಕೃ[1]ತಿ [ಯದಾಗಿರೆ] ಯಂ[1]ದದಲೊಪ್ಪೆ ಲೋಚನಂ
ಹರಿಣಿಯ ಕಂಗಳಂತೆ ಕಡು ಬಟ್ಟಿತಮಾಗಿ ವಿಕಾಸ ಪದ್ಮಕೋಶ
ದೊರೆಯನೆ ನಾಸಿಕಾಂತರಮು ಮತ್ತ ---------- ತೋ
ರಿಲಧರೋಷ್ಠಮುಂ ಚುಬುಕು ವೃತ್ತಮೆನಲ್ಪದನಂ ಶುಭಾವಹಂ ೬

ಉತ್ಪಲಮಾಲೆ

---------- ಬೆನ್ನೆರಡೆಂಬ ಶಂಕೆಯಂ
ಪುಟ್ಟಿಸಿ ಬೆನ್ನ ಮೇಲೆ ಹುಲಿವೃತ್ತಮನಾಂತುಚಿಬಾಲ ಸೈತೆನೇ
ರ್ಪಟ್ಟಿದೆ ನೀಳ್ದ ಶಿಶ್ನಗುದ ಕೇಸರದಿಂ ತನು ರೋಮಸಂಕುಳಂ
ನೆಟ್ಟನೆ ಸಣ್ಣಮಾಗಿ ನಯಮಂ ಪಡೆಯಲ್ಕದು ರಾಜವಾಹನಂ ೭

ಚಂಪಕಮಾಲೆ

ತುರಗದ ಪಕ್ಷಿಮಂ ಕೊಡನನಿಟ್ಟವೊಲಾಂತುಪರಂಧ್ರ ರಂಧ್ರಮಂ
ಬರಿಗಳು ಕುಕ್ಷಿಯಂ ತಿಕಮು ವೃತ್ತಮನಾಂತಿರ್ದ್ದ ಕಕ್ಷ ಸಂಧಿಗ
ಳ್ಗುರುತರ ಮಾಂಸಲಂಗಳೆನೆ ಪಿಂತಣ ಪೆರ್ದೊಡೆ ಕೊಂತ ತೀವೆ ವಿ
ಸರತ್ತರ ಜಂಘೆ ಪೆರ್ಮಿಡಿ ಕರಂ ತೆಳುಪಾದರಪೂಜ್ಯಮಾ ಹಯಂ ೮

ಉತ್ಪಲಮಾಲೆ

ಆರೆಗಳಂ ಪೊದಳ್ದಿಸೆವ ಕೆಂಪಳವಟ್ಟಿರಬೇಕು ಪ್ರೋಥರೇ
ಖಾ[2]ರು[ರು] ಚಿತ್ರಯಂ ಧ್ವಜವ ಚಾಪವ ಶಂಖವ ಪೋಲ್ತಿರಲ್ ಶುಭಂ
ತಾರೆಗಳಲ್ಲಿ ಶೋಣಿತದ ರೇಖೆ ಸಮುಸ್ಥಿತವಾಗಿ ತೋರ್ಪಡಾ
ವಾರುವಗಾಯುಷ್ಯವೃದ್ಧಿಯಿನಿತಿಲ್ಲದಡಾ ಹಯಮಲ್ಪಜೀವಿಯುಂ ೯

ಚಂಪಕಮಾಲೆ

ದಶನಮುವಾರು ಮೇಲೆ ಕೆಳಗಾಗಿರುಲುತ್ತಮವೊಂದುಗುಂದೆ ತಾಂ
ದಶನವಿಹೀನ ಪೆರ್ಚ್ಚೆ ದಶನಾಧಿಕಮೆಂಬುದು ದಂತಮೆಯ್ದೆ ತ
ಪ್ಪಿಸದಿರೆಯುಂ ಕರಾಳ ವಿಕರಾಳಿಗಳೆಂಬಿವು ಪೊಲ್ಲ ಮಲ್ಲಿಕಾ
ಕುಸುಮನಿಭೋಜ್ವಲಚ್ಛವಿಯದಂತದಿನಾ ಹಯ ಪೂಜ್ಯಮುರ್ವಿಯೊಳ್ ೧೦

---

1 ತಿಯಂ 2 ರು

ಮತ್ತೇಭವಿಕ್ರೀಡಿತ

ಅಸಿದುಂ ತೆಳ್ಳಿತು ಕೆಂಪು ನೀಳ ಮೊನೆಯೆಂಬಿಂತೈದು ಚೆಲ್ವಾಗಿ ರಂ
ಜಿಸಲಾ ಜಿಹ್ವೆಯದುತ್ತಮಂ ತುದಿ ಕವಲ್ ವೃತ್ತಂ ನಿಜ ಸ್ಥೂಲ ಕ
ರ್ಕಶ ತಪ್ಪೆಂಬಿಲ ಪೋಲ್ವ ತಾಳಿಗೆ ಕರಂ ಕೃಷ್ಣತ್ವಮಾದಂದು ವ
ರ್ಜಿಸು ನೀರೇಜದ ಗಂಧವಾನನದಿನುಣ್ಮಲ್ ವಾಜಿ ಸಲ್ಲಕ್ಷಣಂ ೧೧

ಎರಡ್ಕುಸಂಧದೊಳೊಂದು ಭಾಳದೊ[1]ಳು[1] ಪ್ರೋಥಸ್ಥಾನದೊಳ್ಗೊಂದು ಪೇ
ರುರದೊಳ್ ದ್ವಂದ್ವ ಚತುಷ್ಕಪಳ್ಳೆಗಳೊಳಿಂತೀ ಹತ್ತು ಪುಟ್ಟಲ್ ಧ್ರುವಂ
ತುರಗಕ್ಕಂತಿವು ಪುಟ್ಟಲಧ್ರುವ[2]ಮೆ [ಯಾದಾ]ಸ್ಕ[3]ಂಧದಾವರ್ತವ
ಸ್ಥಿರವಾಗಿರ್ಪಡೆ ಶೂನ್ಯಮಸ್ತಕಮೆನಲ್ಕಾಯುಂ ವಿಹೀನಂ ಹಯಂ ೧೨

ನೊಸಲಾವರ್ತದೊಳೊಂದುಮುತ್ತಮಮೆ[ರಡುಂ] ತೋರಲ್ ಜಯಂ ಪಟ್ಟದಂ
ತೆಸೆಯಲ್ ಮೂರು ಶುಭಾವಹಂ ನಿಲಿಸಲುಂ ಆವರ್ತಮೂರಾಗಿ ರಂ
ಜಿಸೆ ನಿಶ್ರೇಣಿಕಮುತ್ತಮಂ ನೆಗಳ್ದ ನಾಲ್ಕುಂ ಚೌಕಮಾಗಲ್ಕೆ ಸಂ
ತಸಮುಕ್ಕುಂ ಕಟಮಾಯಿ ಸೃಕ್ವಣಿಯೆನಿಪ್ಪಾವರ್ತ ಸೌಖ್ಯಾಸ್ಪದಂ ೧೩

ಚಂಪಕಮಾಲೆ

ತುರಗದ ಕರ್ಣಮೂಲದೊ[4]ಳು[4] ಪುಟ್ಟೆ ಶುಭಂ ಪದದೊಳ್ ಜಯಾವಹಂ
ಕೊರಳೊಳಗೊಂದಿರಲ್ಕೆ ಕಿರಿಯುಗ್ಮ ಮು ದೇವಮಣಿಪ್ರಶಸ್ತ ನೀ
ಳ್ದಿರಲದು ಲೋಚಮಾನಮುದಿತೋನ್ನತೆಯುಂ ಸಿರಿವೃಕ್ಷದಂತೆ ತೋ
ರಿರೆ ಶುಭಮುಂ ಉರಸ್ಥಳದ ನಾಲ್ಕರ [5][ಚೌ][5]ಕದೊಳಿಪ್ಪ ಸಿದ್ಧಿಯುಂ ೧೪

ಮತ್ತೇಭವಿಕ್ರೀಡಿತ

ಉರದೊಳ್ ದೊಡ್ಡಿತೆಸಿಪ್ಪುದೊಂದು ಸುಳಿಯಾಗಲ್ ಸೌಖ್ಯ ಮುಂಗಾಲ್ಗಳಿ
ತ್ತರದಿಂ ನಾಲ್ಕರಲಂತೆ ಮುಂಗ[6]ಳ[6]ಕರಂ ಇಷ್ಟಾಸ್ಪದಂ ರಂಧ್ರದಿಂ
ತರದಿಂ ಮೇಖಳೆಯುಗ್ಮಮುದ್ರವಕರಂ ಕೇಶಾಂತದಾವರ್ತದಿಂ
ಸರಿಯಿಂತಾದಡಮಂಗದೊಳ್ [7][ಸುಳಿಯು]ಮೂ[7]ವತ್ತೇಳವತ್ಯುತ್ತಮಂ ೧೫

---

1 ಳ್ 2 ಮೆಸ್ಕಂ 3 ಮೆರಸಲ್ 4 ಳ್ 5 ಚವು 6 ಳಾದಿ 7 ಮೂ

ಒಲೆಗಲ್ಲಿಂದದಿ ಭಾಳದೊಳ್ ಸುಳಿಗಳುಂ ಮೂರಾಗಿರಲ್ ಮೃತ್ಯು ಕಂ
ಗಳ ನೀರ್ ಸೋರ್ವೆಡೆ[1]ಯಲ್ಲಿ[1]ಪುಟ್ಟಲಳಲುಂ ಕರ್ಣಾಗ್ರದೊಳ್ ಸಾವುಮಾ
ತಲೆಯೊಳ್ ಕ್ರೋಧವಿಶೇಷಮುಂ ಕಟದೊಳೊಂದಾಯುಃಕ್ಷಯಂ ಪ್ರೋಥದೊ
ಳ್ಕುಲನಾಶಂ ಘನಸಂಪದಂ ಕೆಡಿಸುಗುಂದಂತಾ ಹಯಂ ನಿಶ್ಚಯಂ ೧೬

ಉತ್ಪಲಮಾಲೆ

ಮೂಗಿನ ಕಂಬಿಯೊಳ್ ಮರಣಮುಂ ಪದರಿಕ್ಕೆಲದೊಳ್ ಸಹೋದರಂ
ಗಾಗಳೆ ಮೃತ್ಯು ಕೇಳ್ವದಪಿನೊಳ್ ಸತಿಗಂ ಮೃತಿ ನಾಸಿಕಾಗ್ರದೊಳ್
ಬೇಗದಿ ವಿತ್ತಮುಂ ಕೆಡಿಕು ಕಣ್ಣ ಮೊದಲ್ಸುಳಿಯಿಂ ಹಯಾಧಿಪಂ
[2][ಸಾಯ್ಗು][2] ಭಯೋಷ್ಟದೊಳ್ ಸುಳಿಗಳಾಗಲು ತತ್ಕುಲನಾಶ ನಿಶ್ಚಯಂ ೧೭

ಮತ್ತೇಭ ವಿಕ್ರೀಡಿತ

ಸುಳಿಗ[3]ಳ್[3] ಪುಬ್ಬಿನೊಳಾಗೆ ವಿತ್ತವಳಿಗುಂ ಗೋನಾಳಿಯಂದಿ
ಕ್ಕೆಲದೊಳುಂ ಮಾನುಷ ಮೆಟ್ಟಿ ಶೋಕ ಕಕುದಾವರ್ತದಿಂ ತೋರಲಾ
ಗಳೆ ಕೊಳ್ಗುಂ ಪತಿ ಪತ್ನಿ ಪುತ್ರ ಚಯಮಂ ಕಕ್ಷಾವರ್ತದಿಂ ತ
ತ್ಕುಲನಾಶಂ ಕದನೋಗ್ರ ಮೃತ್ಯುಮುರದೊಳ್ ಮೂಡಲುದಾವರ್ತದೊಳ್ ೧೮

ಚಂಪಕಮಾಲೆ

ಹೃದಯದೊಳಲ್ಪಜೀವಿ ಹಯನಾಭಿಯೊಳುಂ ಧನಹಾನಿ ತೋರ್ಪ ತೂಂ
ರ್ಯದೊಳು ಕುಲಕ್ಷಯಂ ವಹದೊಳಂ ತಿಕದೊಳ್ವಿನಶನಂ ಬಾಲದ
ಮೊದಲು ಗುದಾಗ್ರದೊಳ್ ·· ಮುಷ್ಕದೊಳುಂ ಸಲೆ ಮೂತ್ರಕೋಶದೊಳ್
ಪುದಿದಿರೆ ರೋಮಜಂಗಳಳಿಗುಂ ಪತಿ ಪತ್ನಿ ಸುಪುತ್ರ ಮಿತ್ರರುಂ ೧೯

ಉತ್ಪಲಮಾಲೆ

ಆಸನದೊಳ್ ಸುತಾರ್ಥಹತಿ ಶೀವನಿಯೊಳ್ ಕಲಹಂ ಧನಕ್ಷಯಂ
ಕ್ಲೇಶನಿಧಿ ಕ್ಪಣಿಸ್ಥಲದೊಳುಂ ಮೃದು ಕಾಕಸೆಯೊಳ್ವಿನಾಶಮಾ
ರ್ಬೇಸರು ಕೂರ್ಚೆಯೊಳ್ನೆಗಳ್ದ ಕುಟ್ಟಿಕೆಯೊಳ್ ಸಲೆ ಜಾನುಜಂಘೆಯೊಳ್
ದೂಷಣಮೆಪ್ಪತಾರು ಸುಳಿಗಳ್ ತುರಗಂಗದೊಳೆಂದ ಭಾಸ್ಕರಂ ೨೦

---

1 ಯೊಳ್ 2 ಸಾಯಿಗು 3 ಳು

ಚಂಪಕಮಾಲೆ

ಎರಡತಿದೂಷಣಂ ಕಕುಧೆ ಕಾಕಸೆಗಂ ಪರಿಹಾರವಿಲ್ಲ ಕೇಳ್
ತುರಗದ ಪೂರ್ವಭಾಗದಲ್ಲಿ ಮಿಕ್ಕ ಶುಭಂಗಳು ಪುಟ್ಟಲಂತವ
ಕ್ಕಿರಲದು ಲೋಚಮಾನಮೆ ಶುಭಂ ಹಯಕಂದಪರಾರ್ಧದಲ್ಲಿ ಕ
ಳ್ತಿರೆಯುಶುಭಕ್ಕೆ ಮೇಖಳೆಯುದೊಂದಿರೆ ಭೂಷಣ ಭಾಸ್ಕರೋಕ್ತಿಯಿಂ ೨೧

ಮತ್ತೇಭವಿಕ್ರೀಡಿತ

ಸ್ತನಿ ಶೃಂಗಿ ದ್ವಿಕುರಿ ದ್ವಿಕರ್ಣಿ ತಳಹೀನಂ ಹೀಳನೇಕಾಂಡಕ
ಧ್ವನಿ ಹೀನಂ ಜಡ ಚೋಡಿಗಂ ಕಡಿಗ ಬೀಸುಂಗಾಲ ನಿಸ್ಸತ್ವ ದು
ರ್ವರ್ಣನಸಂ ನಾಸಿಕ ಭಗ್ನ ಕಾಗೆ ಹುಲಿಗಾರ್ದಭಂ...ಗೂಗೆ ಪ
ದ್ದಿನ ಭಾಸಂ ವೃಕ ಧೂಮುವೆಂಬಿನಿತು ವರ್ಣಂ ತ್ಯಾಜಿ ನಿಸ್ಸಂಶಯಂ ೨೨

ಶಾರ್ದೂಲವಿಕ್ರೀಡಿತ

ಚೇರಂ ಮಂಗಳ ಕೈರ ಜನ್ನನಳಗಂ ಜಂಖಂದಿಷೀ ಕತ್ತಳಂ
ಸಾರಂಗಂ ಪವಳಾಂಗ ಮುಂಜ ತಿಳಗಂ ನೀಲಂ ಲಸತ್ಕಾಳಿಯುಂ
ಪೋರೇಲ ಕೊಂಗನು... ಕಣೆವಟ್ಟಂಮುವರ್ಣಂಗಳಿವು- ?
ಸಾರಾಯಂ ವಳೆಯಾಂಘ್ರಿವಾಳವಿಪ್ಪು ಕಪ್ಪಾದಂದು ಸತ್ವಾಧಿಕಂ ೨೩

ಚಂಪಕಮಾಲೆ

ತುರಗದ ಕಂಗಳಂಚೆ ಎಳೆಹುಲ್ಲೆಯು ಕೊಂಚೆಯು ತೀವಿ ಪಿಲ್ಲಿ ತೊ
ಕ್ಕರಥ ವಿಲೋಚನಕ್ಕಣೆ ನವಿಲ್ ಶುಭಘೂಕ ಬಿಡಾಲಕಾಕನಂ
ತಿರಲತಿಕಷ್ಟ ನೀಲವಟಲಂ ಸೆರೆ ಕೀಳುರಿ ಪಾಳಿ ರಕ್ತಮುಂ
ಜಳಿಸಿ ಜಳೂರ್ವಿ ಪೂವ ಬಳಗಣ್ಪಿಣಿಕಾಕ್ಷಿಗಳಾಗೆಯಾಕ್ಷಣಂ ೨೪

ಮತ್ತೇಭವಿಕ್ರೀಡಿತ

ತುರಗೋಚ್ಛ್ವಾಸದೊಳಾಸ್ಯದೊಳ್ ಬೆವರಿನೊಳ್ ಕೆಳ್ಗಂಧಮುಂ
ಗೋಘೃತಂ
ಸರಸೀಜಾತದ ಬಾಳ ಚಂಪಕ ಲವಂಗಂ ಕೇತಕೀಮಾತುಳಂ
ಗುರಸ ನಾಗರಜಾಯಿ ಪಾಳದ ಬೆಡಂಗುತ್ತಮಂ ತೋಳ ಸೂ ?
ಕರನಂ ಸುಂಡಿಲಿಯುಂ ಬೀಲೆಂದೆಸೆವ ದುರ್ಗಂಧಂ ಹಯಕ್ಕೂಣೆಯುಂ ೨೫

ವದನಕ್ಕೀ ನಡುವಪ್ಪ ಪಲ್ಗಳದು ಸಂದಂಶ[1][ಮದೆಂ][1] ಬರಂ
ತ್ರೊದವಿರ್ದಿಕ್ಕೆಲ ಮಧ್ಯಮಂಗಳಿರಿಸಿಕ್ಕು ಪಾರಿಪಕ್ಷಂಗಳಂ
ತ್ಯದ ತದ್ವಾಯು[2][ಮದಿಂ][2]ತಿವೇ ಪೆಸರ ಪೂರ್ವಾಚಾರ್ಯಶಾಸ್ತ್ರೋಕ್ತಿಯಿಂ
ವಿದಿತಂದಾ ಹಯ ಶಾಬಸಂಕುಳಕೆ ಪೇಳ್ವೆನ್ನೀ ಶತಪ್ರಾಯಮಂ ೧೬

ಶಾರ್ದೂಲ ವಿಕ್ರೀಡಿತ

ಸಂದಂಶಂ ಮೊಳೆಗೊಂಡು ತಿಂಗಳವೃಗಂ ಚೆಲ್ವಾಗಿಮಿಂತಿಂಗಳೊಳ್
ಸಂದಿಕ್ಕುಂ ಮಿಗೆ ನಾಲ್ಕು ತಿಂಗಳಿಗವುಂ ಕೇಳ್ ಪಾರಿಪಕ್ಷಂಗಳಾ
ದಂದುಂ ಪಂಚಮಮಾಸವಾರೆನಿಪ ತಿಂಗಳ್ಗಿಲ್ಲ ವೃತ್ತಂಗಳೂ* ೧೭

ಮತ್ತೇಭವಿಕ್ರೀಡಿತ

ಸಲೆ ಸಂದಂಶಮಮೋಳು ತಿಂಗಳಿಗೆ ಬೆಳ್ಪಿಂಟಪ್ಪ ಮಾಸಂಗಳಾ
ಗಲು ಸುಕ್ಷೀರನಿಭೋಜ್ವಲಚ್ಛವಿಯನಾಗಳ್ವಂಬತುಂ ತಿಂಗಳ್ಕೋ
ಡಲು ತನ್ಮಧ್ಯಮದಂತ ಬೆಳ್ಪೆಸೆಗು ಹತ್ತುಂ ತಿಂಗಳೊಳ್ ಶುಭ್ರ ನಿ
ರ್ಮಲಮೇಕಾದಶಮಾಸದಲ್ಲಿ ಬೆಳುಪಕ್ಕುಂ ಪಾರಿಪಕ್ಷಂಗಳುಂ ೧೮

ವರುಷಂ ತುಂಬಲು ಪಾರಿಪಕ್ಷಮವು ಸುಸ್ನಿಗ್ಧಂ ಸುಕುಂದೇಂದುಗಂ
ದೊರೆವೆತ್ತಿ[3]ಪುರು[3]ದಂತದಗ್ರಮವು ನೇರಿತ್ತಾಗಿ ಚೆಲ್ವಕ್ಕು ಮ
ತ್ತಿರಡುಂ ವತ್ಸರದೊಳ್ ಮಲೀನಮೆನಿಸಿಕ್ಕುಂ ಷಣ್ಮಾಸತ್ರಿಂಶಬ್ದಂಬರಂ
ನಿರುತಂ [4][ಕೇಸರದಿಂ][4] ಮೇಲೆ ಬರುಗುಂ ಸಂದಂಶಮುಂ ನಿಶ್ಚಯಂ ೧೯

ಮಹಾಸ್ರಗ್ಧರೆ

ಬರುಗುಂ ಸಂದಂಶಮುಂ ತಾನೆರಡುವರೆಯೆನಿಪ್ಪಬ್ದದೊಳ್ ಪೋಗಿ ಮೂರುಂ
ವ[5][ರುಷಕ್ಕಂ ಬ][5]ಕ್ಕು ಮೂರುವರೆಗೆ ಬರುಗುಮಾ ಮಧ್ಯಮಂ ಪೋಗಿ ನಾಲ್ಕುಂ
ಕ್ಕಂಬಕ್ಕು ನಾಲ್ಕೂವರೆಗೆ ಬರುಗುಮಾ ಪಾರಿಪಕ್ಷಂ ಗಳೈದುಂ
ವರುಷಕ್ಕಂ ಬಕ್ಕು ಪಂಜಾರಿಸಿತೆನಿಸುಗು ಮತ್ತಯ್ದು ಶುಭ್ರಂಗಳಾಗಲ್ ೨೦

---

1 ಪೊ 2 ಪಿಂ 3 ಶಾ 4 ಕೆದರಿಂ 5 ಪ್ಗಕ್ಕಾ * ಒಂದು ಪಾದಲುಪ್ತವಾಗಿದೆ.

ಮತ್ತೇಭವಿಕ್ರೀಡಿತ

ಅದು ಸಂಜಾರದ ಮೇಲೆ ಪುಟ್ಟುವುದು ಷಡ್ವ[1][ರ್ಷಂ][1]ಗಳೊಳ್ ಕಾಳಿಕಾ
ಸ್ಪದಮಕ್ಕುಂ ಚತುರಸ್ರಮಾಗೆಸಗು ಸಂದಂಶಂಗಳೊಳ್ ಮತ್ತೆಮ
ಧ್ಯದಲಿಕ್ಕೇಳಬುದಿದಂಬರೆಂಟಬ್ದ ಯಿದುಕ್ಕದುಂ ಪಾರಿ ಪ
ಕ್ಷದ ಮೇಲ್ಪುಟ್ಟಿರೆ ತುಂಬಿಯಂತೆಸೆವ ಬಣ್ಣಂ ಕಾಳಿಕಾಭ್ಯಂಜನಂ ೩೧

ಹರಿಣಿಭ್ಯಂಜನಮಿಾಪ್ರಕಾರದೊಳು ಮುಂದೇಕಾದಶಾಬ್ದಂಬರಂ
ವರ ಹೇಮದ್ಯುತಿ ಚೌಕಮಾಗೆ ಪದಿನಾಲ್ಕುಂವತ್ಸರಂ ಶುಕ್ಲಮೊಂ
ದಿರೆ ಕಕ್ಕುಂ ಬಳಿದಪ್ಪನುಜ ಕಳಿದಂತೊಪ್ಪೆ ತ್ರಿಕೋಣಂಗಳಾ
ಗಿರೆ ಕಾಚಂ ಪದಿನೇಳುಮಬ್ದವರೆ [2][ಗಂ ಇಪ್ಪ][2]ಪ್ರದಂ ರಂಧ್ರದಿಂ ೩೨

ಮಹಾಸ್ರಗ್ಧರೆ

ಚತುರಸ್ರಂ ಮಾಕ್ಷಿಕಂ ವಿಂಶತಿ [3][ವರುಷ][3]ದೊಳುಂಪುಕ್ಷುಕಾರಮಕ್ಕುಂ
ನುತಹೇಮಭ್ಯಂಜನಂ ತಾಂ ತುಳಿದು ಸುಳಿಯೆ ತ್ರೈವಿಂಶಮಬ್ದಕ್ಕೆ ಶುಭ್ರಾ
ಕೃತಿಯಿಂ ಷಡ್ವಿಂಶಮಬ್ದಂಬರಮೆನಲಸಿದಾಚಾರ್ಯ ತೋಳೂಕನಂದದಿಂ
ದಾ ಕಾರದಂತಾ ಗ್ರಂಗಳೊಳುದಯಿಸುಗುಂ ಶಾಲಿಹೋತ್ರೋಕ್ತಿಯಿಂದಂ ೩೩

ಮತ್ತೇಭವಿಕ್ರೀಡಿತ

ಚಳಮಭ್ಯಂಜನವಿಪ್ಪತೊಂಬತೆಸಿಪ[4][ಬ್ದಂ][4] ವತ್ಸವೈಯದ್ದಕ್ಕೆ ತಾ
ನಲುಗುತಿಪ್ಪವು ಕಂಡಮುಂ ಕುಸಿದು ಬೇರುಂತೋರ್ಕುಜ ಚೆಲ್ವಾಗಿ ನೋ
ಡಲು ಮೂವತ್ತೆರಡಬ್ದದೊ. ತನಮೆಂಬೀವ್ಯಂಜನಂ ಪುಟ್ಟಲಾ
ಸ್ಖಲಿತಂ ಬೀಳುಗು ದಂತಪಂಕ್ತಿಪರಮಾಯುಂ ತುಂಬಲಶ್ವಾಳಿಗಳ್ ೩೪

---

[1] ರುಷಂ [2] ನಿಪ್ಪ [3] ವರ್ಷ [4] ಬ್ದಂಬರಂ

ತುರಗಲಕ್ಷಣ

(ಸದಾಶಿವನೀತಿಯಿಂದ)

ತನು ಗತಿ ಸುಳಿಗಳು ಗಂಧ
ಧ್ವನಿ ಸತ್ವವು ಕಾಂತಿ ವರ್ಣವಿದುವಷ್ಟವಿಧಂ
ಘನವಾದ ತುರಗಕಾಯದೊ
ಳನಿತುಂ ಶುಭಮಶುಭಮೆಂಬುದಿದುವುಭಯವಿಧಂ ೧

ತುರಗದ ಜಾತಿಯು ನಾಲ್ಕುಂ
ನೆರೆ ವಿಪ್ರ ಕ್ಷತ್ರ ವೈಶ್ಯ ಶೂದ್ರದ ಪೆಸರಿಂ
ಅರಿವದು ಮೊದಲೆರಡುತ್ತಮ
ತರುವಾಯದಿ ಮಧ್ಯಮುಂ ಕನಿಷ್ಠಮೆನಿಕ್ಕುಂ ೨

ಬಿಳಿದು ವಿವೇಕಿ ದಯಾನ್ವಿತ
ತಿಳಿಯಲ್ಕಿದು ವಿಪ್ರ ಕೆಂಪು ಬಲಿ ಕ್ಷತ್ರಿಯವೂ
ಹಳದಿಯು ದುರ್ಗುಣಿ ವೈಶ್ಯಂ
ಬಳಲುವದಂಜುವದು ಕರಿದು ಶೂದ್ರಂ ತುರಗಂ ೩

ವರ ಜಿಹ್ವ ಮುಖ್ಯ ಬಾಹುಂ
ಶಿರ ಜಂಘಾ ಪಾರ್ಶ್ವ ವಾಲವಿದು ಸದ್ಗ್ರೀವಾ
ತುರಗಗಳೊಳಗೆಂಟು ದೀರ್ಘ
ಇರಲುತ್ತಮ ಗಮನವಕ್ಕು ಗುರುನಂದೀಶಾ ೪

ಗುದ ಮೇಢ್ರ ಕರ್ಣ ಕಂಡವು
ಮೃದುರೋಮವು ಅಂಡ ಜಂಘೆ ಬಾಲದ ದಂಡಂ
ಕುದುರೆಯೊಳೆಂಟುಂ ಕಿರಿದಾ
ಗುದಯಿರೆ ಉತ್ತಮವು ಅಹುದು ಗುರು ನಂದೀಶಾ ೫

ಕಿವಿ ಕಂಠ ಬಾಲ ಸಣ್ಣವು
ವಿವರಿಸೆ ಉರ ಖುರವು ನೇತ್ರ ಅಂಗಸ್ಥೂಲಂ
ತವೆ ಮೃದು ರೋಮವು ಭ್ರೂಲತೆ
ಯವೆ ಸಣ್ಣವು ದೀರ್ಘಮುಖದ ಅಶ್ವೋತ್ತಮವೂ ೬

ಉದರವು ಕಟಿ ಬೆನ್ನು ವಕ್ಷ
ಪದ ಪಣೆಯು ಸ್ಕಂದ ನೇತ್ರವತಿ ವಿಸ್ತೀರ್ಣಂ
ಉದಯಿಸೆ ಬಹುಬಲವಂತಂ
ಕುದುರೆಯು ಲಕ್ಷಣವು ಕೇಳು ಗುರುನಂದೀಶಾ ೭

ತುರಗದ ಖುರದಿಂ ಸ್ಕಂಧಕೆ
ಪರಿಮಿತಿಯುತ್ತಮವು ನೂರುಅಂಗುಲ ಮಾನಂ
ತರದಿಂದಮೆಂಟು ಕಡಮೆಯು
ಇರೆ ಮಧ್ಯಮಪಧಮವಕ್ಕು ಕುದುರೆಯು ಗುರುವೇ ೮

ತುರಗಮುಖಂ ಮಿಗೆ ಮೂವ
ತ್ತೆರಡಂಗುಲ ಮಿತವು ಕೊರಳು ಐವತ್ತಾರುಂ
ಉರ ಟೊಂಕ ಬೆನ್ನು ಮೊಗ ಸಮ
ಖುರ ಕರ್ಣಗಳೇಳು ಬೆರಳು ಉತ್ತಮಹಯಕೇ ೯

ಹರಿಗಲ್ಲವಾರು ಬೆರಳುಂ
ನೆರೆ ಜಂಘೆಯು ಮಿತಿಯು ಇಪ್ಪತ್ತೆರಡಂಗುಲಮುಂ
ವರವಾಲದಂಡವಿಂಶತಿ
ಇರಲುತ್ತಮ ಕಡಮೆ ಕಡಮೆ ಮಧ್ಯಮಪಧಮಂ ೧೦

ಕರಿ ಹಂಸ ಸಿಂಹ ಚಕ್ರವು
ಶರ ಗತಿ ಸಮ ಪಂಚಧಾರೆಯಿರಲುತ್ತಮವೂ
ಚರಣಗಳುರವಂ ಮುಟ್ಟಲು
ತುರಗವು ಅತ್ಯಧಿಕ ಕೇಳು ಗುರುನಂದೀಶಾ ೧೧

ವರ ವಿಪ್ರ ಕ್ಷತ್ರ ವಾಜಿಗೆ
ಪರಿಮಳ ಬೆಮರಿನಲಿ ಶ್ವಾಸದಲ್ಲಿರುತಿಹದೂ
ಧರೆಯೊಳಗೆ ವೈಶ್ಯ ಶೂದ್ರದ
ತುರಗಕೆ ದುರ್ಗಂಧವೆಂದು ತಿಳಿವದು ಬುಧರೂ ೧೨

ಹಯರವ ಹ್ರೂಂಕಾರುತ್ತಮ
ಜಯಕರ ಹ್ರೀಂಕಾರವಿರಲು ಮಧ್ಯಮವಕ್ಕುಂ
ಭಯಸೂಚಕ ಹ್ರಾಂಕಾರವು
ನಿಯಮವ ಮೀರಿದ ವಿಕಾರಧ್ವನಿಯತ್ಯಧಮಂ ೧೩

ಮುತ್ತು ಮಣಿ ಪುಷ್ಯರಾಗದ
ಉತ್ತಮ ಪ್ರಭೆಯುಳ್ಳ ಹಯವು ಮಂಗಳಕರವೂ
ಮತ್ತೆಳೆನೀಲದ ಪವಳದ
ಗೊತ್ತಿನ ಕಾಂತಿಗಳು ಅಶುಭ ಅಶ್ವಗಳೊಳಗೇ ೧೪

ಸತ್ವ

ಮುನಿ ವಿಪ್ರ ವಾಯು ವರುಣನ
ಧನಪತಿ ಗಂಧರ್ವ ಸುರಪಸತ್ವ ತುರಂಗಂ
ಅನುಪಮ ಅತ್ಯುತ್ತಮವೆಂ
ದೆನುತಾ ಶಾಸ್ತ್ರದಲಿ ಪೇಳುತಿಹುದೂ ಗುರವೇ ೧೫

ಆವರ್ತಲಕ್ಷಣ

ಪತ್ತುಂ ಸುಳಿಗಳು ಧ್ರುವಮೆ
ಪ್ಪತ್ತಾರುಂ ಸುಳಿಗಳಶುಭ ರೋಮಜಗಳು ಮೂ
ವತ್ತೇಳ್ ಶುಭವರ ನೂರಿ
ಪ್ಪತ್ತುಂ ಮೂರಧಿಕವಾಗೆ ಸುಳಿಗಳು ಗುರುವೇ ೧೬

ಬಲದಾವರ್ತದ ಪಲ್ಸುಳಿ
ಸಲೆ ಚಿಪ್ಪಿನ ತೆರದಿ ಶುಕ್ತಿ ನೂಕೋರ್ಲಿನವೊಲ್
ಲಲಿತ ಶತಪಾದಿ ವತ್ಸವು
ಬಲುನಕ್ಕಿದ ತೆರದವಿರ್ದುದದು ಅವಲೀಢಂ ೧೭

ಹಾವುಗೆಯಂತಾ ಪಾದುಕೆ
ಹಾವುಗೆಯೊಲರ್ಧಂ ಬೊ...ಪಾದುಕೆ ಮುಕುಳಂ
ಭಾವಿಸೆ ಕುಟ್ಮಲದಂದಂ
ತಾವೆಲ್ಲೊಂದಾಗಿ ಕೂಡಿದಂತೆ ಸಮೂಹಂ ೧೮

ಉರದೊಳ್ ಶಿರದೊಳ್ ಭುಜದೊಳ್
ನೆರೆ ನಾಭಿಯು ಕುಕ್ಷಿ ಮಧ್ಯದೊಳಗೆರಡೆರಡುಂ
ಇರಲಾ ನಾಸಾತಲದೊಳು
ವರನೊಸಲೊಳು ವಾಜಿ ಗಂಧ ಸಧ್ರುವಮುಕ್ಕುಂ ೧೯

ನಾಸಾಪುಟಗಳ ತಳದಲಿ
ಭಾಸುರ ಸುಳಿಯಿಲ್ಲದಿರಲು ಒಡೆಯಗೆ ಹಾನಿಯು
ಆ ಸುಳಿ ನೊಸಲೊಳ್ಕಿರಿದಿರೆ
ನಾಶವು ರಣರಂಗದಲ್ಲಿ ಆಳುವಗಕ್ಕುಂ ೨೦

ಮುಂಡೆಯುಲಿ ಎರಡು ಸುಳಿಯುಂ
ಕಂಡರೆ ಶುಭ ಇಲ್ಲದಿರಲು ಲಾಯಕೆ ನಾಶಂ
ಮುಂಡಿಸಿ ಎದೆಯೊಳಗಿರದಿರೆ
ಕೊಂಡವಗಂ ಲಾಭವಿಲ್ಲದಿರೆ ಸುತನಾಶಂ ೨೧

ಭುಜಮೂಲ ಕುಕ್ಷಿಮಧ್ಯದಿ
ನಿಜದಿಂದೆರಡೆರಡು ಸುಳಿಗಳಿಲ್ಲದೆ ಇರಲೂ
ವಿಜಯವು ಆಗದು ಹೊಟ್ಟೆಗೆ
ರುಜೆ ಶೂಲೆಗಳಾಗದಯ್ಯ ಗುರುನಂದಯ್ಯಾ ೨೨

ದಶಧ್ರುವ

ಕಟವಾಯುಗಳಲಿ ಸುಳಿಗಳು
ಪಟುವಾಗೆರಡಿರಲು ಭಾಗ್ಯವಹುದೂ ಸಿದ್ಧಂ
ನಿಟಿಲದೊಳೆರಡಿರೆ ಜಯಕರ
ದಿಟದಿಂ ಮೂರಡ್ಡಲಿರಲಶುಭಫಲ ಪತಿಗೇ ೨೩

ಪಣೆಯುಲಿ ಚೌಕದಿ ನಾಲ್ಕರ
ಎಣಿಕೆಯ ಸುಳಿಯಿರಲು ಹಯಕೆ ರಾಜಂಗ್ಯೋಗ್ಯಂ
ಗುಣವರ್ಧಕವಹುದು ಬಲವುರಿ
ಅಣುಮಾತ್ರವು ವಾರೆಯಾಗೆ ಅರೆಯಾಯುಷ್ಯಂ ೨೪

ಕಡೆಗಂಗಳ ಕಡೆಸುಳಿಗಳು
ಒಡೆಯಗೆ ಮಂಗಳವ ಜಯುವನೀವುದು ನಿಜದಿಂ
ಒಡನೆ ಭ್ರೂಮಧ್ಯ ಸುಳಿಗಳ್
ಕಡುಶುಭಗಳನೀವವಯ್ಯ ಗುರುನಂದಯ್ಯಾ ೨೫

ಕಿವಿಗಳ ಬುಡದಲಿ ಸುಳಿಯಿರೆ
ಬವರದಿ ಜಯಕರವು ಗಳದ ಮೂಲದ ಸುಳಿಯುಂ
ನವಕಂಠಾಭರಣೆನಿಪುದು
ಶಿವಕರ ಗೆಲವೀವುದಯ್ಯ ರಣರಂಗದಲೀ ೨೬

ಕೊರಳಿನ ಮಧ್ಯದ ಸುಳಿಯದು
ಶಿಖಿಕರ ತಾ ದೇವಮಣಿಯು ಮುಂದೋಷ ಹರಂ
ಉರದೊಳು ಸುಳಿ ನಾಲ್ಕೆಂಟಕೆ
ಸಿರಿ ವತ್ಸವು ಅಷ್ಟಧಾನ್ಯ ಐಶ್ವರ್ಯ ಸುಖಂ ೨೭

ತೋಳುಗಳಲ್ಲಿಹ ಸುಳಿಗಳು
ಆಳಿದಗೈಶ್ವರ್ಯಕರವು ಸೊನ್ನೇ ಪಾವಡಿ
ಮೇಳೈಸಿದ ತಲೆ ಸುಳಿಯುಗ
ಹೇಳುವಡಿದು ಭಾಗ್ಯಕರವು ಅಶ್ವಾಧಿಕವೂ ೨೮

ಅಳ್ಳೆಗಳೊಳು ಸುಳಿಗಳಿದ್ದ
ರೊಳ್ಳೆಯಫಲ ಹಿಂದುಗಡೆಯುಲಿರೆ ದೋಷಹರಂ
ಉಳ್ಳರೆ ಉದರದಿ ಹರಿ ಸುಳಿ
ಬೆಳ್ಳಿಯು ಬಂಗಾರಬಹುದು ಗಂಗಾಪಾಯಂ ೨೯

ಅಶುಭ

ಅಂಡದ ಬೀಜವು ಒಂದುಂ
ಮಂಡೆಯೊಳಂ ಕೊಡುಟಕ ಪಿಂಗಳನೇತ್ರಂ (?)
ಗಂಡಶ್ವಕೆ ಮೊಲೆಗಳಿರೇ
ಕೊಂಡವಗಂ ಸರ್ವಹಾನಿಯಾಹುದು ಸಿದ್ಧಂ ೩೦

ಉರದೊಳು ಒಂದೇ ಸುಳಿಯಿರೆ
ನೆರೆ ಹೃದಯಾವರ್ತಂ ಬಹಳ ಕ್ಲೇಶಪ್ರದವೂ
ಖುರ ಮುಟ್ಟುವಲ್ಲಿ ಸುಳಿಯಿರೆ
ಸರುವವ ಕೆಡಿಸುವುದು ಸತ್ಯ ತಾಳಾವರ್ತಂ ೩೧

ಪಣೆಯ ಕೆಳಗಿಹಾ ಸುಳಿಯುಂ
ಅಣುಮಾತ್ರವು ನೇತ್ರಯುಕ್ತವಾಗಿರಲದು ಕಾ
ಣೆಣೆಯಿಲ್ಲದಶ್ವವಾದರು
ಫಣಿಭೂಷಣ ಲಾಲಿಸಯ್ಯ ಶೋಕಾವರ್ತಂ ೩೨

ಕೆಳಗಣ ಮೇಗಣ ತುಟಿಯೊಳು
ಸುಳಿಯಿರೆ ಅಶ್ವಕ್ಕೆ ತಂದೆ ತಾಯಿಗೆ ಮರಣಂ
ಒಳಿತಲ್ಲ ಬಲದ ತಿಗದಲಿ
ತಿಳಿವುದು ಎಡದಲ್ಲಿರಲು ಒಡೆಯಂಗೆ ಮರಣಂ ೩೩

ನಾಸಿಕೆಯ ನಡುವೆ ಮೇಲುಂ
ಭಾಸುರ ಸುಳಿಯಿರಲು ಹಯಕೆ ಕುಲನಾಶಕರಂ
ನಾಸಾಪುಟದೊಳಗಿದ್ದರೆ
ಲೇಸಾಗಿಹ ವಿತ್ತನಾಶ ಪ್ರಾಣಾಪಹರಂ ೩೪

ಕದಪುಗಳೊಳು ಅಂಡದಿ ಸುಳಿ
ಕುದುರೆಗೆ ಇರೆ ಪತಿಗೆ ಕೇಡು ಕಂಗಳನೀರುಂ
ಉದುರವ ಸ್ಥಾನದಿ ಹುಬ್ಬಿನ
ತುದಿಯಲ್ಲಿಹ ಸುಳಿ ವಿರಕ್ತಿ ಬಂಧುಕ್ಲೇಶಂ ೩೫

ದಾಡೆ ತುದಿ ಸಂದು ತೊಡೆಯಲಿ
ಕೂಡಿಯೆ ಜಘನದಲಿ ಕೇಶಕೂರ್ಚಗಳಲ್ಲೀ
ಮೂಡಿದ್ದಾ ಸುಳಿ ಕ್ಲೇಶಂ
ಮಾಡುವದಾ ಸುಳಿಯು ಪತಿಗೆ ಬಹು ಉಗ್ರವನೂ ೩೬

ನೊಸಲು ಭ್ರೂಮಧ್ಯ ಮಸ್ತಕ
ಎಸೆದಿಹ ಸುಳಿ ಕರ್ಣವನ್ನು ಹೊಂದಲು ಹಯಕೇ
ಪ್ರಸರಿತ ಕೇಶಂ ಶುಕ್ತಿಕೆ
ವಸುಧೆಯೊಳುಂ ವಾಜಿಗಲ್ಪಆಯುಷ್ಯಕರಂ ೩೭

ಗದ್ದದ ಸುಳಿ ಕುಲನಾಶನ
ಇದ್ದರೆ ಗಂಡದಲಿ ಬಹಳ ನಿತ್ರಾಣಕರಂ
ಸಿದ್ಧವು ರೆಪ್ಪೆಯಲಿರೆ ಸುಳಿ
ಬುದ್ಧಿಯು ನೆರೆ ಕೆಡಿಸಿ ಪತಿಯು ಅಳಿಸುತ್ತಿಹುದೂ ೩೮

ಕುದುರೆಗೆ ಕಣಕಾಲ್ಸುಳಿಯಿರೆ
ಒದಗಿಲಿ ಕೊಂಡವಗೆ ಕಾರಗೃಹವಾಸ ಕರಂ
ಮೃದುನಾಭಿಯಾಗೆ ವ್ಯಾಧಿಯು
ಗುದ ತಿಗ ಶಿಶ್ನದಲಿ ಬಾಲದಲ್ಲಿರೆ ಶುಭಂ ೩೯

ಕಂಕುಳ ಸುಳಿ ಯುದ್ಧಪಜಯ
ಕಿಂಕರಧ್ವನಿ ಪಗಲುಜನಿತ ವಿಪತ್ತಿತಾಂಗಂ
ಡೊಂಕುವ ನ ದೊಡ್ಡಕಿವಿಯುಂ
ಭೋಂಕನೆ ಆ ಅಶ್ವ ಕೊಳ್ಳಲಾಗದು ಗುರುವೇ ೪೦

ಅಂಡದ ಬೀಜವು ಉದ್ದವು
ಅಂಡದೊಳು ಹೆಚ್ಚು ಕಡಮೆ ರೋಮುಗಳಿರಲೂ
ಅಂಡವು ಹಿಂದಕೆ ಬಾಗಿರೆ
ಕೊಂಡವಗಾ ಕುದುರೆ ಹಾನಿದೋರದೆ ಬಿಡದೂ ೪೧

ನಾಲಿಗೆಯನು ಹೊರತೆಗೆಯಲು
ಬಾಲನ ಎಡಬಲಕೆ ವಾರೆ ಮಾಡುತ್ತಿರಲೂ
ಗಾಳಿಯಭಕ್ಷಣೆ ಮಾಡಲು
ಕೀಳಹುದಾ ಕುದುರೆಯನ್ನು ಏರಲಿ ಸಲ್ಲಂ ೪೨

ನೆಲನಿಡಿದು ಮೇಲಕೇಳ್ವದು
ಛಲದಿಂದಲೆಯೆದ್ದು ಭೂಮಿಯುದ್ದೊಡವದು ತಾಂ
ಬಲುಪುಕ್ಕ ತಿರುಗಿಬೀಳ್ವದು
ಬಲವಿಲ್ಲದ ಕುದುರೆಯ ಕೊಳಲಾಗದು ಗುರುವೇ ೪೩

ನಾಕು ಸುಜಾತಿಯ ಕುದುರೆಗೆ
ಲೋಕದಿ ವಿಖ್ಯಾತ ನಾಮ ಶ್ವೇತವು ಶೋಣಂ
ಏಕಹರಿಜ್ವಲ ಕೈರವ
ಮಾಕವಿಗಳು ಪೇಳ್ವರಯ್ಯ ಗುರುನಂದಯ್ಯಾ ೪೪

ಒಂದೊಂದು ವರ್ಣದಶ್ವಕೆ
ಬಂದಿರೆ ಕಿವಿಗಳಲಿ ಬೇರೆ ಬಣ್ಣದ ಬಗೆಯೂ
ಹೊಂದಿದ ನಾಮವು ಶ್ಯಾಮವು
ಚಂದದಿ ಇಂದೀವರಾಭತುರಗವು ನೀಲಂ ೪೫

ಅರಳಿ ಎಲೆಯಂತೆ ಪಣೆಯಲಿ
ನೆರೆ ಬಿಳಿದಿನ ವರ್ಣವಿರಲು ತಿಲಕಮೆನಿಕ್ಕುಂ
ವರಮುತ್ತುಕ ಪುಷ್ಪವರ್ಣದ
ತುರಗಕೆ ಬಂದಿಹ ನಾಮ ಕುಂಕುಮಬೋರಂ ೪೬

ತನುವಿಲಿ ಕೆಂಪುಂ ಬಿಳಿದಿರೆ
ಘನನಾಮವು ತುರಗಕಹುದು ಉಜ್ವಲಬೋರಂ
ಮಿನುಗುತಿಹ ಬಹಳವರ್ಣವು
ಘನನಾಮವು ತುರಗಕಹುದು ಗುರುನಂದೀಶಾ ೪೭

ಚರಣ ಮುಖದೊಳ್ಬಿಳಿದಿಹಾ
ತುರಗಂಗಳ ನಾಮ ಪಂಚಕಲ್ಯಾಣಿಯು ತಾಂ
ಉರ ಪುಚ್ಛ ಕೇಶವದಕಂ
ನೆರೆ ಶ್ವೇತವು ಆಗೆ ಅಷ್ಟಮಂಗಳನೆಂಬರ್ ೪೮

ಕರಿಗುದುರೆಗೆ ಪಣೆ ಪಲ್ಗಳು
ನೆರೆ ಬಿಳಿದಿರೆ ಮಲ್ಲಿಕಾಕ್ಷನೆಂಬ ಸುನಾಮಂ
ಇರೆ ದುಷ್ಟವಾದ ಸುಳಿಗಳು
ತುರಗದೊಳಾಗಷ್ಟ ಪಂಚಕಲ್ಯಾಣಿ ಶುಭಂ ೪೯

ತಿಲ ತಂಡುಲ ಸಮವರ್ಣವು
ಸಲೆ ಶೋಭಿಪ ತುರಗನಾಮಕಂ ನೀಲವದಂ
ನೆಲೆ ಬಿಳಿದು ಕೆಂಪು ಬೊಟ್ಟಿರೆ
ಗುಲಗಂಜಿಯ ಸೀಲಸಹುದು ಗುರುನಂದೀಶಾ ೫೦

ಪೇಳಿಹ ನಾಲ್ಕುಂ ವರ್ಣದಿ
ಮೇಳೈಸಿರೆ ಒಂದಕೊಂದು ನಾನಾ ಪೆಸರುಂ
ಹೇಳುವದು ಪೂರ್ವ ಶಾಸ್ತ್ರದಿ
ಭಾಳವಿಲೋಚನನೆ ಕೇಳು ಗುರುನಂದೀಶಾ ೫೧

ನೆಲನಿಡಿವ ಮೇಲಕೇಳ್ವದ
ಛಲದಿಂದಲೆ ಚಿಮ್ಮಿ ಹಿಂದೆ ಸರಿವಶ್ವವನೂ
ತಲೆಗೊಡಹಿ ಅಡ್ಡವದನದ
ಕೋಲೆಯಿಂದಲೆ ಅದರ ದುಷ್ಟತನ ಬಿಡಿಸುವದೂ ೫೨

ಕೊಂಬ ಲಕ್ಷಣ

ಕೊಳಲಿಕೆ ಹೋದಾ ಸಮಯದಿ
ಫಳಿಲನೆ ಸೂರ್ಯನನು ನೋಡಿ ಬಾಲವ ಬೀಸೇ
ಬಲ ನೋಡಿ ಲದ್ದಿಯಿಕ್ಕಲು
ನೆಲನೊದ್ದಲ್ಲಣಿಸೆ ಕುದುರೆ ಕೊಂಡೊಡೆ ಲಾಭಂ ೫೩

ಎಡನೋಡಿ ಮಯ್ಯ ತಲೆಯನು
ಕೊಡಹುತ ಅಂಗಂಗಳನ್ನು ಕಚ್ಚಲು ತನ್ನಾ
ಅಡಿಗಳ ಪಸರಿಸಿ ಕೂಗಲು
ಬಿಡದಾ ಕುದುರೆಯನು ಕೊಳ್ಳೆ ಹೊಲ್ಲೆಹವಕ್ಕುಂ ೫೪

ಬಾಲುಬ್ಬಿಸಿ ಹಲ್ಲು ಪುಡಿಯು
ನೀಲಕ್ಕೆಸೆದಿಡಲ್ಕೆ ಬೇಗ ರಣಸೂಚಕವೂ
ಸಾಲಿಡೆ ಕಣ್ಣಿಲಿ ನೀರ್ಗಳು
ಸೋಲನು ಹೇಳುವದು ಪತಿಗೆ ಆ ಹಯು ಗುರುವೇ ೫೫

ಬಲ್ಲಿದ ರಿಪುವನು ಗೆಲುವರೆ
ಹಲ್ಲಣವನು ಹಾಕಿ ತಂದು ನಿಲ್ಲಿಸೆ ಬೇಗಂ
ಉಲ್ಲಸದಿಂ ಬಲಗಾಲನು
ಸಲ್ಲಲಿತದಿ ಕೆದರೆ ಕುದುರೆ ಜಯುವಹವಕ್ಕುಂ ೫೬

ಅತಿಮಿತ್ರನು ರಣರಂಗದಿ
ಕ್ಷಿತಿಯೊಳು ಜಯುಕೀರ್ತಿ ಲಾಭ ಶೋಭಾಸ್ಪದವೂ
ಸತಿಗಿಂದಧಿಕ ಸುಖಪ್ರದ
ಪ್ರತಿಯಿಲ್ಲವು ಯಾನ ರತ್ನ ತುರಗವು ಗುರುವೇ ೫೭


ತುರಗದಿ ರಾಜ್ಯ ಪ್ರಾಪ್ತಿಯು
ತುರಗದಿ ಧನ ಧಾನ್ಯ ರಾಜ್ಯ ಕೈಸೇರುವದೂ
ತುರಗದಿ ಜಯುಲಕ್ಷ್ಮೊಲಿವಳು
ತುರಗಕ್ಕಿಂದಧಿಕವಿಲ್ಲ ಗರುನಂದೀಶಾ ೫೮

ವಿಶಿಷ್ಟ ಪದಸೂಚಿ

[ಮೊದಲನೆಯ ಅಂಕಿ ಪುಟವನ್ನು ಎರಡನೆಯ ಅಂಕಿ ಪದ್ಯವನ್ನು ಸೂಚಿಸುತ್ತದೆ]

ಯ

ರ





ಕನ್ನಡ ಅಧ್ಯಯನ ಸಂಸ್ಥೆ

ಪ್ರಾಚ್ಯಕಾವ್ಯಮಾಲೆಯ ಕೆಲವು ಪ್ರಕಟಣೆಗಳು

೧. ಪದಾರ್ಥಸಾರ (೧–೨)
೨. ಸೂಪಶಾಸ್ತ್ರ
೩. ಸೊಬಗಿನ ಸೋನೆ
೪. ಬಸವರಾಜ ಚಾರಿತ್ರ (ಸಿಂಗಿರಾಜ ಪುರಾಣ)
೫. ಸನತ್ಕುಮಾರ ಚರಿತೆ
೬. ಅರಿವಿನ ಮಾರಿತಂದೆಗಳ ವಚನಗಳು
೭. ನಳಚಂಪು
೮. ವಿಷ್ಣುಪುರಾಣಂ
೯. ಕಂಠೀರವ ನರಸರಾಜವಿಜಯ
೧೦. ಸೌಂದರ್ಯಲಹರೀ
೧೧. ಆದಿಪರ್ವ
೧೨. ರಸರತ್ನಾಕರಂ
೧೩. ಕರಸ್ಥಲ ನಾಗಲಿಂಗನ ಚರಿತ್ರೆ
೧೪. ಅನಂತನಾಥ ಪುರಾಣಂ
೧೫. ಮದನಮೋಹಿನಿಯ ಕಥೆ
೧೬. ಸೂಕ್ತಿಸುಧಾರ್ಣವಂ
೧೭. ದೀಕ್ಷಾಬೋಧೆ
೧೮. ಗುರುಭಕ್ತಚಾರಿತ್ರ
೧೯. ಹರಿಹರನ ಐದು ರಗಳೆಗಳು
೨೦. ಅಬ್ಬಲೂರು ಚರಿತೆ
೨೧. ಕುಮಾರಕಾಳಗ
೨೨. ಕೆಳದಿನೃಪ ವಿಜಯಂ
೨೩. ಉದ್ಯೋಗಸಾರ
೨೪. ಗುರುಬೋಧಾಮೃತಂ
೨೫. ವರ್ಧಮಾನ ಪುರಾಣಂ
೨೬. ಹರಿವಂಶಾಭ್ಯುದಯಂ
೨೭. ವಿರಾಟಪರ್ವ
೨೮. ಜನವಶ್ಯ
೨೯. ದ್ವಾದಶಾನುಪ್ರೇಕ್ಷೆ
೩೦. ಹಾಲಾಸ್ಯ ಪುರಾಣಂ
೩೧. ಧರ್ಮನಾಥ ಪುರಾಣಂ
೩೨. ಸಾನಂದ ಚರಿತೆ
೩೩. ಜೀವಂಧರ ಚರಿತ್ರೆ
೩೪. ಯೋಗರತ್ನಾಕರ
೩೫. ಸಾನಂದಗಣೇಶ ಸಾಂಗತ್ಯ
೩೬. ಕಲ್ಯಾಣಕೀರ್ತಿಯ ಕೃತಿಗಳು
೩೭. ಪುರಾತನರ ಚರಿತೆ
೩೮. ಅರಣ್ಯಪರ್ವ
೩೯. ಬಸವೇಶ್ವರ ಪುರಾಣದ ಕಥಾಸಾಗರ
೪೦. ಜಗನ್ನಾಥ ವಿಜಯಂ
೪೧. ರುಕ್ಮಾಂಗದ ಚರಿತ್ರೆ
೪೨. ಜಾತಕ ತಿಲಕಂ
೪೩. ಶಬ್ದಮಣಿದರ್ಪಣಂ
೪೪. ಪುಣ್ಯಾಸ್ರವ
೪೫. ನೇಮಿನಾಥ ಪುರಾಣಂ
೪೬. ಶ್ರೀಪಾಲ ಚರಿತೆ
೪೭. ಸುಜ್ಞಾನ ಚಿಂತಾಮಣಿ
೪೮. ನಿಜಲಿಂಗ ಚಿಕ್ಕಯ್ಯನ ಸಾಂಗತ್ಯ
೪೯. ದಶಾವತಾರ ಚರಿತೆ
೫೦. ಯಾದವಗಿರಿ ಮಾಹಾತ್ಮ್ಯಂ
೫೧. ನನ್ನಯ್ಯಗಳ ಚಾರಿತ್ರ
೫೨. ಸುವಿಚಾರ ಚರಿತೆ ಮತ್ತು ಜ್ಞಾನಭಾಸ್ಕರ ಚರಿತೆ
೫೩. ನನ್ನಯ್ಯ ಚಾರಿತ್ರ
೫೪. ಅನುಭವ ಮುಕುರ
೫೫. ರುಕ್ಮಾಂಗದ ಚರಿತೆ
೫೬. ಷಟ್ಸ್ಥಲ ತಿಲಕ
೫೭. ಕೋಡಗದ ಮಾರಯ್ಯನ ಚರಿತ್ರೆ
೫೮. ಚಂದ್ರಪ್ರಭ ಚರಿತೆ
೫೯. ಪಶ್ಚಿಮರಂಗಕ್ಷೇತ್ರಮಾಹಾತ್ಮ್ಯಂ ಮತ್ತು ಚಿಕ್ಕದೇವರಾಜ ವಂಶಾವಳಿ
೬೦. ವೆಂಕಟಗಿರಿಮಾಹಾತ್ಮ್ಯಂ
೬೧. ಆರಾಧ್ಯ ಚಾರಿತ್ರ

ರಕ್ಷಾಪುಟ ಮುದ್ರಣ: ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು